STERED NO. M. 1393.

ಈ ಪ್ರಂ ಬಂದ್ರಾಣಾ

ಕಂಠೀರವ

ಸಮದ್ಭೂವಿಜ್ಞಾಲೇಷು ಭಾರತಮುದ್ಭಾಗಃ ಪ್ರಶಾಸನ್ಮಹೀ
ತಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಸ್ತಸ್ತದ್ವದವಿಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ಮೋಽನ್ವಹಂ
ಯಾದ್ವಿಶ್ವಜನೀನವೃತ್ತಿಚತುರಶ್ಮ್ರೀಕಂಠಕಂಠೀರವಃ ॥

KANTEERAVA
THE ONLY KANARESE
BI-WEEKLY.

ನರರ ಕುಲಗಳೊಳಾರ್ಯವಂಶವು। ಧರೆಯು ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೈರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ | ಮಂಗಳೂರು, ೧೯೩೬ನೇ ಇಸವಿ ಜುಲಾಯಿ ತಾರೀಕು ೨೧ನೇ ಮಂಗಳವಾರ | ಸಂಚಿಕೆ ೩೩.
VOL. XVIII | MANGALORE, TUESDAY, JULY 21, 1936. | NO. 33.

ಅಮೃತಾಂಜನ

(Regd.)

ತಲೆನೋವು, ಶಿರೋನೋವು, ಉಳುಕು, ಕುತ್ತಿಗೆ, ಭುಜ, ಹಲ್ಲುನೋವು ಮೊದಲಾದ ಎಲ್ಲಾ ರೋಗಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿನು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಯಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೊ

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ.

ಮಂಗಳೂರಲ್ಲಿ ಶಾಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

(1) Rebate on yearly payment of policies.
(2) Rebate for larger assurances.
(3) Accident Risk covered on small extra premiums.
(4) Attractive Bonuses.

It pays you to represent this Company.
Wanted Agents in unrepresented parts.

APPLY TO:
KOCHIKAR BROTHERS.
Madras Branch Secretaries.

EVIDENCE OF SECURITY & STABILITY

FIGURES THAT SPEAK FOR THEMSELVES

Total Assets Rs. 80,66,600

SUMMARY of 1935 ACCOUNTS

Total Assets Over	..	Rs. 80,00,000
Life Funds Over	..	Rs. 68,00,000
Premium Income Over		Rs. 22,54,000
Interest Income	..	Rs. 3,16,000
Claims Paid		Rs. 5,75,000
Total Claims paid over		Rs, 38,50,000
Total Business in Force Over		Rs. 4,42,51,200

TOTAL BUSINESS IN FORCE Rs. 4,42,51,200

Branches at:

P. B. 337 Mount Rd. Madras.	Visveswarapuram Circle Bangalore City.	Soumyalayam Puthiyara Calicut.	Car Street Mangalore.	Udipi S. India.	Charni Rd. Bombay No. 4.

ಹೊಟ್ಟೆ ಮತ್ತು ಪಿತ್ತಕೋಶ
ಗಳ ಎಲ್ಲ ಬಗೆಯ ಬೇನೆ
ಗಳಿಗೂ ಅಲೆಂಬಿಕ್ ಫ್ರೂಟ್
ಲ್ಯಾಕ್ಸೆಟಿವ್ ಸೇವಿಸಿ.

ಫ್ರೂಟ್ ಲಾಕ್ಸೆಟಿವ್

ಪ್ರತಿದಿನವೂ ಉಪಯೋಗಿಸಿ

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.
ಮುಂಬಯಿ ಬರೂದಾ ಮದರಾಸು

ESTD:—1906.

THE CANARA BANKING CORPORATION UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed	Rs. 3,50,000—0—0
Paid up	Rs. 2,88,840—0—0
Reserve and other funds	Rs. 3,72,337—0—0
Deposits	Rs. 29,50,717—0—0.

Fixed deposit rates up to 5% p. a.

16/6/1936.

Head Office:— UDIPI.

Branches:—1. Saklaspur. 2.Udipi, 3. Coondapoor, 4. Car Street—Mangalore, 5. Shimoga, 6. Madras. 7. Bunder—Mangalore, 8. Mercara and 9. Virarajendrapet.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವ್ಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು:—

ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—**ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Pomona Spray

Here is a very useful Sprayer Agriculturists, landholders, farmers, spraying chemicals to the infected tr even to the height of 80 ft. from t ground level. It is strongly built so a to give a satisfactory service for many



years and is imported from Germany specially to meet the needs of Estate owners for spraying chemicals to the infected trees.

Price each Sprayer Rs. 33—0—0
Spray Controller ,, 7—8—0

BASEL MISSION BOOK DEPOT,
MANGALORE.

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ **"ಕಾಫಿ ಕಲ್ಲರ್"** ಸೀರೆಗಳನ್ನೇ ಉಪಯೋಗಿಸಿರಿ!
ಕಡಿಮೆ ಬೆಲೆಗೆ-ತರತರದ ಬಣ್ಣದ-ನವೂನೆವಾರು ಅಂಚಿನ-ಸೀರೆಗಳು!
ಒಮ್ಮೆ ಬಂದು ನಮ್ಮ **ಅಂಗಡಿಯನ್ನು** ಸಂದರ್ಶಿಸಿರಿ!

ಪಿ. ಎ. ಪೈ ಬ್ರದರ್ಸ—ಉಡುಪಿ.
ದಿ ಕರ್ನಾಟಕ ಡ್ಯಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್
ಏಜಂಟರು:—**ಸೂಜಿಕಾರ್ ಬ್ರದರ್ಸ್—ಮಂಗಳೂರು.**

ವಾರ್ಷಿಕ ಜ್ಯೋತಿಷಫಲ

ಒಂದು ವರ್ಷದ ತಿಂಗಳುತಿಂಗಳ ಜ್ಯೋತಿಷ ವಿವರಕ್ಕೆ ರೂ. ೩. ೧ ವರ್ಷದ ವಾರವಾರದ ವಿವರಗಳಿಗೆ ರೂ. ೧೦ ೫ ಪ್ರಶ್ನೆಗಳ ಸರಿಯಾದ ಉತ್ತರಕ್ಕೆ ರೂ. ೧. ವಿ. ಪಿ. ಆಣೆಳ. ಜಾತಕದ ಪ್ರತಿಯನ್ನಾಗಲೀ, ಜನನದ ಸಮಯ ತಾರೀಕನ್ನಾಗಲೀ, ಕಾಗದ ಒದೆಯುವ ಸಮಯ ಮತ್ತೂ ಆಂದಾಜಿನ ಪ್ರಾಯವನ್ನಾಗಲೀ ಕಳುಹಿಸಿ. ಕಾಗದಪತ್ರಗಳು ಇಂಗ್ಲಿಷಿನಲ್ಲಿಯೇ.

ಹೆನುಮಾನ್ ಜ್ಯೋತಿಷ ಆಶ್ರಮ,
ತಿರುತ್ತಣ್ಣಿ, ದ. ಇಂಡಿಯಾ.

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನ ರಸ್ತೆ,
ಮಂಗಳೂರು.
(ESTD. 1931.)

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆ ಶಾಸ್ತ್ರೀಯವಾಗಿ ಕಲಿಯಬೇಕೆನ್ನುವವರಿಗೆ ಸುಸಂದ

ಮಾಸ್ಟರ್ ಎಚ್. ನಾರಾಯಣ ರಾವ್
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್
ಉಭಯಸಂಗೀತವಿದ್ಯಾವಿಶಾರದ.

4, 21-7.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶಾರೀರಕ ಯೋಗ್ಯತೆಯು
ರಮ್ಯವಾದ ಅನುಭವವಾಗಿದೆ
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗ
ಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

GOVT. SOAP FACTORY,
BANGALORE.

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/-ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತವಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ವೋಸ್ವೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.
ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್
ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ಸಿಟಿ.

WHY WORRY?

Consult Your Insurance Problem
WITH
The Pioneer General Insurance Agency OF WEST COAST,

"KALIKA TEMPLE VIEW", CAR STREET, MANGALORE.

"TABLE XII"

The Poor Man's Asset Provision for Dependants
In Case of Premature Death.

Suits every Pocket, Investment based on most economica Basis.

ASK FOR A COPY OF THE PROSPECTUS.

THE CENTRAL
Mutual Life Assurance Society, Ltd.

INCORPORATED IN INDIA.

Your own & all the Profits are yours.

UNDER INDIAN CO.'S ACT OF 1913.

Head Office BOMBAY.

ಈ ವಾರದ ಕಥೆ:—

ನೋ ಎಡ್‌ಮಿಶನ್

(ಶಂಕರ)

ಹೇಗಾದರೂ ಮಾಡಿ ಆರನೆಯ ಸಲ ಪಟೇಲ ಗಜಪತಿ ರಾಯರು ಮೆಟ್ರಿಕ್ಯುಲೇಶನ್ನಲ್ಲಿ ಪಾಸಾದರು. ಎಷ್ಟೋ ದಿನಗಳಿಂದ ಕಟ್ಟಿಟ್ಟ ಆಸೆಯು ಪೂರೈಸಿತು. ಅವರ ಮನಸ್ಸಿನಲ್ಲಿ ಕಾಲೇಜಿಗೆ ಸೇರಿ ಮಜಾ ಮಾಡಬೇಕೆಂಬ ಅಭಿಲಾಷೆಯು ಎಂಟು ವರ್ಷಗಳಿಂದ ಬೆಳೆಯುತಿತ್ತು. ಕಾಲೇಜ್ ಜೀವನದ ಸುಖವನ್ನು ಮಿತ್ರರಿಂದ ಕೇಳಿ ಅದರ ಸುಖಸ್ವಪ್ನವನ್ನನುಭವಿಸುತ್ತಿದ್ದರು.

ಕಾಲೇಜಿಗೆ ಸೇರಲಿಕ್ಕಾಗಿ ಪ್ರಿನ್ಸಿಪಾಲರಿಗೆ ಎಪ್ಲಿಕೇಶನ್ ಕಳಿಸಿದರು. ಜೂನ್ ೨೨ಕ್ಕೆ ಇಂಟರ್‌ವ್ಯೂವಿಗೆ ಬರಬೇಕೆಂದು ಪ್ರಿನ್ಸಿಪಾಲರ ಅಪ್ಪಣೆ ಬಂತು.

ಹಳ್ಳಿಯ ಜನರಿಗೆ ಗಜಪತಿರಾಯರು ಪಟ್ಟಣದಲ್ಲಿ ಹೋಗಿ ಕೋಲೇಜಿನಲ್ಲಿ ಕಲಿಯಲಿಕ್ಕೆ ಹೋಗುವ ವಿಷಯವು ದೊಡ್ಡ ಮಹಾಯುದ್ಧದಲ್ಲಿ ಜಯಿಸಲಿಕ್ಕೆ ಹೋಗುವ ಹಾಗೆ: ಹಳ್ಳಿಯ ಒಕ್ಕಲಿಗರಿಗೆ ನಾಲ್ಕು ದಿನಗಳಿಂದ ಬೇರೆ ಸುದ್ದಿಯಿಲ್ಲ; ತಮ್ಮ ಧನಿಯ ಮಗ ಕೋಲೇಜಿಗೆ ಹೋಗುವುದು, ಕಲಿಯುವುದು, ದೊಡ್ಡ ಕೆಲಸ ಮಾಡಿ, ದೊರೆಟೊಪ್ಪಿಯಿಟ್ಟು ತಮ್ಮನ್ನು ಕಾಣಲಿಕ್ಕೆ ಬರುವುದು, ಇದೇ ಸುದ್ದಿ. ಕೆಲವರು ಅವರು ತಹಶೀಲುದಾರರಾಗುತ್ತಾರೆಂದೂ ಮತ್ತೆ ಕೆಲವರು ಅವರು ಸದ್ಯವಿೂನರಾಗುತ್ತಾರೆಂದೂ ಒಬ್ಬೊಬ್ಬರು ಒಂದೊಂದು ಕೆಲಸವನ್ನು ಕಟ್ಟುತ್ತಿದ್ದರು. ಏನಾದರೊಂದು ಹುದ್ದೆ ದೊರಕದಿದ್ದರೆ ಅಷ್ಟು ದೂರದ ಮಂಗಳೂರಿಗೆ ರಾಯರು ಕಲಿಯಲಿಕ್ಕೆ ಹೋಗುವುದೇಕೆ? ತೋಟದ ಕೆಲಸ ಮಾಡಬಾರದೋ?

ರಾಯರು ಮಂಗಳೂರಿಗೆ ಹೊರಡುವ ಸನ್ನಾಹದಲ್ಲಿದ್ದರು. ಎರಡು ಆಳುಗಳಿಗೆ ಮೂರು ದಿನದಿಂದ ಬಿಡುವಿಲ್ಲ. ವಸ್ತ್ರಗಳನ್ನು ಬಿಡಿಸುವುದು, ಮಡಿಸುವುದು, ಪೆಟ್ಟಿಗೆಯಲ್ಲಿಡುವುದು, ತೆಗೆಯುವುದು, ಚಾಪೆ ಕಟ್ಟುವುದು ಬಿಚ್ಚುವುದು ಇಷ್ಟೇ ಕೆಲಸ.

ಪೇಟೆಯಿಂದ ಹೊಸ ಬೂಟುಗಳು ಬಂದುವು. ಹೊಸ ಕೋಟು, ಹೊಸ ಟೋಪಿ, ಹೊಸ ವಸ್ತ್ರ. ಎಲ್ಲ ಹೊಸತು. ಶೇವಿಂಗ್ ಸೆಟ್ಟು, ಕನ್ನಡಿ, ಬೂಟ್ ಪಾಲಿಶ್, ಕ್ರೀಮ್ ಎಲ್ಲಾ ತಯಾರಾಯಿತು. ರಾಯರು 'ಅಪ್-ಟು-ಡೇಟ್' ಆದರು.

ಜೂನ್ ೨೦ನೇ ತಾರೀಕಿಗೆ ರಾಯರು ಎತ್ತಿನ ಗಾಡಿ ಹತ್ತಿ ಅಜ್ಜಿ ಕಟ್ಟಿಕೊಟ್ಟ ಚಕ್ಕುಲಿಯ ಕಟ್ಟಿನೊಂದಿಗೆ ರೈಲ್ವೇ ಸ್ಟೇಷನಿಗೆ ಬಂದರು. ಹಿಂದೆ ಮುಂದೆ ನಾಲ್ಕಾರು ಆಳುಗಳು ಸ್ಟೇಷನ್ ವರೆಗೂ ಬಂದಿದ್ದರು. ಆ ಹಳ್ಳಿಯ ಸ್ಟೇಷನಿನಲ್ಲಿ ನಮ್ಮ ರಾಯರು ಮದುಮಗನಂತೆ ಅಲಂಕಾರದಿಂದ ಮೆರೆಯುತ್ತಿದ್ದರು. ಪ್ರಯಾಣ ಕಾಲದಲ್ಲಿ ನಡೆದ ಸಂಗತಿಗಳನ್ನು ವಾಚಕರೇ ಊಹಿಸಿಕೊಳ್ಳಬಹುದು. ರಾಯರು ಸುಖವಾಗಿ ಮಂಗಳೂರಿಗೆ ತಲಪಿ ಯಾವ ತೊಂದರೆಯೂ ಇಲ್ಲದೆ ಕದ್ರಿಯಲ್ಲಿರುವ ತನ್ನ ದೂರದ ಸಂಬಂಧಿಕರ ಮನೆಗೆ ಮುಟ್ಟಿದರು.

ಕಾಲೇಜಿನಲ್ಲಿ ಆಗಿನ ಪ್ರಿನ್ಸಿಪಾಲರು ಬಿಳಿ ಮನುಷ್ಯರು, ದೊರೆಗಳು. ಈಗಿನಂತೆ ಕಪ್ಪು ದೊರೆಗಳಲ್ಲ. ರಾಯರು ದೊರೆಗಳ ಭೇಟಿ ಮಾಡುವುದೆಂದರೆ ಅದೊಂದು ಘಟನೆಯೇ, ಅವರು ಬಿಳಿ ದೊರೆಗಳನ್ನು ಈ ಮೊದಲು ನೋಡಿಲ್ಲವೆಂದಲ್ಲ, ತಮ್ಮ ಹಳ್ಳಿಗೆ ಫೋರೇಷ್ಟು ಆಫೀಸರರಾಗಿ ಬಂದ ಚಟ್ಟೆಗಾರರನ್ನೆಷ್ಟೋ ಮುಂದಿಯನ್ನು ದೂರದಿಂದ ನೋಡಿದ್ದರು.

(ರಾಯರು ಮೆಟ್ರಿಕ್ಕಿನಲ್ಲಿ ಪಾಸಾದುದು ಹೇಗೆಂದು ಹೇಳಬೇಕಾದುದಿಲ್ಲ, ಅದು ದೊಡ್ಡ ಮನುಷ್ಯರ ದರ್ಬಾರು.)

ಈಗ ರಾಯರು ತಾನು ಪ್ರಿನ್ಸಿಪಾಲರನ್ನು ಯಾವ ರೀತಿಯಿಂದ ಕಾಣಬೇಕು? ಎಲ್ಲಿಯಾದರೂ ಪ್ರಿನ್ಸಿಪಾಲರ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸದಿದ್ದರೆ ಏನಾದೀತು? ಎಂಬ ಯೋಚನೆಯಲ್ಲಿಯೇ ಮುಳುಗಿದರು. ಅಂದು ೨೧ನೇ ತಾರೀಕು ಯೋಚನೆಯಲ್ಲೇ ಕಳೆಯಿತು.

೨೨ನೇ ತಾರೀಕಿನ ದಿನಬೆಳಗಾತ ನಾಲ್ಕು ಗಂಟೆಗೆ ಸರಿಯಾಗಿ ಎಲ್ಲಾವು ಹೊಡೆಯಲು ರಾಯರು ಹಾಸಿಗೆ ಮಡಚಿದರು. ಇಂದಿನ ಮಹಾಸಂಕಟದಿಂದ ಪಾರಾಗಿಸು ದೇವರೇ ಎಂದು ಪ್ರಾರ್ಥಿಸಿದರು. ಇದು ಆ ಮೆಟ್ರಿಕ್ಕು ಪರೀಕ್ಷೆಗಿಂತಲೂ ಕಠಿಣ ಗಂಡಾಂತರ.

ಏಳು ಗಂಟೆಗೆ ರಾಯರ ಕ್ಷೌರ ಸ್ನಾನ ಕಾಫಿ ಎಲ್ಲಾ ತೀರಿ, ಬೂಟ್ಸಿಗೆ ಪಾಲಿಶ್ ಮಾಡಿ, ಇಸ್ತ್ರಿ ಮಾಡಿದ ಕೋಟು ಹಾಕಿ, ಕ್ಯಾಪು ಬಾಚಿ ರಾಯರು ಹೊರಡಲು ಸಿದ್ಧರಾದರು. ಆಳು ಹೋಗಿ ಕುದುರೆಗಾಡಿ ತಂದನು. ಮನೆಯ ಯಜಮಾನರು ಇಷ್ಟು ಬೇಗನೆ ಕಾಲೇಜು ಬಾಗಿಲು ತೆರೆಯುವುದಿಲ್ಲ, ಸುಮಾರು ಒಂಬತ್ತುವರೆಗೆ ಹೋದರೆ ಸಾಕು' ಎಂದ ಮಾತು ನಮ್ಮ ರಾಯರ ಕಿವಿವರೆಗೆ ಹೋಗಲೇ ಇಲ್ಲ.

ಮನೆಯ ಯಜಮಾನರು ಮತ್ತೊಮ್ಮೆ 'ಇಷ್ಟು ಬೇಗನೆ ಕಾಲೇಜಿನ ಬಾಗಲು ತೆಗೆಯುವುದಿಲ್ಲ. ಸ್ವಲ್ಪ ತಡೆದು ಹೋಗಬಹುದೆ'ಂದರು. ನಮ್ಮ ಗಜಪತಿರಾಯರು ದೊಡ್ಡ ಬುದ್ಧಿವಂತರಂತೆ 'ಇಂತಹ ಮಹತ್ವದ ಕಾರ್ಯಗಳಲ್ಲಿ ಅದಷ್ಟು ಜಾಗ್ರತೆಯಿಂದಿರಬೇಕೆಂದು ನನಗೆ ಗೊತ್ತಿದೆ'ಯೆಂದು ಗಾಡಿ ಹತ್ತಿದರು. ೪ ಗಂಟೆಗೆ ಗಾಡಿಯು ಗವರ್ನ್‌ಮೆಂಟ್ ಕಾಲೇಜಿನ ಕಂಪೌಂಡಿನ ಸಮೀಪಕ್ಕೆ ಮುಟ್ಟಿತು. ರಾಯರು ಗಾಡಿಯಿಂದಿಳಿದು ಕಂಪೌಂಡಿನ ಒಳ ಹೋದರು. ರಾಯರ ಎದೆಗುಂಡಿಗೆಯು ಹೊಡೆತವು ಮಿತಿಮೀರಿದರೂ ಕಾಲ ಹೆಜ್ಜೆಯು ಮಿತಿಮೀರಲಿಲ್ಲ. ರಾಯರ ಮೈ ಬೆವರಿತು, ಕಾಲು ನಡುಗಿತು. ರಾಯರು ಮುಂದುವರಿದರು. ಕಾಲೇಜಿನ ಯಾವ ಭಾಗದಲ್ಲಿಯೂ ಮನುಷ್ಯಸಂಚಾರವಿಲ್ಲ! ಸ್ವಲ್ಪ ಹೊತ್ತಾಗುವಾಗ ಬಿಳಿ ಉಡುಪು ಧರಿಸಿದ ನಡು ಪ್ರಾಯದ ಮನುಷ್ಯನೊಬ್ಬನು ಕಣ್ಣಿಗೆ ಬಿದ್ದನು. ರಾಯರು ಬಹಳ ನಮ್ರತೆಯಿಂದ ಆತನಿಗೆ ವಂದಿಸಿ ಕಾಲೇಜಿನ ಆಫೀಸ್ ರೂಮಿನ ಪತ್ತೆ ಕೇಳಿದರು. ಆ ಮನುಷ್ಯನಿಗೆ ಬಹಳ ಸಂತೋಷವಾಯಿತು. ಅವನು ಇಷ್ಟರ ವರೆಗೆ ವಿದ್ಯಾರ್ಥಿಗಳಿಗೆ ನಮಸ್ಕರಿಸುತ್ತಿದ್ದನೆ ಹೊರತು ವಿದ್ಯಾರ್ಥಿಗಳಿಂದ ನಮಸ್ಕಾರ ಹೊಂದಿರಲಿಲ್ಲ. ರಾಯರ ವರ್ತನವನ್ನು ನೋಡಿದ ಪೇದೆಗೆ ಸ್ವಲ್ಪ ತಮಾಷೆ ಕಂಡಿತು. ಅದಕ್ಕಾಗಿ ಅವನು ನಕ್ಕದ್ದು. ರಾಯರಿಗೆ ನೆಗಾಡಿದ್ದ ಕಾರಣ ಗೊತ್ತಾಗಲಿಲ್ಲ.

ರಾಯರು ಪೇದೆ ಹೇಳಿದಂತೆ ಆಫೀಸನ್ನು ಕಂಡರು. ಆದರೆ! ಏನು? ತನ್ನ ಆಶೆಯು ಹೊಯಿಗೆಯಲ್ಲಿ ಬರೆದು ವಸ್ತ್ರದಲ್ಲಿ ಕಟ್ಟಿದಂತಾಯಿತು. ಆ ಕೋಣೆಯ ಮೇಲೆ Office ಎಂದು ಬರೆದಿತ್ತು. ಅದು ನಿಜವಾಗಿಯೂ ಆಫೀಸ್ ರೂಮು ಹೌದು, ಆದರೆ ಅದರ ಸಮೀಪದಲ್ಲೇ ದೊಡ್ಡ ಅಕ್ಷರಗಳಲ್ಲಿ 'No Admission' ಎಂದೂ ಬರೆದಿತ್ತು. ರಾಯರು ತನಗೆ ಕಾಲೇಜಿನಲ್ಲಿ ಪ್ರವೇಶವಿಲ್ಲವೆಂದು ತಿಳಿದರು. ಇಲ್ಲಿವರೆಗೆ ಬಂದುದು ವ್ಯರ್ಥವಾಯಿತು. 'ಪ್ರಿನ್ಸಿಪಾಲರು ಮೋಸಕೊಟ್ಟರು. ಇಂಗ್ರೇಜ ಮನುಷ್ಯರು ಯಾವಾಗಲೂ ಹೀಗೆ ಮೋಸಮಾಡುವುದರಿಂದಲೇ ಗಾಂಧಿಯವರು ಸ್ವರಾಜ್ಯ ಬೇಕೆನ್ನುತ್ತಾರೆ. ಪ್ರವೇಶವಿಲ್ಲವೆಂತಾದರೆ ತಿಳಿಸಬಾರದಿತ್ತೊ? ಹೀಗೆ ಮೋಸಕೊಡಬೇಕೋ? ಖರ್ಚೆಷ್ಟಾಯಿತು! ಎಷ್ಟು ಸಮಯ ಹಾಳು! ಲೋಕವೇ ಹೀಗೆ. ಯಾವಾಗಲೂ ಮೋಸ!' ಎಂದು ಮೊದಲಾಗಿ ರಾಯರ ಮುಸ್ಸಿಸ್ಯೆದಲ್ಲಿ ನಿರಾಶಾಸೂಚಕ ತರಂಗಗಳೆದ್ದುವು.

ರಾಯರ ಆಕಾಶಗೋಪುರವು ಜರಿಯಿತು. ಮುಖವನ್ನು ಸುಟ್ಟ ಬದನೆಕಾಯಂತೆ ಮಾಡಿಕೊಂಡು ರಾಯರು ತಾನಿಳಿದಿದ್ದ ಮನೆಗೆ ಬಂದರು. ರಾಯರ ಮುಖದ ಉದಾಸೀನವನ್ನು ನೋಡಿ ಮನೆಯವರು 'ಇವನಿಗೇನಾಯಿತು! ಇವನಿಷ್ಟು ಬೇಗನೇ ಕಾಲೇಜಿನಿಂದ ಬಂದುದೇಕೆ?' ಎಂದು ಆಶ್ಚರ್ಯಪಟ್ಟರು.

ಗಜಪತಿರಾಯರು ಅದೇ ದಿನ ಊರಿಗೆ ಹೊರಟರು. ಮನೆಗೆ ಬಂದ ಮೂರನೆ ದಿನ ಕಾಲೇಜಿನಿಂದ ಒಂದು ಕಾರ್ಡು ಬಂತು. ಅದರಲ್ಲಿ 'ರಾಯರು ಇಂಟರ್‌ವ್ಯೂವಿಗೆ ಬಾರದ್ದರಿಂದ ಪ್ರತ್ಯೇಕಿಸಿಟ್ಟ ಸೀಟನ್ನು ಬೇರೆಯವರಿಗೆ ಕೊಡಲಾಯಿತು' ಎಂದು ಬರೆದಿತ್ತು.

INSURE WITH
CONFIDENCE
IN
INDIA
EQUITABLE
THE BEST
Life Office of its Age.
(Estd: 1908).
INDIA EQUITABLE INSURANCE CO.
LTD. CALCUTTA.

ಅತ್ಯಲ್ಪ ಬೆಲೆ — The TWIN — ಅಮಂದ ಆನಂದ

ಅಸೇತುಹಿಮಾಚಲ ಪರ್ಯಂತ ಅತ್ಯಲ್ಪ ಬೆಲೆಗೆ ಅಮಂದಾನಂದವನ್ನು ಕೊಡುವ "ಟ್ವಿನ್" ಗ್ರಾಮಫೋನ್ ಮತ್ತು "ಟ್ವಿನ್" ರಿಕಾರ್ಡುಗಳನ್ನೇ ಕೊಳ್ಳಿರಿ!

ಕೆಳಗೆ ಕಾಣಬರುವ ನಾಟಕ ಸೆಟ್ಟುಗಳನ್ನು ಈ "ರಾಜಾ" ಟ್ರಾನ್ಸ್‌ಪೋರ್ಟಬಲ್ ಮಾಡಲ್‌ನಲ್ಲಿ ಕೇಳಿ, ನಿಮ್ಮ ಗೃಹಗಳಲ್ಲಿ ನಿರಂತರ ಸಂಗೀತಶ್ರವಣವನ್ನು ಮಾಡಿರಿ!



"ರಾಜಾ" ಟ್ರಾನ್ಸ್‌ಪೋರ್ಟಬಲ್
ಬೆಲೆ ರೂ. 120.

ಪೌರಾಣಿಕ	ಸೆಟ್ಟು ನಂ.	ವೀರ ಅಭಿಮನ್ಯು	580	ಸಾಂಘಿಕ	ಸೆಟ್ಟು ನಂ.
ಕೃಷ್ಣ ಪಾರಿಜಾತ	524	ಗಯಚರಿತ್ರೆ	591	ವಿಚಿತ್ರ ಶಾಸನ	536
ಪಾರ್ವತಿ ಸ್ವಯಂವರ	550	ಭೀಷ್ಮ ಪ್ರತಿಜ್ಞೆ	596	ಭಕ್ತಿರಸಪ್ರಧಾನ	
ದ್ರೌಪದಿ ಸ್ವಯಂವರ	566	ಚಾರಿತ್ರಿಕ		ಭಕ್ತ ತುಕಾರಾಮ	527
ರುಕ್ಮಾಂಗದ	568	'ಟಿಪ್ಪು ಸುಲ್ತಾನ್'		ದಾವಾಜಿ ಪಂತ್	555
ದಾನಶೂರ ಕರ್ಣ	575	ಜೀವಿತ ಚರಿತ್ರೆ	592	ತುಲಸೀದಾಸ್	557

ಇವುಗಳನ್ನೀಗಲೇ ನಿಮ್ಮ ವ್ಯಾಪಾರಿಗಳಲ್ಲಿ ಕೊಂಡು ಕೇಳ್ಳಿರಿ!

*

ದಿ "ಟ್ವಿನ್" ರಿಕಾರ್ಡು ಕಂಪೆನಿ, ಲಿಮಿಟೆಡ್,
45, ಸೌತ್ ಪೆರೇಡ್, ಬೆಂಗಳೂರು.

ದೊರೆಯುವ ಸ್ಥಳ:—
ಎಮ್. ಎಮ್. ಶ್ಯಾನುಭಾಗ ಎಂಡ್ ಸನ್, ಮಂಗಳೂರು.

ಮೊಡರ್ನ್ ಡ್ಯಾಮಂಡ್ಸ್.

(ನಿಜವಾದ ವಜ್ರಗಳ ಬದಲಿಗೆ ಇವೇ ಯೋಗ್ಯ ಸಾಧನಗಳು)

MODERN DIAMONDS

ಮೆಸರ್ಸ್ ಶೆಲ್ಡ್ರಿಕ್ ಬ್ರದರ್ಸ್

ವಜ್ರ ವ್ಯಾಪಾರಿಗಳು, ಆಭರಣ ತಯಾರಿಸುವವರು, ಇತ್ಯಾದಿ

ಮದ್ರಾಸು ಮತ್ತು ಲಂಡನ್—ಇವರ ಅಭಿಪ್ರಾಯ.

"ಮೊಡರ್ನ್ ವಜ್ರಗಳು" ನಾನು ಕಂಡ ಸಿಂತೆಟಿಕ್ ಅಥವಾ ಪುನಃ ನಿರ್ಮಿಸಿದ ವಜ್ರಗಳಿಗಿಂತಲೂ ಬಹಳ ಮುಂದುವರಿದಿವುಗಳೆಂದು ನಾನು ಭಾವಿಸುತ್ತೇನೆ. ಇವುಗಳು ನಿಜವಾದ ವಜ್ರಗಳೊಡನೆ ಕೆತ್ತನೆಯಲ್ಲಿಯೂ ಪ್ರಕಾಶದಲ್ಲಿಯೂ ಯೋಗ್ಯವಾಗಿ ಸರಿಹೋಲುತ್ತಿದ್ದು ನಿಜವಾದ ವಜ್ರಗಳ ಬದಲಿಗೆ ಉತ್ತಮ ಸಾಧನವಾಗಿ ಪರಿಣಮಿಸಬೇಕಾಗಿದೆ.

ಸಂಪೂರ್ಣ ಚಿತ್ರಸಹಿತಿಯು ಅಪೇಕ್ಷಿಸಿದಲ್ಲಿ ಉಚಿತವಾಗಿ ಕಳುಹಿಸಲ್ಪಡುವದು.

C. C. Acharyulu & Son,
High Class Jewellers,
Post Box No. 543, Park Town, Madras.

ಒರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ
ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874. ಹೆಡ್ ಆಫೀಸು—ಬೊಂಬಯಿ.

1935ನೇ ಇಸವಿಯ ವರದಿಯ ಸಾರಾಂಶ.

ಹೊರಡಿಸಲಾದ ಹೊಸ ವಿಮಾಪತ್ರಗಳು	ರೂ.	8,89,89,149
ವಾರ್ಷಿಕ ಉತ್ಪನ್ನ . .	,,	3,49,16,412
ಜ್ಯಾರಿಯಲ್ಲಿರುವ ವಿಮಾಪತ್ರಗಳು	,,	59,25,32,038
ಒಟ್ಟಿಗೆ ತೆತ್ತ 'ಕ್ಲೈಮು'ಗಳು	,,	17,43,21,855
ಫಂಡ್ ಹೆಚ್ಚಿದ ಮೊತ್ತ	,,	17,01,62,491

ಇಂಡಿಯದ ಪ್ರಾಮುಖ್ಯ ಜೀವವಿಮಾ ಕಾರ್ಯಾಲಯವಾದ

ಒರಿಯಂಟಲ್

ಸಂಸ್ಥೆಯ ಜನಪ್ರೀತಿಯನ್ನೂ, ಅದರ ದೃಢನಾದ ಸ್ಥಿತಿಯನ್ನೂ ಈ ಮೇಲಿನ ಅಂಕೆಸಂಖ್ಯೆಗಳು ಸ್ಪಷ್ಟೋಕ್ತಿಗಳಿಂದ ವಿಶದಗೊಳಿಸುತ್ತಿವೆ.

ಜನಪ್ರೀಯವಾದ ಮತ್ತೂ ಅಭಿನೃದ್ಧಿ ಪಡೆಯುತ್ತಿರುವ

ಭಾರತೀಯ ಜೀವವಿಮಾ ಕಾರ್ಯಾಲಯದಲ್ಲಿ

ನಿಮ್ಮ ಜೀವವನ್ನು ವಿಮೆ ಇಳಿಸಲು

ವಿಳಂಬ ಮಾಡಬೇಡಿ.

ಹೆಚ್ಚಿನ ವಿವರಕ್ಕೆ ಬರೆಯಿರಿ:—

ಶಾಖಾ ಕಾರ್ಯದರ್ಶಿಗಳು, ಒರಿಯಂಟಲ್ ಲ್ಯಾಫ್ ಆಫೀಸ್, ಒರಿಯಂಟಲ್ ಬಿಲ್ಡಿಂಗ್ಸ್, ಬೆಂಗಳೂರು ಇವರಿಗೆ

ಅಥವಾ ಕಂಪೆನಿಯ ಈ ಕೆಳಗಿನ ಯಾವುದಾದರೊಂದು ಕಾರ್ಯಾಲಯಕ್ಕೆ

ಆಗ್ರಾ	ಕೊಲೊಂಬೊ	ಲಾಹೋರ್	ಪೇಶಾವರ
ಅಜ್ಮೀರ್	ಢಾಕ್ಕಾ	ಲಕ್ನೋ	ಪೂನಾ
ಅಹಮ್ಮದಾಬಾದ್	ಢಿಲ್ಲಿ	ಮದ್ರಾಸ್	ರಾಯಿಪುರ
ಅಲ್ಲಹಾಬಾದ್	ಗೌಹತಿ	ಮ್ಯಾಂಡಲೇ	ರಾಜಶಾಹಿ
ಅಂಬಾಲ	ಗುಂಟೂರು	ಮಧುರಾ	ರಾಂಚಿ
ಅಮೃತಸರ	ಜಲಗಾಂ	ಮಡಿಕೇರಿ	ರಂಗೂನು
ಬಾರೇಲಿ	ಜಲಪೈಗುರಿ	ಮೊಂಬಾಸಾ	ರಾವಲ್ಪಿಂಡಿ
ಬಳ್ಳಾರಿ	ಜೋಧ್ಪುರ	ಮುಲ್ತಾನ್	ಸಿಂಗಾಪೂರ್
ಕಲ್ಕತ್ತಾ	ಜಬಲ್‌ಪೂರ್	ಮೈಸೂರು	ಸಕ್ಕೂರ್
ಕಲ್ಲಿಕೋಟೆ	ಕರಾಚಿ	ನಾಗ್ಪುರ	ತ್ರಿಚಿನಾಪಳ್ಳಿ
ಕೊಯಂಬತ್ತೂರು	ಕೌಲಾಲಂಪೂರ್	ಪಾಟ್ನಾ	ತ್ರಿವೆಂಡ್ರಮ್
			ವಿಶಾಖಪಟ್ಟಣ.

ಡಿ. ವಾಸ್ ಎಂಡ್ ಸನ್ಸ್, ಏಜಂಟ್ಸ್,
ಮಂಗಳೂರು, ದ. ಕ.



ಸ್ವಂತವಾದ ತನ್ನದೊಂದು ಮಗುವಿಗಾಗಿ ಆಕೆ ಹಲುಬ್ಬುತಾಳೆ.

ಆಕೆಗಿದು ಎಷ್ಟು ಸಂತೋಷಕರವಾದ ನೋಟ! ಆಡುವ ಮಕ್ಕಳ ಈ ಚಿಕ್ಕ ಗುಂಪು!

ಇವುಗಳ ನಡುವೆ ತನ್ನ ಸ್ವಂತ ಮಗುವನ್ನು ಆಕೆ ಕಾಣುತ್ತಿದ್ದಾಳೆಯೇ? ಇಲ್ಲ, ದುರದೃಷ್ಟವಶದಿಂದ ಇಲ್ಲ, ಏಕೆಂದರೆ ಆಕೆಗೊಂದು ಮಗುವಿನ ಸೌಭಾಗ್ಯವಿನ್ನೂ ಇಲ್ಲ. ಆಕೆಯ ಬಂಜೆತನದ ಸ್ಥಿತಿಯು ಬಹುಕಾಲದಿಂದ ಅಸಡ್ಡೆ ಮಾಡಿರುವ ಯಾವುದೋ ಗರ್ಭಾಶಯದ ದೋಷದಿಂದಲೇ ಉಂಟಾಗಿರಬೇಕು. ಹೇಗೊ, ಆಕೆ ನಿಜವಾಗಿಯೂ 'ಲೋಧ್ರ'ದಲ್ಲಿ ವಿಶ್ವಾಸವಿರಿಸಬಲ್ಲವಳಾದುದರಿಂದ, ನಿರಾಶಳಾಗಬೇಕಾದುದಿಲ್ಲ. 'ಲೋಧ್ರ'ವು ಆಕೆಯ ಆರೋಗ್ಯವನ್ನು ಕಾಪಾಡಿ, ಸಂತಾನಸೌಭಾಗ್ಯವನ್ನಾಕೆಗೆ ನೀಡಬಲ್ಲುದು.

4, 7. 7.

ಎಲ್ಲ ಕೆಮಿಸ್ಟರಲ್ಲಿಯೂ ದೊರಕುತ್ತದೆ.



ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾತಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಜೋಢ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡ ಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜಿ. ಎಸ್. ಮುರಾತೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ-ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚಿರಬೇಕೆಂದು ನಾನು ಭಾವಿಸುತ್ತೇನೆ...ಅದುಹಿರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,
43, Forbes Street, Fort, BOMBAY. **Raikhad, AHMEDABAD.**

ಅಥವಾ ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ **ದ್ರಾಕ್ಷಾಮೃತ** ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರಹಿಂಡಿ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಿಗೆ ಉರುಪು ಬೀಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅಸ್ಪಷ್ಟವಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಪದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರ ತಿಳಿದೀತು.

ಪ್ರಮಾಣ:—ಸಸಿಕಸ್ಸಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೪॥ ರೂ. ೧ ಡಜನ್ ಬಾ. ಬೆಲೆ ೧೩ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಪ್ಪು ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು-ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ.

ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ-ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊಅರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

ಪಾಶ್ಚಿವಾತ್ಯ ಮಹಾಪುರುಷರು:—೭.

ವಾನ್ ಹಿಂಡನ್‌ಬರ್ಗ್

(ಶ್ರೀ. ಆರ್. ಎಸ್. ಆರಾಧ್ಯ)

ವಾನ್ ಹಿಂಡನ್‌ಬರ್ಗ್‌ನು ೧೮೪೭ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಪೋಸೆನ್ ಎಂಬಲ್ಲಿ ಹುಟ್ಟಿದನು. ಮುಳುಗಿ ಹೋಗಿದ್ದ ಜರ್ಮನಿಯನ್ನು ಹಿಡಿದೆತ್ತಿ ಆಧುನಿಕ ರಾಷ್ಟ್ರಗಳಲ್ಲಿ ಜರ್ಮನಿಗೆ ಸಮಾನಸ್ಥಾನ ದೊರೆಯುವಂತೆ ಹೆಣಗಾಡಿದವರಲ್ಲಿ ಹಿಂಡನ್‌ಬರ್ಗ್‌ನು ಅಗ್ರಗಣ್ಯ. ಜರ್ಮನಿಯನ್ನು ಪುನರುದ್ಧಾರ ಮಾಡಲು ಬದ್ಧಕಂಕಣನಾಗಿ ನಿಂತು ಸರ್ವಸ್ವವನ್ನೂ ಧಾರೆ ಎರೆದ ಮಹಾನುಭಾವ.

ಸುಮಾರು ಇವನ ಹನ್ನೆರಡನೆಯ ವಯಸ್ಸಿನಲ್ಲಿ ಸೈನಿಕ ಶಿಕ್ಷಣಕ್ಕೆ ಮೊದಲುಮಾಡಿದನು. ಬಹಳ ಸಿಸ್ತಿನಿಂದಿರಬೇಕೆಂಬ ಆಶೆಯಿಂದ ಇವನು ವಿಶ್ವವಿದ್ಯಾನಿಲಯಕ್ಕೆ ಸೇರಿದ ೬—೭ ವರ್ಷ ದಲ್ಲಿಯೇ ಅಂದರೆ[illegible]ರಲ್ಲಿ ವಿದ್ಯಾಭ್ಯಾಸವನ್ನು ನಿಲ್ಲಿಸಿ ಅದೇ ವರ್ಷ ಆಸ್ಟ್ರಿಯಾದವರೊಡನೆ ಮಾಡುತ್ತಿದ್ದ ಯುದ್ಧಕ್ಕೆ ಸೇರಿದನು. ಇವನ ಶಕ್ತಿಸಾಹಸಗಳಿಂದ ಆ ಯುದ್ಧದಲ್ಲಿಯೇ ಲೆಫ್ಟಿನೆಂಟ್ ಪದವಿಗೇರಿದನು. ತಿರುಗಿ ೧೮೭೦ರಲ್ಲಿ ಜರ್ಮನಿಗೂ ಫ್ರಾನ್ಸಿಗೂ ನಡೆದ ದೊಡ್ಡ ಯುದ್ಧದಲ್ಲಿ ಬಹಳ ಚತುರತೆಯಿಂದ ಕಾದಾಡಿದನು. ಇದರಿಂದ ಹಿಂಡನ್‌ಬರ್ಗ್‌ನಿಗೆ ೧೮೮೪ರಲ್ಲಿ ಯುದ್ಧ ಸಚಿವನಾಗಲೂ ಮತ್ತು ಟೆರಿಟೋರಿಯಲ್ ಸೇನೆಗಳ ಪ್ರಧಾನನಾಗಲೂ ಅವಕಾಶವಾಯಿತು. ಯಾವ ಆತಂಕವೂ ಇಲ್ಲದೆ ೧೮೮೫ರಲ್ಲಿ ಸೇನಾಧಿಪತಿಯಾದನು.

ಆಗ್ಯೆ ಕೈಸರ್ ವಿಲಿಯಂನ ಅಧಿಕಾರವು ನಡೆಯುತ್ತಿದ್ದು ಆತನಿಗೂ ಮತ್ತೆ ಆತನ ಮಂತ್ರಿಗಳಿಗೂ ಅನೇಕ ವಿಷಯಗಳಲ್ಲಿ ವಾಗ್ವಾದಗಳು ನಡೆಯುತ್ತಿದ್ದುವು. ಸೇನಾಸಂಬಂಧದಲ್ಲಿ ಕೈಸರನಿಗೂ ಹಿಂಡನ್‌ಬರ್ಗ್‌ನಿಗೂ ಯಾವಾಗಲೂ ಮತಭೇಧವೇ ಇದ್ದುದರಿಂದ ತನ್ನ ೬೪ನೆ ವಯಸ್ಸಿನಲ್ಲಿ ಅಂದರೆ ೧೯೧೧ರಲ್ಲಿ ಕೆಲಸದಿಂದ ನಿವೃತ್ತನಾದನು. ಆ ಕಾಲದಲ್ಲಿ ಅವನಾಡಿದ ಮಾತುಗಳನ್ನು ಕೇಳಿದರೆ ಎಷ್ಟು ವಿಶಾಲಹೃದಯನೆಂಬುದು ತಿಳಿಯುತ್ತಿದೆ. 'ನಾನು ಸೈನ್ಯಾಧಿಕಾರಿಯಾಗಿ ಎಷ್ಟು ಮರ್ಯಾದೆ ಪಡೆಯಬಲ್ಲೆನೋ ಅದಕ್ಕಿಂತಲೂ ಹೆಚ್ಚಾದ ಮರ್ಯಾದೆಯನ್ನು ಪಡೆದಿದ್ದೇನೆ. ಇನ್ನು ಮೇಲೆ ಯುದ್ಧಗಳೇನೂ ನಡೆಯುವಂತಿಲ್ಲ. ಆದ್ದರಿಂದ ಮುಂದುವರಿಯಲು ತ್ವರೆಪಡುತ್ತಿರುವ ತರುಣರಿಗೆ ನನ್ನ ಸ್ಥಾನವನ್ನು ಬಿಟ್ಟುಕೊಟ್ಟಿರುತ್ತೇನೆ' ಎಂದು ಒಮ್ಮೆ ಹೇಳಿರುತ್ತಾನೆ.

ಹಿಂಡನ್‌ಬರ್ಗ್‌ನು ಹೇಳಿದಂತೆ ಯುದ್ಧವಿಲ್ಲದಂತಾಗಲಿಲ್ಲ. ೧೯೧೪ರಲ್ಲಿ ಮಹಾಯುದ್ಧ ಪ್ರಾರಂಭವಾಯಿತು. ಆಗ ಹಿಂಡನ್‌ಬರ್ಗ್‌ನು ತಾನೂ ಕೂಡ ಈ ಯುದ್ಧದಲ್ಲಿ ಭಾಗಿಯಾಗುತ್ತೇನೆಂದು ಕೈಸರನಿಗೆ ತಿಳಿಸಿದನು. ಕೈಸರನು ಸಹ ಇವನ ಶಕ್ತಿಯಲ್ಲಿ ನಂಬಿಕೆ ಇದ್ದುದರಿಂದ ಅನುಮತಿಯನ್ನು ಕೊಟ್ಟನು. ಇವನ ಉತ್ಸಾಹದಿಂದ ಜರ್ಮನಿ ಎಚ್ಚರಗೊಂಡಂತಾಯಿತು. ರಷ್ಯದವರು ಪೂರ್ವದಲ್ಲಿ ನುಗ್ಗಿ ದಾಂದಲೆ ಹಚ್ಚುತ್ತಿದ್ದುದನ್ನು ನೋಡಿ ಕೈಸರನು ಹಿಂಡನ್‌ಬರ್ಗ್‌ನನ್ನು ಪೂರ್ವಭಾಗಕ್ಕೆ ಕಳುಹಿಸಿದನು. ಇಂತಹ ವೇಳೆಯಲ್ಲಿ ಇವನಿಲ್ಲದಿದ್ದರೆ ಜರ್ಮನಿಗೆ ಕಷ್ಟವೊದಗುತ್ತಿದ್ದೀತೆಂಬುದನ್ನು ಚೆನ್ನಾಗಿ ಅರಿತರೂ ಇವನ ಸಾಹಸದಿಂದ ರಷ್ಯಾದವರು ಸಂಪೂರ್ಣ ಸೋತುಹೋದರು. ಪಶ್ಚಿಮದ ಕಡೆ ಬರ್ಹೂನಿನಲ್ಲಿ ಪಾಲೇನ್ ಹೇಯನರು ಸೋತ ಮೇಲೆ ಜರ್ಮನ್ ಸೈನಿಕರು ನಿರುತ್ಸಾಹಿಗಳಾಗಲು ಹಿಂಡನ್‌ಬರ್ಗ್‌ನನ್ನು ಪೂರ್ವದಿಂದ ಪಶ್ಚಿಮಕ್ಕೆ ಕರೆಯಿಸಿದರು. ತಿರುಗಿ ಹಿಂಡನ್‌ಬರ್ಗ್‌ನು ಪೋಲೆಂಡ್ ಮತ್ತು ಲೋಡ್‌ಜಿ ಕದನಗಳಲ್ಲಿ ಬಹಳ ಕಷ್ಟಪಟ್ಟು ಕೆಲಸಮಾಡಿ ಕೀರ್ತಿಹೊಂದಿದನು. ಅದೇ ವರ್ಷ ಕೈಸರನು ಇವನನ್ನು ಫೀಲ್ಡ್ ಮಾರ್ಷಲನನ್ನಾಗಿ ಮಾಡಿ ಸನ್ಮಾನಿಸಿದನು.

೧೯೨೫ರಲ್ಲಿ ಜರ್ಮನಿಯ ಮೊದಲನೆಯ ಪ್ರೆಸಿಡೆಂಟ್ ಇಬರ್ಟ್‌ನ ಮರಣದನಂತರ ರಾಜತಂತ್ರವಾದಿಗಳು ಹೋಹೇಸ್ ಜೋಲಿರ್ನ್ ಪರಿವಾರದವರನ್ನು ಪುನಃ ಅದೇ ಪದವಿಗೇರಿಸಲು ಪ್ರಯತ್ನಪಡುತ್ತಿದ್ದರು. ಇದಕ್ಕಾಗಿ ಅವರು ಜಾರೀಸ್‌ನನ್ನು ಪ್ರೆಸಿಡೆಂಟನನ್ನಾಗಿ ಮಾಡಬೇಕೆಂದು ತವಕಪಡುತ್ತಿದ್ದರು. ಆದರೆ ಅವನಿಗೆ ಹೆಚ್ಚು ಓಟುಗಳು ದೊರಕದಿರಲು ಎರಡನೆ ಚುನಾವಣೆಯಲ್ಲಿ ಹಿಂಡನ್‌ಬರ್ಗ್‌ನನ್ನು ನಿಲ್ಲಿಸಿದರು. ಜರ್ಮನಿಯಲ್ಲಿ ಹಿಂಡನ್‌ಬರ್ಗ್‌ನು ಪ್ರೆಸಿಡೆಂಟನಾಗಿದ್ದರೂ ಪೂರ್ವ ಯಜಮಾನನಲ್ಲಿ ತುಂಬಾ ಭಕ್ತಿಯಿಟ್ಟಿದ್ದನು. ಅವನು ಸಾಯುವುದಕ್ಕೆ ಮುಂಚೆ ಕೈಸರನಿಗೆ ಬಹು ವಿನಯದಿಂದ ಒಂದು ಪತ್ರವನ್ನೂ ಸಹ ಬರೆದಿದ್ದನಂತೆ. ೧೯೩೧ನೇ ಜುಲೈ ತಿಂಗಳಲ್ಲಿ ಬ್ರೂನಿಂಗ್ ಸರಕಾರವು ಸೋತುಹೋದಾಗ ಹಿಂಡನ್‌ಬರ್ಗ್‌ನು ಒಂದು ವಿಧವಾದ ಡಿಕ್ಟೇಟರನಾಗಿದ್ದನು. ೧೯೩೧ನೇ ಮಾರ್ಚಿಯಲ್ಲಿ ಜರ್ಮನಿ ಪಾರ್ಲಿಮೆಂಟ್ ಇನ್ನೂ ೬ ತಿಂಗಳ ತನಕ ಸಭೆ ಸೇರುವುದಿಲ್ಲವೆಂದು ನಿಶ್ಚೈಸಿತು. ಜಾನ್‌ನಲ್ಲಿ ಇದಕ್ಕೆ ವಿರೋಧ ಬರತೊಡಗಿತು. ಆಗ ಹಿಂಡನ್‌ಬರ್ಗ್‌ನು ಚಾನ್ಸಲರ್ ಬ್ರೂನಿಂಗ್ ಸರ್ಕಾರವನ್ನು ವಿರೋಧಿಸಿ ಹೊಸ ಚುನಾವಣೆಯಾಗಬೇಕೆಂದು ತಿಳಿಸಿದನು.

ಈ ಕಾಲದಲ್ಲಿ ಜರ್ಮನಿಯು ಬಹಳ ವಿಷಮ ಸ್ಥಿತಿಯಲ್ಲಿಯೇ ಇದ್ದಿತೆಂದು ಹೇಳಬಹುದು. ಪಕ್ಷಗಳು ದಿನೇ ದಿನೇ ಹೆಚ್ಚುತ್ತಿದ್ದುವು. ಕಾದಾಟಗಳಾಗಲು ಅವಕಾಶವಿತ್ತು. ಈ ಸ್ಥಿತಿಯನ್ನು ನೋಡಿ ನೋಡಿ ತಾನು ಮುದುಕನಾಗಿರುವೆನೆಂದು ಹೇಳುತ್ತಿದ್ದರೂ, ಹಿಂಡನ್‌ಬರ್ಗ್‌ನೇ ಚುನಾವಣೆಗೆ ಅಂದರೆ ಪ್ರೆಸಿಡೆಂಟ್ ಪದವಿಗೆ ನಿಲ್ಲಬೇಕಾಗಿ ಬಂತು. ಈ ಚುನಾವಣೆಯಲ್ಲಿ ಶಾಸನವಿಧಾನದ ಪ್ರಕಾರ ಹಿಂಡನ್‌ಬರ್ಗ್‌ನಿಗೆ ಬೇಕಾದಷ್ಟು ಓಟುಗಳು ದೊರಕಲಿಲ್ಲ. ಆದರೆ ೧೯೩೨ರಲ್ಲಿ ನಡೆದ ಎರಡನೆ ಚುನಾವಣೆಯಲ್ಲಿ ೬೦ ಲಕ್ಷ ಓಟುಗಳಿಂದ ಎರಡನೇ ಸಲ ಪ್ರೆಸಿಡೆಂಟಾದನು. ಮುದುಕನಾದರೂ ಹಿಂಡನ್‌ಬರ್ಗ್‌ನು ಶಾಸನ ವಿಧಾನಗಳಲ್ಲಿ ತುಂಬಾ ಚತುರತೆಯಿಂದ ಕೆಲಸ ಮಾಡುತ್ತಿದ್ದನು. ಬ್ರೂನಿಂಗ್ ಮಂತ್ರಿಮಂಡಲವು ರಾಜಿಕೊಟ್ಟಾಗ ಹಿಂಡನ್‌ಬರ್ಗ್‌ನು ವಾನ್ ಪೋಷನ್‌ನನ್ನು ಚಾನ್ಸಲರನ್ನಾಗಿ ಮಾಡಿದುದು ಅಭಿನಂದನೀಯವೇ ಸರಿ.

೧೯೩೧ನೇ ಜುಲೈನಲ್ಲಿ ಆದ ಚುನಾವಣೆಯಲ್ಲಿ ಹಿಟ್ಲರನ ಮುಂದಾಳುತನದಲ್ಲಿ ಜರ್ಮನಿ ಪಾರ್ಲಿಮೆಂಟ್ಲ್ಲವೂ ನಾಜಿ ದಳದಿಂದ ತುಂಬಿಹೋಗಿದ್ದಿತು. ಹಿಂಡನ್‌ಬರ್ಗ್‌ನು ಹಿಟ್ಲರ ನೊಂದಿಗೆ ವಾನ್ ಪೋಷನ್‌ರ ಸಹಾಯದಿಂದ ಶಾಸನಕಾರ್ಯವನ್ನು ನಡೆಸುವ ಪ್ರಸ್ತಾಪವೆತ್ತಿದಾಗ ಅದು ಹಿಟ್ಲರನಿಗೆ ರುಚಿಸಲಿಲ್ಲ. ಹಿಟ್ಲರನು ಮಂತ್ರಿಮಂಡಲದ ನೇತೃತ್ವವನ್ನು ತಾನೆ ತನ್ನ ಕಡೆಯವರೂ ಪಡೆಯಬೇಕೆಂದಿದ್ದನು. ಹಿಂಡನ್‌ಬರ್ಗ್ ಮೊದಲೆ ನಾಜಿ ದಳಕ್ಕೆ ಎಚ್ಚರಕೊಟ್ಟನು. ಆದರೆ ಹಿಟ್ಲರ ಪ್ರಭಾವದಿಂದ ನಾಜಿಗಳು ಪ್ರಬಲರಾದರು. ಶಾಂತಿಸ್ಥಾಪನೆ ಹಿಟ್ಲರನ ಸಹಾಯವು ಅತ್ಯಾವಶ್ಯಕವೆಂದು ತಿಳಿದು ೧೯೩೩ನೇ ಮಾರ್ಚಿ ೨೫ರಲ್ಲಿ ಹಿಟ್ಲರನನ್ನು ಡಿಕ್ಟೇಟರನ್ನಾಗಿ ಮಾಡಿದನು. ಹಿಂಡನ್‌ಬರ್ಗ್‌ನ ಕಾರ್ಯ ಅವನಲ್ಲಿದ್ದ ಉತ್ಸಾಹ ಜರ್ಮನಿಯನ್ನು ಬಡಿದೆಬ್ಬಿಸಿದಂತಾಯಿತು. ಇವನಿಗೆ ಸಾಯುವಾಗ್ಯೆ ವಯಸ್ಸು ೮೬ ವರ್ಷವಾಗಿತ್ತು.

ಹಿಂಡನ್‌ಬರ್ಗ್‌ನಲ್ಲಿ ನೈಜವಾದ ದೇಶಭಕ್ತಿ ಇತ್ತು. ಒಬ್ಬನನ್ನು ಒಮ್ಮೆ ಪ್ರೀತಿಸಿದರೆ ಆತನನ್ನು ತನ್ನ ಪ್ರಾಣವಿರುವ ಪರ್ಯಂತರವೂ ಪ್ರೀತಿಸುತ್ತಿದ್ದನು. ದೇಶಹಿತಕ್ಕಾಗಿ ಶತ್ರುಮಿತ್ರರೆಂಬ ಭೇದಭಾವವಿಲ್ಲದೆ ವರ್ತಿಸುತ್ತಿದ್ದನು. ದೇಶಹಿತೈಷಿಯಾದ ವ್ಯಕ್ತಿಯೊಡನೆ ಮತಭೇದವಿದ್ದರೂ ಅವನು ಸಹಕರಿಸುತ್ತಿದ್ದನೆ ಹೊರತೆಯೇ ರಾಷ್ಟ್ರವಿರೋಧಿಗಳನ್ನು ಎಷ್ಟೇ ಒಳ್ಳೆಯವನೆಂದರೂ ಹೆಚ್ಚು ಪ್ರೀತಿಸುತ್ತಿರಲಿಲ್ಲ. ಹಿಂಡನ್‌ಬರ್ಗ್‌ನ ಪ್ರಾಮಾಣಿಕತೆಯೂ, ರಾಷ್ಟ್ರಭಕ್ತಿಯೂ, ನಿಶ್ಚಯ ಸಾಮರ್ಥ್ಯವೂ ನಿಸ್ಸೀಮವಾದುವು. ಹಿಂಡನ್‌ಬರ್ಗ್‌ನ ಮಹತ್ಕಾರ್ಯಗಳೆಲ್ಲವೂ ಈ ಜರ್ಮನಿಯಲ್ಲಿ ಸಫಲತೆ ಹೊಂದುತ್ತವೆಯೆಂದು ಹೇಳಬಹುದಾಗಿದೆ.

ಕುಡಿಯಿರಿ! ಕುಡಿಯಿರಿ!!

ಕಣನ್ ದೇವನ್ ಟೀ
ಚಹಾ ರಾಜಾ

ಗುಣದಲ್ಲಿ ಅದ್ವಿತೀಯವಾದುದು

ಮಹಾಜನರಾಯಿಷಿಯ ಚಹಾ

ಪರಿಶುದ್ಧತೆಯ ಗುರುತಿಗಾಗಿ
ನೋಡಿ

SOLE S. K. AGENTS:

THE KERALA TEA SYNDICATE,
PONANI-MALABAR.

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP YOU TO SAVE MONEY SENSIBLY.

THE PALAI CENTRAL BANK, LTD,
(INCORPORATED IN TRAVANCORE.)
BUNDER ROAD, MANGALORE.
London Agents— Lloyds Bank, Ltd.
New York— National City Bank of New York.

DIAMONDS! DIAMONDS!
BEST BRILLIANCY!
K. R. K. SHET,
Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು! ಎಮ್ಸ್ಟ್ಯಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.
ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಕನ್ನಡಿಗರೇ!
ಬೊಂಬಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?
ವೆಲ್ಕಂ ಹೊಟೆಲ್
(ಸ್ಥಾಪನೆ:—1912.)
(MADRAS BRAHMINS' LODGE.)
(ಜನರಲ್ ಪೋಸ್ಟಾಫೀಸಿನ ಬಳಿ)
ಪ್ರಿಯರ್ ರೋಡ್, ಫೋರ್ಟ್, ಬೊಂಬೈ.
ತಾರಿನ ಪತ್ರೆ:—"ಕಾಣೆಮಾರ್" ಟೆಲೆಫೋನ್:—21386.
ಇದು ನಮ್ಮ 'ಸಿ[illegible]ಬಿಲಿ' ವರ್ಷ! ಅಂದ ಬಳಿಕ ಹೆಚ್ಚಿನ ಪ್ರಶಂಸೆಗೆಡೆಯೆಲ್ಲ. ಸುಗ್ರಾಸ ಭೋಜನ, ಉತ್ಕೃಷ್ಟ ತಿಂಡಿ-ತೀರ್ಥಗಳು, ವಾಸಕ್ಕೆ ಸ್ವಚ್ಛವಾದ ಕೋಣೆಗಳು, ಬಲು ಕುಲಭ ದರ, ಹಣಕ್ಕೂ ಮಿಕ್ಕಿದ ಗುಣ—ಇವುಗಳು ಬೇಕೆಂದಿದ್ದರೆ ಈ ಸ್ಥಳವನ್ನೆಂದಿಗೂ ಮರೆಯಬೇಡಿರಿ.

ಬಿಳೇ ತೊನ್ನು—
ಮತ್ತೂ ಕುಷ್ಠ ರೋಗ.
ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮುಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.
Vaidiya Raj Akhila Kishori Ram,
No. 223, P. O., Katri Sarai. (GAYA).
11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಆರ್. ಮಾರ್ಟಿನ್ಸ್ ರ
ಆಸ್ತಮೊಡಾಯನ್
ಈ ಪಮ್ಮ ಔಷಧವು ಬಹಳ ಕಾಲದಿಂದ ಉಪ್ಪವಿಸಿದ ಮತ್ತು ಅತಿ ಭಯಂಕರವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ತಲೆನೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಶುಭ್ರಮಾಡುತ್ತದೆ. ಈ ಔಷಧದ ಪೂರ್ಣ ಗುಣಸಿಕ್ಕಬೇಕಾದರೆ ಒಂದೇ ಶಾಟ್ಲಿ ಮಾತ್ರ ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ಉಪಯೋಗಿಸಿಕೊಂಡವರಿಗೆ ಮೇಲೆ ವಿವರಿಸಿದ ಕಾಯಿಲೆಗಳು ಪುನಃ ಹಿಡಿಸುವುದಿಲ್ಲ. 60 ಗುಳಿಗೆಗಳ ಒಂದು ಶಾಟ್ಲಿಗೆ ಕ್ರಯ ರೂ. 1—4—0 2 ಶಾಟ್ಲಿಗಳಿಗೆ ಕ್ರಯ ರೂ. 13—8—0.
R. D. KATELY & Co.,
319 Frere Road,
Opposite Fort Market, near Fountain,
BOMBAY.
ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.
Head Office: MADRAS. { ESTABLISHED: 1906. } Branch for Karnatak: UDIPI.
POLICIES IN FORCE EXCEED 3,00,00,000.
(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.
It will pay you to represent this oldest Life Office.
A policy in United India will give you the maximum benefits.
For particulars apply to:—
M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

THE TRAVANCORE
NATIONAL BANK, LIMITED.
Head Office: ALLEPPEY.
London Agents: MIDLAND BANK LTD.
Bombay Office:—25-27, Church Gate Street, Fort, BOMBAY. MADRAS OFFICES: (1) 164, Broadway, (2) 183, Mount Road, (3) Luz-Corner, Mylapore & (4) Vepery (No. 1, Purasawalkam High Road).
BRANCHES EVERYWHERE IN SOUTH INDIA.
We have pleasure to announce that this Bank is now in a position to handle business on the following centres also:—

AGRA	CALCUTTA	HYDERABAD (Deccan)	LUCKNOW
AHMEDABAD	CAWNPORE	HYDERABAD (Sind)	RAICHUR
AMINABAD (Lucknow)	DACCA	JAMNAGAR	RANGOON
AMRITSAR	DELHI	KARACHI	SAMBHAR LAKE
AURANGABAD	GORAKHPORE	LAHORE	SECUNDERABAD

SURAT and other centres in Northern India.
ENQUIRIES SOLICITED.
Alleppey, 10th January 1936.
K. C. Eapen, B. A., Managing Director.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೭೨೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.
೨. ಮುಸ್ಕ್ ಲವೆಂಡರ್—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.
೩. ಅನಂಸ್ ಸ್ನೋ—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.
೪. ಬ್ಲಿಲಿಯುಂಟಾಯಿನ್—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.
೫. ಬ್ರಾಹ್ಮೀ ತೈಲ—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.
೬. ದ್ರಾಕ್ಷಾಸವ—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ್ಮು, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮುವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.
೭. ಆರಾಮೇತಿಹಾಲ್—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.
೮. ವೆಜಿಟೇಬಲ್ ಪೈನ್-ಹಂಟರ್—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳ ಗೋಸ್ಕರ ಕುಡಿಯತಕ್ಕ ಔಷಧ.
೯. ರಶ್ನಾಂಜನ ಪೇನ್ ಬಾಮ್—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.
೧೦. ಕ್ರೀಸೋರಿಂಗಾ—ಕಪ್ಪು ಆಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.
೧೧. ಹಿಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.
KOHINOOR WORKS,
60 Abdul Rehiman Street,
- BOMBAY, No. 3.

THE PIE-MONEY BANK LTD., MAIDAN ROAD, MANGALORE.
Undertakes all kinds of Banking Business. Current account at 2½% per annum.
Savings Bank Deposits at 4½% per annum.
FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.
Apply for particulars:—
K. R. GURU, *Managing Director.*

ಕಳೆದ ವಾರ

ತೋಟೆ ಶೃಂಗಾರನೇ—ಒಳಗೇನು?

ಮೂರು ಇಟೆಲಿ ವಿಮಾನಗಳ ಸೈನಿಕರನ್ನು ಅಬಿಸೀನಿಯದವರು ಪರಂಧಾಮಕ್ಕೆ ಕಳುಹಿಸಿದುದು ನಿಜವೇ, ಅಲ್ಲವೇ ಎನ್ನುವುದು ಈಗ ನಿಜ, ಖಂಡಿತ ಎಂದಾಯಿತು. ಇಟೆಲಿಯವರು ತಾವು ಅಬಿಸೀನಿಯದವರನ್ನು ತಮ್ಮ ಅಡಿಯಾಳಾಗಿ ಮಾಡಿಕೊಂಡಿದ್ದೇವೆ ಎನ್ನುವ ಮಾತು, ಇದರಿಂದ ಎಷ್ಟು ನಿಜ ಎಂದು ತಿಳಿಯುವ ಹಾಗಾಯಿತು. ಅಷ್ಟೇ ಅಲ್ಲ; ನೇಗಸರವರ ಧೈರ್ಯಶಾಲಿಗಳಾದ ಪ್ರಜೆಗಳನ್ನು ಇಟೆಲಿಯವರು ಕೈವಶ ಮಾಡಿಕೊಳ್ಳುವ ಕಾರ್ಯವು ಇನ್ನೂ ಹಾಗೆ ಹಾಗೇ ಇದೆ ಎಂದೂ, ಅಬಿಸೀನಿಯದವರಿಗೆ ತಕ್ಕ ಬೆಂಬಲವು ಒದಗಿದರೆ, ಅವರು ಈಗಲಾದರೂ ತಾವು ಕಳೆದುಕೊಂಡುದನ್ನು ಸಂಪಾದಿಸಲು ಶಕ್ತರಾಗಬಹುದೆಂದೂ ಊಹಿಸಬರುವಂತಿದೆ. ಆದರೆ ಅವರಿಗೆ ಜನ ಸಹಾಯವನ್ನೂ, ಧನಸಹಾಯವನ್ನೂ ಕೊಡುವವರು ಯಾರು? ಜನಾಂಗಸಂಘವು, ತನ್ನ ಅಸ್ತಿತ್ವವು ಮುಖ್ಯವಾಗಿ ಬಿಳಿಯ ಮಹಾ ರಾಷ್ಟ್ರಗಳ ಉದ್ಧಾರಕ್ಕಾಗಿ, ಅಥವಾ ಕೊಂಚ ಮಟ್ಟಿಗೆ ಬಿಳಿಯ ಚಿಕ್ಕ ರಾಷ್ಟ್ರಗಳ ಬೆಂಬಲಕ್ಕಾಗಿ ಎಂದು ಮಾತ್ರವೇ ಕಾರ್ಯತಃ ಸೂಚಿಸಿರುವಾಗ, ಆಫ್ರಿಕದ ಅಥವಾ ಏಶಿಯದ ಕರಿ ರಾಷ್ಟ್ರಗಳ ಗೊಡವೆಯೇ ತನಗಿಲ್ಲವೆನ್ನುವಾಗ, ಅದರಂತೆ, ಅಬಿಸೀನಿಯದ ಮಾಜೀ ಮಿತ್ರರಾಷ್ಟ್ರಗಳೂ, ವಿಜಯಿಯಾದ ಇಟೆಲಿಯ ಬೆನ್ನು ತಟ್ಟುತ್ತ, 'ಶಹಬಾಸ್' ಎನ್ನುತ್ತಿರುವಾಗ, ಅಬಿಸೀನಿಯಾ ಚಕ್ರವರ್ತಿಗಳ ಈ ಆರ್ತನಾದವು, ಅವರನ್ನು ನಡು ನೀರಲ್ಲಿ ಕೈಬಿಟ್ಟ ಈ ಹಿತಶತ್ರುರಾಷ್ಟ್ರಗಳ ಕಿವಿಗೆ ಎಂದಾದರೂ ಬೀಳುವುದುಂಟೆ? ಅಥವಾ ಬೀಳಬೇಕಾದುದೇಕೆ?

* * * * *

ಪ್ಯಾಲಸ್ತೈನಿನ ಕಿರುಕುಳ ಇನ್ನೂ ಏಕೆ ಹೀಗೇ ಇದೆ?

ನಮ್ಮ ಹೊಸ ಕೊಲೊನಿಯಲ್ ಸೆಕ್ರಟರಿಗಳ ಮುಂದಿನ ಆಲೋಚನೆಯಾದರೂ ಏನು? ಯೆಹೋದ್ಯರು ಸದ್ಯ ಜೆರೂಸಲೇಮಿನೊಳಗೆ ಒಳಬಾರದಂತೆ, ತಾತ್ಕಾಲಿಕವಾಗಿಯಾದರೂ, ನಿರ್ಬಂಧವನ್ನು ಕಲ್ಪಿಸುವ ಯೋಚನೆ ಅವರಿಗೆ ಇದ್ದ ಹಾಗಿಲ್ಲ! ಅದಾಗದೆ, ಪ್ಯಾಲಸ್ತೈನಿನಲ್ಲಿ ಶಾಂತಿಯುಂಟಾದೀತೇ ಎಂಬುದಿದು ಸಂದೇಹವೇ. ಆಗಲೇ ಇದೇ ವಿಷಯವನ್ನೊತ್ತಿ, ಪ್ಯಾಲಸ್ತೈನ್ ಪ್ರಾಂತದ ಸುಮಾರು ೧೫೭ ಮಂದಿ ಅರಬ್ ಉಚ್ಚಾಧಿಕಾರಿಗಳು ಒಂದು ಮೆಮೊರಾಂಡಮನ್ನು ಬ್ರಿಟಿಶ್ ಹ್ಯಾ ಕವಿಶನರರಿಗೆ ಸಮರ್ಪಿಸಿದ್ದಾರೆ. ಈ ಅಧಿಕಾರಿಗಳೇನಾದರೂ ಆ ಅರಬ್ ದಂಗೆಗಾರರ ಹಾಗಲ್ಲ; ಅವರ ಪಕ್ಷಪಾತಿಗಳೂ ಅಲ್ಲ; ಜವಾಬುದಾರಿಯನ್ನು ಚೆನ್ನಾಗಿ ಬಲ್ಲ ಸರಕಾರದ ಅಧಿಕಾರಿಗಳೇ. ಆದರೂ, ಬ್ರಿಟಿಶ್ ಕೊಲೋನಿಯಲ್ ಆಫೀಸಿನಲ್ಲಿ, ಇಷ್ಟು ಸುಲಭವಾಗಿ, ಇವರ ಆ ಸೂಚನೆಗೆ ಮನ್ನಣೆ ಸಿಕ್ಕೀತೆಂದಾಗಲೀ, ಆ ಆಫೀಸಿನವರು, ಅಷ್ಟು ಬೇಗನೇ, ತಮ್ಮ ಪ್ರಿಸ್ಟೀಜನ್ನು ಬಿಟ್ಟುಕೊಡುವರೆಂದಾಗಲೀ ಹೇಳಬರುವುದಿಲ್ಲ. ಮದ್ದು ಗುಂಡೂ ಸೈನ್ಯವೂ ಬೆಂಬಲಕ್ಕಿರುವಾಗ, ಇಂತಹ ಸೂಚನೆಗಳನ್ನು ಮನ್ನಿಸದಿದ್ದರೂ ಆಗುವುದೇನೆಂದು ಹಲವು ಅಧಿಕಾರಿಗಳ ತಲೆಯಲ್ಲಿರುವಷ್ಟು ಕಾಲ, ಇಂತಹ ರಾಜೀಸೂಚನೆಗಳು ಕಸದ ಬುಟ್ಟಿಯ ಪಾಲಾದರೂ ಆಶ್ಚರ್ಯವೇನು?

* * * * *

ಅವರ ಕೈಯಿಂದಲೇ ಅವರನ್ನು ಕಟ್ಟಿಸಿಹಾಕಿದರು.

ಗಡಿನಾಡಿನ ಕಾಂಗ್ರೆಸ್ ಪಾರ್ಲಿಮೆಂಟ್ ಬೋರ್ಡಿನ ಪೇಶಾವರದ ಶಾಖೆಯವರು, ಚುನಾವಣೆಯ ಕಾರ್ಯದ ಸಂಬಂಧ, ಆ ನಗರದಲ್ಲಿ ಒಂದು ಸಾರ್ವಜನಿಕ ವಿೂಟಿಂಗನ್ನು ಕರೆಯಬೇಕೆಂದೂ, ಅದಕ್ಕೆ ಹಳ್ಳಿಪಳ್ಳಿಗಳಿಂದಲೂ ಜನರನ್ನು ಆಮಂತ್ರಿಸಬೇಕೆಂದೂ, ಈ ಸಂದರ್ಭದಲ್ಲಿ, ಒಂದು ಸಾರ್ವಜನಿಕ ಮೆರವಣಿಗೆಯನ್ನೂ ಏರ್ಪಡಿಸಬೇಕೆಂದೂ ನಿರ್ಧರಿಸಿದ್ದರು. ಅಷ್ಟರಲ್ಲಿ ಅಲ್ಲಿನ ಸೀನಿಯರ್ ಪೊಲೀಸ್ ಸುಪರಿಂಟೆಂಡೆಂಟರು, 'ನಿಮ್ಮ ಈ ವಿೂಟಿಂಗಿಗೂ, ಮೆರವಣಿಗೆಗೂ, ಕಾನೂನು ಪ್ರಕಾರ ಅಪ್ಪಣೆ ಕೇಳಿ' ಎಂದು ಆ ಬೋರ್ಡಿನ ಸೆಕ್ರಟರಿಗಳಿಗೆ ತಿಳಿಸಿದರು. ಸೆಕ್ರಟರಿಗಳು ಹಾಗಾಗಲೆಂದು, ಡಿ॥ ಮ್ಯಾಜಿಸ್ಟ್ರೇಟರಲ್ಲಿ ಅಗತ್ಯವಿರುವ ಅಪ್ಪಣೆಗಾಗಿ ಬರೆದುಕೊಂಡರು. ಇದು ಕೇವಲ ಚುನಾವಣೆಯ ಸಂಬಂಧದ ಕಾರ್ಯಕ್ರಮವಾದುದರಿಂದ ಇದಕ್ಕೆ ಅಧಿಕಾರಿಗಳೇನೂ ಆಕ್ಷೇಪವೆತ್ತಲಾರರೆಂದು ಅವರು ತಿಳಿದುಕೊಂಡಿದ್ದರು. ಆದರೆ ಪರಿಣಾಮವೇನು? ಸೆಕ್ಷನ್ ೧೪೪! 'ಮೆರವಣಿಗೆಗಳನ್ನೂ, ಇತರ ಬಗೆಯ ಪ್ರದರ್ಶನಗಳನ್ನೂ ಮಾಡಕೂಡದು!' ಅಷ್ಟೇ ಅಲ್ಲ, ಡಾಕ್ಟರ್ ಖಾನ್ ಸಾಹೇಬರ ಹೇಳಿಕೆಯ ಮೇರೆಗೆ, 'ಪೋಲೀಸರು, ವಿೂಟಿಂಗು ಆಗುವ ಸ್ಥಳದಲ್ಲಿ ಜನರು ನೆರೆಯಲು ಆಸ್ಪದವಿಲ್ಲದ ಹಾಗೆ, ಆ ವಠಾರಕ್ಕೆ ಬೀಗವುದ್ರೆಯನ್ನೂ ಜಡಿದಿಟ್ಟರ'ಂತೆ. ಎಷ್ಟು ಸ್ವಾರಸ್ಯ! ಇದೇನು ಅಧಿಕಾರಿಗಳೇ ಕಾನೂನೇ? ಕಾನೂನೇ ಅಧಿಕಾರಿಗಳೇ? ಚುನಾವಣೆಗೆ ಸಂಬಂಧಪಟ್ಟ ಥ್ಯೂವತ್ತು ಕಾರ್ಯಕಲಾಪಗಳಲ್ಲಿಯೂ, ತಮ್ಮ ಸರಕಾರವು ತಟಸ್ಥವೆಂದು ಪ್ರಕಟಗೊಳಿಸಿದ್ದ ಲಾರ್ಡ್ ಲಿನ್‌ಲಿತ್‌ಗೋರವರ ಉದಾರ ಅಭಯಪ್ರದಾನಕ್ಕೂ, ಇದಕ್ಕೂ ಏನಾದರೂ ಸಂಬಂಧವುಂಟೇ, ನೋಡಿ!

* * * * *

ಮೌಲ್ವೀ ಅಬ್ದುಲ್ ಅಜೀಜ್ ಖಾನ್‌ರವರು

ಲಿಡ್ನಾಪುರದ ಜವಿೂನ್ದಾರರು. ಇವರು ಈಚಿಗೆ ಅಲ್ಲಿನ ಹಿಂದೂ ಆಶ್ರಮವೊಂದಕ್ಕೆ, ಸ್ವಲ್ಪ ಸ್ಥಳವನ್ನು ದಾನ ಮಾಡಿ, ತಮ್ಮ ಧಾರ್ಮಿಕ ಔದಾರ್ಯವನ್ನು ಪ್ರಕಟಮಾಡಿದ್ದಾರೆ. ಹಿಂದೂ ಜವಿೂನ್ದಾರರು, ಮಸೀದಿಗಳನ್ನು ಕಟ್ಟಲು, ತಮ್ಮ ಮುಸ್ಲಿಂ ಒಕ್ಕಲುಗಳಿಗೆ ಹಣ ಮತ್ತೂ ಸಾಮುಗ್ರಿಗಳ ಸಹಾಯ ಮಾಡುವುದು ಅಪೂರ್ವವಲ್ಲವಾದರೂ, ಮಹಮ್ಮದೀಯ ಮಹನೀಯರಲ್ಲಿ, ಇಷ್ಟು ವಿಶಾಲಬುದ್ಧಿಯನ್ನೂ ಸರ್ವ ಮತಗಳಲ್ಲಿ ಸಮದೃಷ್ಟಿಯನ್ನೂ ತೋರಿದವರು ಇವರೇ ಮೊದಲನೆಯವರೆಂದು ನಾವು ಇವರನ್ನು ಅತ್ಯಂತ ಅಭಿಮಾನಪುರಸ್ಸರವಾಗಿ ಅಭಿನಂದಿಸಬೇಕಾಗಿದೆ. ಬ್ರಿಟಿಷರ ಆಳಿಕೆಗೆ ಪೂರ್ವದಲ್ಲಿ, ಮುಸ್ಲಿಂ ಫಕೀರರಿಗೆ ಹಿಂದೂ ಶಿಷ್ಯರೂ, ಹಿಂದೂ ಸಾಧುಗಳಿಗೆ ಮುಸ್ಲಿಂ ಶಿಷ್ಯರೂ ಇದ್ದುದನ್ನು ನಾವು ನೋಡಬಹುದಾಗಿದ್ದಿತು. ಉಭಯ ಸಮಾಜಗಳ ಎಷ್ಟೋ ಪದ್ಧತಿಗಳೂ ಆಚಾರಗಳೂ, ಒಂದು ಸಂಸ್ಕೃತಿಯಂತೆಯೇ ಬೆಳೆದು ಬರುತ್ತಿದ್ದುದನ್ನೂ ನಾವು ಕಾಣಬಹುದಾಗಿದ್ದಿತು. ಆದರೆ 'ವಿಭಾಗಿಸು, ಆಳು' ಎನ್ನುವ ಯುಗದಲ್ಲಿ, ಅದೆಲ್ಲಾ ಹೋಯಿತು! ಈಗ ನಮ್ಮ ಪೂರ್ವಸಂಸ್ಕೃತಿಯ ಉದ್ಧಾರಕ್ಕಾಗಿ, ನಮ್ಮ ಮೌಲ್ವಿಗಳೊಂದು ಈ ರೀತಿಯ ಉದಾತ್ತವಾದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟುದಕ್ಕಾಗಿ, ಅವರು ಚಿರಸ್ಮರಣೀಯರಾಗಿದ್ದಾರೆ! ಸಂದೇಹವಿಲ್ಲ.

* * * * *

ಲಂಡನಿನಲ್ಲಿ ಮೈಸೂರಿನ ಶ್ರೀಮನ್ಮಹಾರಾಜರವರು

ಅಭೂತಪೂರ್ವವಾದ ಸ್ವಾಗತಸತ್ಕಾರದಿಂದ ಸನ್ಮಾನಿತರಾದರೆಂದು ತಿಳುಹಲು ಅತ್ಯಂತ ಸಂತೋಷವಾಗುತ್ತದೆ. ಇಂಡಿಯಾ ಆಫೀಸಿನವರೂ, ಕೆಲವು ಮಂದಿ ಇಂಡಿಯದ ಮಾಜೀ ಗವರ್ನರರುಗಳೂ, ಮೈಸೂರಿನ ಟ್ರೇಡ್ ಕವಿಾಶನರರೂ ಅಲ್ಲದೆ ಮೈಸೂರು ಸಂಸ್ಥಾನದ ಅನೇಕ ಮಂದಿ ಮಹಾಜನರೂ ಶ್ರೀಮನ್ಮಹಾರಾಜರವರನ್ನು ಸ್ಟೇಶನಿನಲ್ಲಿ ದರ್ಶನ ಮಾಡಿ, ತಮಗೆ ಅನರಲ್ಲಿರುವ ಅಪಾರಾಶಯವನ್ನೂ ರಾಜಭಕ್ತಿಯನ್ನೂ ಪ್ರದರ್ಶಿಸಿದರು. ಮಹಾರಾಜರವರ ಈ ಸಂದರ್ಶನವು ಕೇವಲ 'ಖಾಸಿಗೆ'ಯಾಗಿದ್ದ ಕಾರಣ, ಅವರು ಪ್ರತ್ಯೇಕವಾದ ಸ್ಯಾಲೂನಿನಲ್ಲಿ ಪ್ರಯಾಣ ಮಾಡದೆ, ಸಾಮಾನ್ಯ ಟ್ರೆಯಿನಿನ ಕಂಪಾರ್ಟ್‌ಮೆಂಟಿನಲ್ಲಿಯೇ ಪ್ರಯಾಣ ಮಾಡಿದ್ದರು. ಮಹಾರಾಜರವರು ಈ ಸಮುದ್ರದ ಪ್ರಯಾಣದಿಂದ ಕೊಂಚ ಮಟ್ಟಿಗೆ ಆರೋಗ್ಯದಲ್ಲಿ ಸುಧಾರಿಸಿರುವರೆಂದು ತಿಳಿದುಬಂದಿದೆಯಾದರೂ, ಅವರು ೨ ವರ್ಷಗಳ ಹಿಂದೆ ಇದ್ದಷ್ಟು ದೃಢಾಂಗರಾಗಿಲ್ಲವೆಂದು ಅವರನ್ನು ಹಿಂದೆಯೂ, ಇಂದೂ ನೋಡಿದವರಲ್ಲಿ ಹಲವರ ಮತವಾಗಿದೆ. ಲಂಡನಿನ ವರ್ತಿಕೆಗಳಲ್ಲಿ ಕೆಲವು, ಮಹಾರಾಜರ ಆದರ್ಶಪ್ರಾಯವಾದ ರಾಜ್ಯಭಾರ ಮತ್ತೂ ಸಂಸ್ಥಾನದ ಅಭಿವೃದ್ಧಿಯ ಕುರಿತು, ಈ ಸಂದರ್ಭದಲ್ಲಿ, ಪ್ರಶಂಸಿಸಿ ಬರೆದಿವೆ. ಕೆಲವು, ಶ್ರೀಮನ್ಮಹಾರಾಜರವರ ಅಪಾರ ಐಶ್ವರ್ಯ ಮತ್ತೂ ಉದಾತ್ತ ಗುಣಗಳ ವಿಷಯದಲ್ಲಿ ಕಲ್ಪನಾಚಾತುರ್ಯವುಳ್ಳ ಉತ್ಪ್ರೇಕ್ಷೆಯ ವೃತ್ತಾಂತಗಳನ್ನು ನಿರೂಪಿಸಿ ತಮ್ಮ ವಾಚಕಲೋಕವನ್ನು ವಿಸ್ಮಯಗೊಳಿಸಿವೆ. ಮಹಾರಾಜರು ಲಂಡನಿನ ಈ ಪ್ರಥಮ ಸಂದರ್ಶನದಿಂದ ಅತ್ಯಂತ ಹರ್ಷಿತರಾಗಿರುವರೆಂದು ಪ್ರಕಟವಾಗಿದೆ!

ಹೊಸ ಜಪಾನಿ ಮಂತ್ರಿಮಂಡಲ.

ಮುಂಭಾಗದಲ್ಲಿರುವವರು (ಎಡದಿಂದ ಬಲಕ್ಕೆ) ಯುದ್ಧಮಂತ್ರಿ ಕೌಂಟ್ ಟಿಕೊಚಿ, ಪ್ರಧಾನ ಹಿರೋಟಾ, ಮತ್ತು ಮಂತ್ರಿ ಟಾಕೂಕಿಚಿ.

The MAN behind the RUPEE

is a power to be reckoned with in every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

ನವೀನ-ಸರ್ವಜ್ಞ

(ವಿಕಟಕವಿ ಹಗಲುವೇಷ ಮೂಲ್ಕಿ ಮುತ್ತದ ವೇಂಕಟನ ಕೃತಿಗಳಿಂದ*)

(ತ್ರಿಪದಿ)

ನಾಗಪ್ಪ ಗೆದ್ದನೇ, ಜೋಗಪ್ಪ ಬಿದ್ದನೇ?
ಸಾಗಿ ಕೋರ್ಟಿನ ಮೆಟ್ಲನಾರು ಗೆಲುವುದು
ಹೇಗಪ್ಪ? ಪೇಳ! ಸರ್ವಜ್ಞ. *॥ ೧೧ ॥

ಸಾಂತಯ್ಯನಳಿದನೇ, ಕಾಂತಯ್ಯನುಳಿದನೇ?
ನಿಂತು ಕೂತೊರಗಿ ಕೋರ್ಟ ಜಗಲಿಯಲಿ
ಪ್ರಾಂತಯ್ಯರಹರು. ಸರ್ವಜ್ಞ. *॥ ೧೨ ॥

ಗೇಲುಸೋಲುಗಳ ಅಹವಾಲು ಒಂದೇ, ಅಣ್ಣ!
ಬೀಳೆ ವ್ಯವಹಾರದಲಿ ಸೋಲು ಸೋಲಂತೆ,
ಗೇಲು ಸೋಲಹುದು. ಸರ್ವಜ್ಞ. ॥ ೧೩ ॥

ಸೋತವನ್ನುಕ್ಕೆಟ್ಟ, ಗೆದ್ದಾತನೂ ಬಲು ಕೆಟ್ಟ!
ಏತಾದರೂ ಭೂತದಾ ಕೋರ್ಟಿನಾ
ಮಾತು ಬೇಡೆಂದ. ಸರ್ವಜ್ಞ. *॥ ೧೪ ॥

ಜಾಗ ಮಾರುದ್ದವದಕಾಗೊಂದು ಜೋರ್ ಯುದ್ಧ,
ಹೋಗಿ ಕಾರ್ಕಳ ಮಂಗಳೂರ್ಗಿದ್ದುದೆಲ್ಲ
ಬೇಗ ವ್ಯಯವಾಗು. ಸರ್ವಜ್ಞ. ॥ ೧೫ ॥

ಕಾನೂನು ಬಲ್ಲವನ ಧ್ಯಾನ ನಿನಗೇಕಂಣ?
ಕಾನೂನಿನಿಂದಾನೆ ಹಂದಿ, ಹಂದಿ ತಾ-
ನಾನೆಯಂತಕ್ಕು. ಸರ್ವಜ್ಞ. * ॥ ೧೬ ॥

ಬಸ್ಸಿಗೇ ಕಾಸೊಂದು, ಫೀಸ್ಸಿಗೇ ಕಾಸೆರಡು,
ರುಸ್ಸೂಮು ಕಾಸು ಮೂರೀ ತ್ರಿವೇಣಿಯೊಳು
ಲೊಕಸ್ಸು ನೀನೆಂದ. ಸರ್ವಜ್ಞ. ॥ ೧೭ ॥

ಉಂಬೋಕ್ಕೆ ಹಣ ಬೇಕು, ತಿಂಬೋಕ್ಕೆ ಹಣ ಬೇಕು,
ಗಿಂಬಳ ವಕೀಲ ಗುಮಸ್ತೆಗೆ ಬೇಕು, ಕೋರ್ಟ
ಕಂಬಕ್ಕು ಬೇಕು. ಸರ್ವಜ್ಞ. ॥ ೧೮ ॥

ಪಡಿಬೇಕು, ವಡೆಬೇಕು, ಉಡೆಬೇಕು, ಕೊಡೆಬೇಕು,
ಬಿಡೆ ಬೇಕೆನುತ ಸಾಕ್ಷಿ ಕಕ್ಷಿಯ ರಕುತ
ಕುಡಿವನೆಡೆಬಿಡದೆ. ಸರ್ವಜ್ಞ. *॥ ೧೯ ॥

ಸತ್ಯಕ್ಕು ಮಿಥ್ಯಕ್ಕು ವ್ಯತ್ಯಾಸವೆಣಿಸದೇ,
ಬತ್ಯಲಂಚಕೆ ನುಡಿವ ಸಾಕ್ಷಿ ಕಕ್ಷಿಗೆ
ಪ್ರತ್ಯಕ್ಷ ಮೃತ್ಯು. ಸರ್ವಜ್ಞ. ॥ ೨೦ ॥

ನೈಪಾದ ಮಾತಿನಿಂ ಕೈ ಪಡೆವ ಸಾಲವನು,
ವೊಯ್ಪುತಿರೆ ಕೈಪಿಡಿದು ಕೊಡು ಬಿಡೆನೆಂದು
ಆಯ್ಪಿ (I. P.)ಯುಂಟೆಂದ, ಸರ್ವಜ್ಞ. ॥ ೨೧ ॥

ಬಂಡ ಸಾವಿರವಿಡಿದು ಹುಂಡಿಯಾ ಬಲದಿನಿಂ-
ಗ್ಲಾಂಡಿನಾ ವ್ಯಾಪಾರ ನಡೆಸಿದರಳವೆ-
ಗುಂಡಿಯೇ ಕಡೆಗೆ. ಸರ್ವಜ್ಞ. ॥ ೨೨ ॥

ಹತ್ತ ಗೆದ್ದಿಹೆನೆಂದು ಮತ್ತೆ ಹನ್ನೊಂದಕಿ-
ಕ್ಕುತ್ತ ಸರ್ವಸ್ವವಂ ದುಡುಕಿದಡ್ಡದೇ
ಮೃತ್ಯುಸ್ವರೂಪ. ಸರ್ವಜ್ಞ. ॥ ೨೩ ॥

ನಾಗಸರಕೊಳವಿಗಳನಾಗಾಗಳೆದೆಗಿಟ್ಟ-
ದಾಗಿ ಬಾಯ್ಯೊಳು ಕಡ್ಡಿ ತೂರಿ, ಡಾಕ್ಟರನು
ತೂಗುವನು ಶಿರವ. ಸರ್ವಜ್ಞ. *॥ ೨೪ ॥

ಇದ್ದುದನು ಹೊಲ್ಲನಿನ್ನಿದ್ದಿರದ ಬೇಕೆಂಬ,
ಮದ್ದಿನಂಗಡಿ ತೋರಿಕೊಡುವ, ಡಾಕ್ಟರನ
ಬುದ್ಧಿ ಕಾಣಯ್ಯ! ಸರ್ವಜ್ಞ. ॥ ೨೫ ॥

ಬೇಕಾದುದಾಗದೂ, ಬೇಕು ರುಚಿಯಿಲ್ಲದುದು,
ಬೇಕುಬೇಕೆಂದು ಕಹಿ ಔಷಧವನೀವ
ಡಾಕಟರನಯ್ಯ! ಸರ್ವಜ್ಞ. *॥ ೨೬ ॥

ಊರಿದರೆ ನೂರೈದು, ಗೀರಿದರೆ ಆರೈದು,
ಮಾರಿದರೆ ನೂರೈದೆನಿಪ್ಪ ಸರ್ಜನನ
ಕಾರಬಾರ್ ಬೇರೆ. ಸರ್ವಜ್ಞ. ॥ ೨೭ ॥

ಸಾಧುವಿವನೆಂದಡೇ ಬೇದಪ್ಪು ಗಣಿಸುವನು;
ಕ್ರೋಧಾಳು ಜಾಣ ಸಮರ್ಥನೆಂದಡದು
ಸ್ವಾದುವಹುದಹುದು. ಸರ್ವಜ್ಞ. ॥ ೨೮ ॥

ಜಾಣನೆಂದರೆ ತೋಷ, ಕೋಣನೆಂದರೆ ರೋಷ,
ಕ್ಷೀಣಿಸನು ಪೇಳೆ ಗುಣದೋಷ, ನಮ್ಮನೆಯ
ಮಾಣಿಯಾ ವೇಷ. ಸರ್ವಜ್ಞ. *॥ ೨೯ ॥

ಆ ಸೆಲೂನಿನ ಫಸ್ಟ ಕ್ಲಾಸು ಕ್ರೊಕಪಿನ ಮೇಗೆ
ವೇಸಲಿನ್ ಮೆತ್ತಿ, ಕೊಲರ್ ಟಾಯ್ ಮಾಸೆಯ
ವಾಸಿ ಕಂಕುಳಲಿ. ಸರ್ವಜ್ಞ. ॥ ೩೦ ॥

ದುಮ್ಮಟಿಯ ಹೊಗೆಯಿಳಿದು ಕೆಮ್ಮುತಿಹನಡಿಗಡಿಗೆ,
ತಮ್ಮಪ್ಪ ಹಾಯೆನುವ, ಬೀಡಿಯ ಬಿಟ್ಟು
ತುಮ್ಮನಿರಲಾರ. ಸರ್ವಜ್ಞ. *॥ ೩೧ ॥



FIXED DEPOSITS
ARE NOW RECEIVED ON THE FOLLOWING RATES:—
5½% p. a. for 6 months
6 ,, ,, 12 ,,
6½ ,, ,, 24 ,,
INTEREST BEING PAYABLE EVERY QUARTER.
Please apply for further particulars
The Udipi Bank, Ltd.,
UDIPI.

ಕಾಸು ಪೀಸೆಂದು ಇಂಗ್ಲೀಸುಡಾಯಿಸಿ, ತಿರುಪಿ
ಮಾಸೆಯನು, ಬೆತ್ತವನು ಬೀಸಿ ನಡೆವಂಗೆ
ಕಾಸು ಮಾವಿಾಸು. ಸರ್ವಜ್ಞ. *॥ ೩೨ ॥

ವೃದ್ಧರಾ ಭಯವಿಲ್ಲ, ಬುದ್ಧರಿಗೆ ನಯವಿಲ್ಲ,
ಗುದ್ದಾಟದಲ್ಲಿ ಸ್ವಯವಿಲ್ಲ; ಸಿದ್ಧವೇ
ಶುದ್ಧ ಸ್ವತಂತ್ರಿ. ಸರ್ವಜ್ಞ. ॥ ೩೩ ॥

ಪ್ರಥಮ ಬಲ್ಮೆಯ ಭಟ್ರು, ದ್ವಿತಿ(ೀ)ಯ ಬನ್ನಿರಿ ಕುಂಡ್ರಿ,
ತೃತಿ(ೀ)ಯ ನಿನ್ನೆಯ ಬಟ್ಟ, ಚತುರ್ಥಕೆ ನಾಯ್ಕ
ಹತಹತೇ ಎಂಬ. ಸರ್ವಜ್ಞ. ॥ ೩೪ ॥

ಊಟದಾ ಗೊಡವೆಯಿಲ್ಲಾಟ ಪಾಠಕೆ ಮನಸು
ನಾಟದು, ಸದಾ ಧ್ಯಾನ ಕಾಫಿತೀನಿಗಳ
ಹೋಟೇಲಿನಲ್ಲಿ. ಸರ್ವಜ್ಞ. *॥ ೩೫ ॥

ಬಾಯಸ್ಕೋಪಿನ ರುಚಿಯು, ಬಾಯ ರುಚಿ, ಸುಂದರೀ-
ಬಾಯ ಮಗ್ಗುಲ ರುಚಿಯು ತೀರೆ, ಲೋಕದೊಳು
ಬಾಯೆಂಬರುಂಟೆ? ಸರ್ವಜ್ಞ. ॥ ೩೬ ॥

ಹರಿಯುವುದು ಪರಿವಾರ ಹರಿವಾಣ ತೆರೆದಿರಲು,
ಹಿರಿಯುವುದು ಹಣ ಸರಿಯೆ ತಿರುಪುತ ಮೊಗವ,
ಹರಿಹರೀ! ಎಂದ. ಸರ್ವಜ್ಞ. *॥ ೩೭ ॥

ತಾನೆ ವೇದಾಂತಿಯೂ, ತಾನೆ ಗೀತಾರ್ಥಿಯೂ,
ತಾನೆ ಭಕ್ತಜ್ಞಾನಿಯೆಂಬುವನ ಕರ್ಮ
ಶಾನೆ ಸಿಲುಕಿಹುದು. ಸರ್ವಜ್ಞ. *॥ ೩೮ ॥

ಭಗವತ್ತು ಗೀತೆಯನು ತೆಗೆದೆತ್ತ ನೋಡಿದರು,
ಮಿಗೆ ಕ್ರೋಧ ಕಾಮ ಲೋಭಗಳಿಂದ ಮುಕ್ತ
ಹೊಗುವನೆಂದಿಲ್ಲ. ಸರ್ವಜ್ಞ. ॥ ೩೯ ॥

ಸಮತೆ ವಾದಿಗಳಲ್ಲಿ ಮಮತೆ ಬೇಡವೆ ಬೇಡ!
ತಮಗೆ ತಮ್ಮವರಿಂಗೆ ಹೆಚ್ಚು, ಮಿಕ್ಕವರು
ಸಮವೆಂಬ ಭಾವ. ಸರ್ವಜ್ಞ. ॥ ೪೦ ॥

ನ್ಯಾಯ ಪಥವೊಂದುಂಟು, ನಾಯ್ಯ ಪಥವೊಂದುಂಟು,
ನಾಯ್ಯ ಪಥಕಿಂತಲು ಕೃತಘ್ನತೆಯು ಬಹು
ಹೇಯ ಪಥವಂತೆ. ಸರ್ವಜ್ಞ. ॥ ೪೧ ॥

ಉಟ್ಟ ಬಟ್ಟೆಯ ಬಿಚ್ಚಿ ಕಟ್ಟುವನು ತಲೆಸುತ್ತ,
ನೆಟ್ಟನೆ ನಲಿವನಚ್ಚುತ್ತ, ತನಗೊಂದು
ಪುಟ್ಟೆ ಅಧಿಕಾರ! ಸರ್ವಜ್ಞ. *॥ ೪೨ ॥

ಟರ್ರೆಂದು ಬರುವನೂ, ಭುರ್ರೆಂದು ಹಾರುವನು,
ಕರ್ರೆಂದು ಕೆರೆವನು, ಬೀರದಧಿಕಾರಿ
ಘುರ್ರೆಂದು ಮೊರೆವ. ಸರ್ವಜ್ಞ. ॥ ೪೩ ॥

ಮುರ್ಕಟನು ಸುರೆ ಕುಡಿಯೆ, ಕರ್ಕಟವಿರಿಯೆ, ಪಿಶಾ-
ಚರ್ಕಳು ಪಿಡಿದೊಲು ಧನಾಧಿಕಾರ ಮದ-
ಕರ್ಕಶನ ಸೊಕ್ಕ್ಯು. ಸರ್ವಜ್ಞ. ॥ ೪೪ ॥

ಪೇರು, ನಾರಿರಲಿ, ಇಸ್ಕೂರು ಜಾರಿರಲಿ, ಕಾ-
ಲೂರಿ ಹಣಿಗೀರಿ ಮಿತಿಮೀರಿ ಹಾರಿ ಬಹ-
ದೂರ ವಿಲೆವಾರಿ! ಸರ್ವಜ್ಞ. ॥ ೪೫ ॥

ಬಹದೂರು ಬೇಕೆಂದು ಬಹುದೂರವೋಡಿದಡೆ,
ಬಹುದು ಗುಣದೋಷಗಳನಡಗಿಪ್ಪುದೆಂ-
ಬ ಹುದುಗವೆ! ಕಾಣೊ! ಸರ್ವಜ್ಞ. ॥ ೪೬ ॥

WANTED

In the South Kanara District young and ambitious men on very liberal terms, to represent the BHARAT INSURANCE COMPANY, LTD., LAHORE. An excellent opportunity to earn a decent living.

Apply to:—
DUTT & CO., *Chief Agents,* KARWAR.

ವಿಚಿತ್ರ-ಚಿತ್ರ-ಪತ್ರಾವಳಿ

(ಮಳೆಗಾಲದ ಸಾಹಿತ್ಯ)

ಕೇಳಿರಯ್ಯಾ ಆ ಮಹಾಪುರುಷನ ಜೀವಿತ ಚರಿತಮ್ಂ!

ಇತ್ತ ಹುಟ್ಟಿದಂಥಾ ಆ ಗಂಡು ಶಿಶುವಿಗೆ ಬ್ರಹ್ಮಶಾಪ ನಿಮಿತ್ತವಾಗಿ ಹಿಡಿದಂಥಾ ಬಾಲಗ್ರಹ ಬಿಡದಿರಲು, ಮಗುವಿನ ತಂದೆ ದೇವರ ಕಾಣಿಕೆ ಡಬ್ಬಿಯನ್ನು ಒಡೆದು, ಅದರೊಳಗಿನ ಮುಡಿಪನ್ನು ಸುಳಿದಿರಿಸಿ, ಸತ್ತ ಮೇಲೆ ಹರಿಕೆಯನ್ನು ಸಲ್ಲಿಸುವೆನೆಂದರೂ ಆ ಗ್ರಹ ತೊಲಗದಿರಲು, ಮನೆಯವರು ಗೋಳಾಡಿ, ಜೋಲಾಡಿ, ಓಲಾಡಿ, ನೇತಾಡಿ, ಜೋತಾಡಿ ಕಡು ಶೋಕದಿಂದ ಮೈಮರೆದು ನಗುತಿರಲು, ಐತಂದನೈ ಓರ್ವ ತೆಂಕಣ ಮಲೆಯಾಳಿ ಶಂಜರನ್, ಶಂಜರನ್ ಎನುತ.

ಮಲೆಯಾಳಿ:—ಇದು ಎಂದ್? (ಏನು) ಇಂಗನೆ ಉಂಡಲ್ಲೊ! (ಹೀಗೆ ಇದ್ದೀರಲ್ಲ!)

ಅಷ್ಟರಲ್ಲಿ ಮನೆಯ ಯಜಮಾನರು ಮೂರ್ಛೆಯಿಂದ ಎಚ್ಚೆತ್ತು ಅಗ್ಗಷ್ಟಿಕೆಯ ಬೂದಿಯನ್ನು ಬಡಿದುಕೊಂಡ ಈ ಭಸ್ಮಾಸುರನಂ ಕಂಡು ಪರಶಿವನೇ ಪ್ರತ್ಯಕ್ಷನಾದಂತೆ ಭಾವಿಸಿ ಮಣೆಯಂ ನೀಡಿ ಕುಳ್ಳಿರಿಸಲು:—

ಮಲೆಯಾಳಿ:—ಎಂದಾ ಇದ್ ಪರಿಭ್ರಮು! (ಇದೇನು ಭ್ರಮೆ!)

ಯಜಮಾನ:—ನಮ್ಮ ಮಗುವಿಗೆ ಕಾಹಿಲೆ.

ಮಲೆಯಾಳಿ:—ಕುಟ್ಟಿಕ್ಯ ಸೌಕೆಡೋ? (ಮಗುವಿಗೆ ಕಾಹಿಲೆ) ಓಃ! ಅದು ಸಾರವಿಲ್ಲಾ. ನಮಕು (ನಮಗೆ) ಮಂತ್ರವಾದಂ ಅರಿಯಾ; (ತಿಳಿದಿದೆ) ವೈದ್ಯಂ ಅರಿಯಾ. ಮನಸಿಲಾಯೋ? (ತಿಳಿಯಿತೇ?) ನಾಂ (ನಾವು) ಒರು (ಒಬ್ಬ) ಪೊಣ್ಣೊವುಗು (ಹೆಂಗಸಿಗೆ) ಮಂತ್ರವಾದಂ ಇಪ್ಪೊಳ್ (ಈಗ) ಚೆಯ್ದು (ಮಾಡಿ) ಬಂತು. ಅವುಡೆ (ಅಲ್ಲಿ) ಒರು (ಒಬ್ಬ) ಎಕ್ಕಡ (ಹೆಗ್ಗಡೆ) ಉಂಡಲ್ಲೋ! (ಉಂಟಲ್ಲ) ಅವರ ಮನೆಕು (ಮನೆಗೆ) ನಾಂ (ನಾವು) ಪೋಯಿ (ಹೋಗಿ) ಒರು (ಒಂದು) ಕೊಂಡೆ (ಕುಡ್ತೆ) ತುಪ್ಪೆ (ತುಪ್ಪ) ಘೃದಂ ಕೊಡ್ತು (ಕೊಟ್ಟಿತು); ಪತ್ತು ರುಪಿಯ (ರೂಪಾಯಿ) ಕಿಟ್ಟಿ (ಸಿಕ್ಕಿತು). ಅವರುಕು (ಅವರಿಗೆ) ಸುಖ ಆಯಿ (ಕ್ಷೇಮವಾಯ್ತು). ಇಪ್ಪೊಳ್ (ಈಗ) ಕುಟ್ಟಿ ಎವುಡೆ? (ಮಗುವೆಲ್ಲಿ?) ಮುಂಬೆ (ಈ ಮೊದಲು) ಕುಟ್ಟಿಕ್ಯ (ಮಗುವಿಗೆ) ಚಿಕಿಲ್ತ್ಸೆ (ಔಷಧ) ಉಂಡಾಯೋ? (ಇತ್ತೋ) ಡಾಕ್ಟರ್‌ಮ್ಮಾರ್ (ಡಾಕ್ಟರುಗಳು) ತೊಟ್ಟಾಲ್ (ಮುಟ್ಟಿದ್ದರೆ) ನಾಂ ಚಿಕಿಲ್ತ್ಸೆ ಮಾಳ್ಪೂಜ (ಮಾಡುವುದಿಲ್ಲ). ಡಾಕ್ಟರನ್ಮಾರುಕು (ಡಾಕ್ಟರರಿಗೆ) ಯೆಂಚಿನಾ (ಏನು) ಕೊತ್ತು ಉಂಡು? (ಗೊತ್ತುಂಟು) ಇದಿನೆ (ಇದಕ್ಕೆ) ಅಷ್ಟಾಂಗುಲ ಹೃದಯಂ ತನ್ನೆ (ಅಷ್ಟಾಂಗ ಹೃದಯವೇ ಸರಿ). ಕುಟ್ಟಿಯೇ ನೋಕಾಂ (ಮಗುವನ್ನು ನೋಡುವಾ) ಓಃ! ಈ ಕುಟ್ಟಿಕ್ಯ ರಿಕ್ತ ವಾತವೋ? (ಮಗುವಿಗೆ ರಕ್ತವಾತವೋ?) ಇದೆಂದ್? (ಇದೇನು?) ಕುಟ್ಟಿ ಪೆಟ್ಟಿ ಕಟ್ಟಿಯೋ? (ಮಗುವಿನ ಕೆಲಸ ಪೂರೈಸಿತೇ?) ನಮಕು ವೇಂಡ ಈ ಬುದ್ಧಿಮುಟ್ಟ್ (ನಮಗೀ ತೊಂದರೆ ಬೇಡ). ಡಾಕ್ಟರನ್ಮಾರೆ ವಿಳಿಚೋ! (ಡಾಕ್ಟರರನ್ನು ಕರೆಸಿ) ಶಂಜರಾ! ಶಂಜರಾ!

ಎಂದು ಹೊರಡಲು ಯಜಮಾನ ಡಾಕ್ಟರನಿಗೆ ಆಳನ್ನಟ್ಟಿ ಅವರು ಮನೆಯೊಳಗೆ ಬರುವಾಗ ಮಗು ಪೆಟ್ಟಿಗೆ ಕಟ್ಟಿತೆಂದು ಬಂದ ಡಾಕ್ಟರರಿಗೆ ಯಜಮಾನ ಕಣ್ಣುಸೊಂಜ್ಞೆಯಿಂದ ಸೂಚಿಸಲು ಡಾಕ್ಟರನು, 'ಚಿಂತ್ಯವಿಲ್ಲ; ಫೀಸು ನಾಳೆ ಕೊಡಿ'ರೆಂದು ಇಳಿದು ಹೋದನು.

ಇಷ್ಟರೊಳ್ ಸತ್ತ ಮಗು ಪಕ್ಕನೆ ಎದ್ದು ಕುಳಿತು, ನಾಲ್ದಿಕ್ಕು ನೋಡಿ, ಆಕಾಶಂ ಬಿರಿಯುವಂತೆ, ಸೂರ್ಯಮಂಡಲಂ ಹರಿಯುವಂತೆ, ಹಿಮಾಲಯದ ಶಿಖರಂ ಜರಿಯುವಂತೆ, ಅಳುತ್ತ ಗರ್ಜಿಸುತ್ತ ಬಟ್ಲರ್ ಸಾಹೇಬರ ಮಾತಿನಲ್ಲಿ ಹೀಗೆಂದಿತು:—

'I want an explanatory note from such money making doctors. And I shall have it leisurely in some hospital; or on some hospital bed! I am the most unearthly body of dyspeptic complaints with a long winded belly; I have noses intended for sniffing pollution; and those noses have exterior and interior parts with major and minor springs attached to them. You must know that I am a follower and admirer of a well known cunning saint and that I have incarnated on this earth to save the poor school master from the clutches of safety razors, pomade vaselines, neckties, collars and first class whisky bottles! I have no books for binding but have a book ready (on Africa or Eskimoland) to be published and those booksellers who are not prepared to publish that book for me at their risk and cost shall have my everlasting curse and revenge! Amen!'

ಯಜಮಾನ:—(ಕಣ್ಣುಸಂಜ್ಞೆಯಿಂದ) 'ಮಗು.....ಪೂರೈಸಿತು.'

ಡಾಕ್ಟರರು:—'ಚಿಂತ್ಯವಿಲ್ಲ; ಫೀಸ್ ನಾಳೆ ಕೊಡಿ.'

ಇದರ ಪೂರ್ವಾಪರವೂ, ಅರ್ಥವೂ ಯಾರಿಗೂ ತಿಳಿಯಲಿಲ್ಲ. ಎಲ್ಲರೂ ಸ್ವಪ್ನವೆಂದುಕೊಂಡರು. ಪೂರ್ವಜನ್ಮದ ಸ್ಮರಣೆ ಎಂದರು!

WIN RS. 5,000

-MOTOR CAR, Radio Sets, Gramophones, Typewriters and Study Scholarships.

Rs. 2,500—or a MOTOR CAR—First Prize (all correct)
Rs. 1,000—Second Prize (one error)
Rs. 500—Third Prize (two errors)
Rs. 500—Five Prizes of Rs. 100 each.
Rs. 300—Six Prizes of Radio Sets, Gramophone and Typewriters.
Rs. 200—Ten Scholarships for training in any of the under-mentioned subjects.

AND SEVERAL EXTRA PRIZES.

Here are five "SUBJECT" words which you have to place in order of their simplicity and usefulness to youngmen:

TYPEWRITING CORRESPONDENCE
OFFICE-ROUTINE SHORTHAND BOOKKEEPING

EXAMPLE—The first place is given to TYPEWRITING, as it is the first essential and most useful subject nowadays.

Now find out your choice and place the second, third, fourth and fifth words in the following column:

1	2	3	4	5
TYPEWRITING				

The sealed solution is deposited with the Continental Bank of India, Ltd., Bombay.

The result will be published in papers on 1st August, 1936.

RULES—1. An Entrance fee of Re. 1 per entry must accompany every entry by M. O. or postal order. 2. Any number of entries may be sent written on plain paper with full and legible address of the sender. 3. The Director's decision shall be final and legally binding in all matters. 4. In case of tie, the prize money shall be distributed equally among the successful winners. 5. The entrance fee is not refundable. 6. The result can be posted to the competitors sending an addressed and stamped envelope.

THE FEDERAL PRESS
DADAR, BOMBAY.

ವಿದೇಶ

ಅಮೆರಿಕದ ಲೆಕ್ಚರರುಗಳ ಸಂಘಗಳು ಅಬಿಸೀನಿಯದ ಚಕ್ರವರ್ತಿಗರ್ಣಾದ ಹೈಲಿ ಸೆಲಾಸಿಯವರನ್ನು ತಮ್ಮಲ್ಲಿಗೆ ಬರಬೇಕೆಂದೂ, ಉಪನ್ಯಾಸಗಳನ್ನು ಕೊಡಬೇಕೆಂದೂ ಪುನಃ ಕೇಳಿಕೊಂಡಿವೆ. ಅವರು ಇದಕ್ಕೆ ಒಪ್ಪಿಕೊಂಡಲ್ಲಿ ಅವರಿಗೆ ಮುಂದಿನ ಯುದ್ಧಕ್ಕೆ ಬೇಕಾದ ಹಣವು ಅಮೆರಿಕದಲ್ಲಿ ಸಂಗ್ರಹವಾಗುವ ಸಂಭವವೂ ಇರಬಹುದು!

ಡೆನ್ಮಾರ್ಕಿನಲ್ಲಿ ಯುನೈಟೆಡ್ ಸ್ಟೇಟ್ಸುಗಳ ಮಂತ್ರಿಯಾದ ಮಿಸೆಸ್ ರುತ್ ಬ್ರ್ಯಾನ್ ಓವನರು ಡೇನಿಶ್ ರಾಯಲ್ ಗಾರ್ಡ್‌ಗಳ ಕೇಪ್ಟನ್ ಬೋರ್ಗ್ ರೋಧು ಎಂಬವರನ್ನು ಮದುವೆಯಾಗಲಿರುವರು. ಇದು ವಾಶಿಂಗ್‌ಟನ್ನಿನ ಪ್ರಮುಖರಿಗೆ ಅಸಮಾಧಾನವನ್ನುಂಟುಮಾಡಿದೆ. ಇಂತಹ ಮದುವೆಗಳು ಮುಂದಾದರೂ ಆಗದಂತೆ ಅವರು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಗಾಜಾ ನಗರವಾಸಿಗಳ ಮೇಲೆ ಹೇರಿದ್ದ ೧ ಸಾವಿರ ಪೌಂಡುಗಳ ಅರ್ಥದಂಡದ ಕುರಿತು, ಆ ಪ್ರಜೆಗಳು ಅರಿಕೆ ಮಾಡಿಕೊಂಡಿದ್ದರ ಮೇಲೆ, ಪ್ಯಾಲಸ್ತೈನಿನ ಹೈ ಕೋರ್ಟಿನವರು ಸದ್ಯ ಅವರ ವಸೂಲಿಯನ್ನು ನಿಲ್ಲಿಸುವಂತೆ ಆಜ್ಞೆ ಕೊಟ್ಟಿದ್ದಾರೆ.

ಅಮೆರಿಕದಲ್ಲಿ ಇನ್ನೂ ಮಧ್ಯಪಶ್ಚಿಮ ಪ್ರಾಂತದಲ್ಲಿ ಉಷ್ಣೋಧಿಕ್ಯವು ಕಡಿಮೆಯಾಗಿಲ್ಲ. ಉಷ್ಣತರಂಗದಿಂದ ಅಲ್ಲಿ ೪೧೩೭ ಮಂದಿ ಸತ್ತಿರುತ್ತಾರೆ.

ರಾಜ್ಯದ ಮೇಲೆ ಸದ್ಯದಲ್ಲಿಯೇ ಒಂದು ವಿಪ್ಲವವನ್ನು ಹೂಡಲಿದ್ದರೆಂಬ ಆರೋಪದ ಮೇಲೆ, ಮೆಡ್ರಿಡಿನಲ್ಲಿ ೧೮೫೫ ಮಂದಿ ಸ್ಪೇನಿಶ್ ಫೇಶಿಯಿಸ್ಟ್ ಪಂಗಡದ ಮುಖಂಡರನ್ನೂ ಅಧಿಕಾರಿಗಳನ್ನೂ ಕೈದು ಮಾಡಿರುತ್ತಾರೆ. ಅಲ್ಲೀಗ ದಂಡುಕಾನೂನು ಬಂದಿದೆ.

ನಮ್ಮ ಚಕ್ರವರ್ತಿಗಳಾದ ಎಡ್ವರ್ಡರು ೬ ಸೈನ್ಯದ ತುಕ್ಕಡಿಗಳಿಗೆ ಹೊಸ ನಿಶಾನೆಗಳನ್ನು ಹೈದ್ ಪಾರ್ಕಿನಲ್ಲಿ ದಯೆಪಾಲಿಸುತ್ತ, ಮಾನವ ವರ್ಗವು ಶಾಂತಿಗಾಗಿ ಕೂಗುತ್ತಿದೆ ಎಂದೂ, ಯುದ್ಧದ ಭಯಾನಕ ದೃಶ್ಯಗಳು ಇನ್ನೆಂದೂ ಉಂಟಾಗದಿರಲೆಂದೂ ಹಾರೈಸಿದರು. ಶಾಂತಿಪ್ರಿಯರಾದ ಕೀರ್ತಿಶೇಷ ಚಕ್ರವರ್ತಿಗಳಾದ ತಮ್ಮ ಜನಕರ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾವಿಸಿದರು.

ಇಂಗ್ಲಿಷ್ ಸಟಿಯೊಬ್ಬಳನ್ನು ಅಪಹರಿಸಿದ್ದ ಇಬ್ಬರು ಎಡಿನ್‌ಬರೋ ವಿದ್ಯಾರ್ಥಿಗಳಿಗೆ ೫ ಮತ್ತೂ ೩ ಪೌಂಡುಗಳ ಜುಲ್ಮಾನೆಯು ವಿಧಿಸಲ್ಪಟ್ಟಿತು.

ಹೈಲ್ ಸೆಲಾಸಿಯವರಿಂದ ನಿರ್ಬಂಧವಾಸದಲ್ಲಿರಿಸಲ್ಪಟ್ಟು, ಕಳೆದ ನವೆಂಬರದಲ್ಲಿ ಮೃತರಾದ ಲಿಜ್ ಯಸೂಯವರ ಮಗ ಮೆನಿಲೀಕ್ III ಇವರು, ಈಗ ಅಬಿಸೀನಿಯಾ ಜನಗಳ ಸಹಾನುಭೂತಿಯನ್ನು ಸಂಪಾದಿಸಲು ನೋಡುತ್ತಿದ್ದಾರೆ. ಅಬಿಸೀನಿಯಾ ಯುದ್ಧದ ಆರಂಭದಲ್ಲಿ ಇವರನ್ನೇ ಅಬಿಸೀನಿಯದ ಚಕ್ರವರ್ತಿಗಳಾಗಿ ಸಾರಬೇಕೆಂದು ಇಟೆಲಿಯವರು ಹವಣಿಸಿದ್ದರು.

ವಿಷವಾಯುವಿನ ಮುಖವಾಡಗಳಿಗಾಗಿ ಬ್ರಿಟನಿನಲ್ಲಿ ೮೫,೦೦೦ ಪೌಂಡುಗಳನ್ನು ಮಂಜೂರು ಮಾಡಿದ್ದಾರೆ. ಬ್ರಿಟನಿನ ಪ್ರಜೆಗಳು ಈ ಮುಖವಾಡಗಳನ್ನು ಹೇಗೆ ಕೊಳ್ಳುವ ಅಭ್ಯಾಸ ಮಾಡಬೇಕಂತೆ!

ಈಜಿಪ್ಟಿನ ಗ್ರಾಮಾಂತರಗಳಲ್ಲಿ ಮಸೀದಿಗಳ ನಿರ್ಮಾಣಕ್ಕಾಗಿ ಅಲ್ಲಿನ ಮಂತ್ರಿಮಂಡಲವು ೪ ಲಕ್ಷ ಪೌಂಡುಗಳನ್ನು ಮಂಜೂರು ಮಾಡಿದೆ.

ಅಬಿಸೀನಿಯದ ಗೋರಾ ಪ್ರಾಂತದಲ್ಲಿ ಚಕ್ರವರ್ತಿಗಳ ಕಡೆಯಿಂದ ಸೈನ್ಯ ಸಂಗ್ರಹವಾಗುತ್ತಿದೆ. ಪ್ರಸಿದ್ಧ ಸೇನಾಪತಿ ಮೆಕಸನ್, ರಾಸ್ ಕಾಸನ ಮಗ, ಅತನ ಸಹೋದರ ಮೊದಲಾದವರೆಲ್ಲ ಯುದ್ಧಸನ್ನದ್ಧರಾಗುತ್ತಿದ್ದಾರೆ.

ವಿಮಾನಬಲದ ಆಕ್ರಮಣದ ವಿಷಯದಲ್ಲಿ ಅನುಭವ ಕೊಡತಕ್ಕ ಒಂದು ಪುಸ್ತಕ ಇಂಗ್ಲೆಂಡಿನಲ್ಲಿ ತಯಾರಾಗುತ್ತಿದೆ. ಪ್ರತಿ ಮನೆಗೂ ಆ ಪುಸ್ತಕದ ಪ್ರತಿಯನ್ನು ಕೊಡಲಾಗುವುದು.

ಕೆಮಾಲ್ ಅಟಾಟುರ್ಕರ ದತ್ತದ ಮಗನಾದ ಸಬಿಲ್ಲಾ ಜಿ. ಹಸಂರವರು ಟರ್ಕಿ ಸೈನ್ಯಬಲದ ಪ್ರಥಮ ಮಹಿಳಾ ಸಿಪಾಯರಾಗಿರುವರು. ಇವರು ವಿಮಾನಶಿಕ್ಷಣ ಪಡೆದು, ಆ ಬಲದ ಆಫೀಸರರಾಗುವರು.

ಯೆಹೂದ್ಯರ ಮಕ್ಕಳಲ್ಲದ ಇತರ ಶಾಲಾ ಹುಡುಗರು ರಜೆಯ ಸಂಬಂಧ ಯೆಹೂದ್ಯರ ಡಾಕ್ಟರರ ಸರ್ಟಿಫಿಕೇಟುಗಳನ್ನು ಹಾಜರು ಮಾಡಕೂಡದೆಂದು ಜರ್ಮನಿಯಲ್ಲಿ ರಾಜಾಜ್ಞೆ.



ಕಾರ್ಖಾನೆಯ ಪ್ರತಿನಿಧಿಗಳು
ಜೋಜ್ ಆಂಡ್ ಸೇಮೂರ್, ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸು, ಕರಾಚಿ, ಲಾಹೋರ್, ದಿಲಿ.

ಕೇರಳದ ಸಾಬೂನುಗಳು

ಪೂರ್ಣವಾಗಿಯೂ ಅವು ಸ್ವದೇಶಿಯಾದುದರಿಂದಲೇ ನೀವು ಉಪಯೋಗಿಸಿರೆನ್ನುವುದಲ್ಲ; ಅವೇ ಉತ್ಕೃಷ್ಟವಾದುವು. ಅವು ಉತ್ಕೃಷ್ಟವಾದ ಸಾಧನಗಳಿಂದ, ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:—ಆರ್. ಸಿ. ದಲಾಲ್, ಕಲ್ಲಿಕೋಟೆ.

ಪರ್ಮಾನನ್ ಮಾತ್ರೆಗಳು
ಉನ್ಮಾದಕ್ಕೆ ಸಂಜೀವನ!

ಉಗ್ರವಾಗಿರುವ ಹುಚ್ಚು; ಮೌನವಾಗಿರುವ ಹುಚ್ಚು; ದೀರ್ಘಕಾಲದ ಹುಚ್ಚು; ಅಲ್ಪ ಕಾಲದ ಹುಚ್ಚು; ನಿದ್ರಾನಾಶ, ಮನೋವಿಕಾರ, ಅಪಸ್ಮಾರ, ಹೆಂಗಸರಿಗುಂಟಾಗುವ ಸ್ಫೂರ್ತಿಕಾವಾಯು, ಹಿಸ್ಟೇರಿಯಾ—ಎಂತಹ ಹುಚ್ಚು, ಬುದ್ಧಿಭ್ರಮಣೆಗಳಿಗೂ ಅವಶ್ಯ ಉಪಯೋಗಿಸಿ.

ಇದರಲ್ಲಿ ಅಮಲುಪದಾರ್ಥಗಳಿಲ್ಲ; ಶುದ್ಧ ವನಸ್ಪತಿಗಳದ್ದೇ ತಯಾರಿ.

60 ಮಾತ್ರೆಗಳ ಬಾಟಲಿಯೊಂದಕ್ಕೆ ಬೆಲೆ ರೂ. 3/8/0 ಮಾತ್ರ.
ವಿ. ಪಿ. ಚಾರ್ಜು ಪ್ರತ್ಯೇಕ.

ವ್ಯಾಪಾರಸ್ತರಿಗೆ ಕವಿಷನ್ ಕೊಡಲಾಗುವುದು.

ವಿಳಾಸ:—ಸಿ. ವೈಕುಂಠ ಕಾಮತ್,
ಹಿಸ್ಟೀರಿಯಾ ಎಂಡ್ ಮೆಂಟಲ್ ಎಕ್ಸ್‌ಪರ್ಟ್,
ಪೋಸ್ಟ್ ಉಡುಪಿ, ದ. ಕನ್ನಡ.

ಅಮೆರಿಕದಲ್ಲಿ ಶೇಕಡ ೧೫ರಷ್ಟು ಮರಣವು ಗರ್ಭಪತನದಿಂದ ಎಂದು ಕನ್ಸಾಸ್ ಪಟ್ಟಣದ ಮೆಡಿಕಲ್ ಅಸೋಸಿಯೇಶನಿನವರ ಲೆಕ್ಕ. ದಿನಂಪ್ರತಿ ಸರಾಸರಿ ಮೂರು ಸ್ತ್ರೀಯರು ಗರ್ಭನಾಶದ ದೆಸೆಯಿಂದಾದ ಮರಣವಾಗುವ ಕಾರಣ ಒಂದು ವರ್ಷಕ್ಕೆ ಸಾಧಾರಣ ೭,೦೦,೦೦೦ ಸ್ತ್ರೀಯರು ಮಡಿಯುವರೆಂದು ಎಣಿಸಲಾಗಿದೆ.

ಧರ್ಮಾಪುರದ ರಾಣಾರವರು ಮೊಸ್ಕೋವಿನ ಮಾರ್ಗಸ್ಥರಾಗಿ ಪೋಲಾಂಡಿಗೆ ತಲುಪಿ, ಅಲ್ಲಿನವರಿಂದ ಸ್ವಾಗತ ಪಡೆದರು.

ನಮ್ಮ ಚಕ್ರವರ್ತಿಗಳ ಪಟ್ಟಾಭಿಷೇಕ ಸಮಾರಂಭ ಕಾಲದಲ್ಲಿ ನಡೆಯುವ ಸುಮಾರು ೧೦ ವಿಲ್ಯ ಪೌಂಡು ಬೆಲೆ ಬಾಳುವ ನಿಶಾನೆ ವ್ಯಾಪಾರದ ವಿಷಯದಲ್ಲಿ ಬ್ರಿಟಿಶ್ ಮತ್ತೂ ಇತರ ದೇಶಗಳ ಕೈಗಾರಿಕೆಗಳವರೊಳಗೆ ದೊಡ್ಡ ಕಾದಾಟವಾಗುತ್ತಿದೆ.

ಮೆಡಿಟರೇನಿಯನ್ ಸಮುದ್ರದಿಂದ ಬ್ರಿಟಿಶ್ ನೌಕಾಬಲವು ಬ್ರಿಟನಿಗೆ ಹಿಂದಿರುಗಿದೆ.

ಅಬಿಸೀನಿಯದಲ್ಲಿ ಗೋರಿಲ್ಲಾ ರೀತಿಯ ಯುದ್ಧವು ಆರಂಭವಾಗಿದೆ. ಇಂಗ್ಲೆಂಡಿನಿಂದ ರೆಡ್‌ಕ್ರಾಸಿನವರು ಪಶ್ಚಿಮ ಅಬಿಸೀನಿಯಕ್ಕೆ ಹೊಯ್ದಿದ್ದಾರೆ.

ಮಂಚೂರಿಯದಲ್ಲಿ ಹುಸೇನ್ ಎಂಬ ಅಭರಣಗಳ ವ್ಯಾಪಾರಿಯನ್ನೂ, ಅವನ ಹೆಂಡತಿಯನ್ನೂ ನಿರ್ಬಂಧವಾಸದಲ್ಲಿರಿಸಿ ಅವಶನ್ನು ಹಿಂಸಿಸಿದರೆಂಬ ಕುರಿತು, ಟೋಕಿಯೊದ ಬ್ರಿಟಿಷ್ ರಾಯಭಾರಿಗಳು ಜಪಾನೀ ಅಧಿಕಾರಿಗಳನ್ನು ದೂರಿರುತ್ತಾರೆ.

ಫಿಲಿಪ್ಪೈನ್ ದೇಶದಲ್ಲಿ ಚುನಾವಣೆ ಸಂಬಂಧ ವಿವಾದವೆದ್ದು ಓಟುಗಳ ಪೆಟ್ಟಿಗೆಯನ್ನು ಕೋರ್ಟಿಗೆ ತರಿಸಿ ನೋಡಿದಾಗ ಅದರಲ್ಲಿ ಗೆದ್ದಲು ಸೇರಿಕೊಂಡು ಓಟುಗಳನ್ನು ನಾಶಮಾಡಿದ್ದವು.

ಕೇಂಟಿನಲ್ಲಿ ೨,೦೦೦ ಮಂದಿ ಸ್ತ್ರೀ ಕ್ವಾರಿಕರು ಇರುವರು. ಗಂಡಸರಿಗಿಂತ ಹೆಚ್ಚು ಆದಾಯವು ಇವರಿಗೆ ಬರುತ್ತದೆ. ಅದರೆ ಅಲ್ಲಿನ ಸರಕಾರವು ಸ್ತ್ರೀಯರಿಂದ ಆಗುವ ಈ ವೃತ್ತಿಯನ್ನು ನಿಲ್ಲಿಸಲು ಆಲೋಚಿಸುತ್ತಿದೆ.

JAYA LAXMI BANK, LT'D.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.
ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರಟರಿ.



'ಮಿಂಚಿನಂತೆ ಚಂಚಲವಾದುವಾವುದು?—ಧನವು; ಯೌವನವು; ಆಯುಸ್ಸು. ಶ್ರೇಷ್ಠವಾದ ದಾನವಾವುದು?—ಒಳ್ಳೆಯ ಯೋಗ್ಯರಿಗೆ ಕೊಡುವುದು. ಪ್ರಾಣೋತ್ಕ್ರಮಣಕಾಲದಲ್ಲಿಯೂ ಮಾಡಬಾರದುದೂ ಮಾಡಬೇಕಾದುದೂ ಆವುವು?-ಪಾಪವು, ಮತ್ತೂ ಧರ್ಮಕಾರ್ಯವು.' ಸೂಕ್ತಿಮಾಲಿ.

XVIII] ಮಂಗಳೂರು, ತಾ. ೨೧—೭—೧೯೩೬ [೩೩ ೧೯೫೫ ಧಾತು ಸಂ। ಶ್ರಾವಣ ಶು। ೩ ಕುಜವಾರ.

ಭಾರತ ವಿಶ್ವವಿದ್ಯಾಲಯಗಳ ಪ್ರಕೃತ ಸ್ಥಿತಿ.

ಕಲ್ಕತ್ತಾ ವಿಶ್ವವಿದ್ಯಾಲಯದ ಲೆಕ್ಕಾಚಾರದ ಬೋರ್ಡಿನ ಪ್ರೆಸಿಡೆಂಟರು, ಆ ವಿಶ್ವವಿದ್ಯಾಲಯದ ೧೯೩೬—೩೭ನೆ ಇಸ್ವಿಯ ಬಜೇಟಿನ ಅಂದಾಜು ಪಟ್ಟಿಯನ್ನು ಮುಂದಿಡುತ್ತ 'ಇದು ವೃದ್ಧಿ ಸೂಚಕವಾದ ಆಯವ್ಯಯದ ಪಟ್ಟಿಯಲ್ಲ. ನಮಗೆ ಯಥೇಷ್ಟವಾದ ಆದಾಯಕ್ಕೆ ಮಾರ್ಗವಿಲ್ಲದಿರುವುದೇ ಇದಕ್ಕೆ ಕಾರಣ. ಹಿಂದೆ ನಮಗೆ ಪರೀಕ್ಷೆಗೆ ಬರುತ್ತಿದ್ದ ವಿದ್ಯಾರ್ಥಿಗಳಿಂದ ಆದಾಯ ವಿರುತ್ತಿದ್ದಿತು; ಆದರೆ ಗವರ್ನಮೆಂಟ್ ಗ್ರಾಂಟು ಕತ್ತರಿಸಲ್ಪಟ್ಟಿರುವ ಕಾರಣ, ವಿಶ್ವವಿದ್ಯಾಲಯವು ತನ್ನ ಆದಾಯದ ಸಂಪೂರ್ಣ ಪ್ರಯೋಜನವನ್ನು ಪಡೆಯಲಾರದೆ ಹೋಗಿದೆ' ಎಂದರು.

ಪ್ರೆಸಿಡೆಂಟರು, ಈ ಕುರಿತು, ಇದ್ದುದನ್ನೇ ಹೇಳಿರುವರು. ಕಳೆದ ನ್ಯಾಯವಿಧಾಯಕ ಎಸೆಂಬ್ಲಿಯಲ್ಲಿ ಪ್ರಶ್ನೆ ಬಂದಾಗ, ಸರ್. ಗಿರಿಜಾ ಶಂಕರ್ ಬಜಪೇಯರವರು, ೧೯೩೦—೩೧ರಲ್ಲಿಯೂ, ೧೯೩೪—೩೫ರಲ್ಲಿಯೂ ಇಂಡಿಯದ ವಿಶ್ವವಿದ್ಯಾನಿಲಯಗಳಿಗೆ ಕೊಡಲಾದ ಸರಕಾರೀ ಗ್ರಾಂಟಿನ ಅಂಕೆಸಂಖ್ಯೆಗಳನ್ನು ಮುಂದಿಟ್ಟರು. ಈ ಅಂಕೆಸಂಖ್ಯೆಗಳನ್ನು ನೋಡಿದರೆ, ಸಾಮಾನ್ಯ ನಮ್ಮ ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ಗ್ರಾಂಟನ್ನು ಕತ್ತರಿಸಿ ಕೊಡುವ ಧೋರಣೆಯ ಮೂಲಕ, ನಮ್ಮ ವಿಶ್ವವಿದ್ಯಾನಿಲಯಗಳು ಹೇಗೆ ಅರ್ಧ ಹೊಟ್ಟೆಯಿಂದ ಬದುಕಿವೆ ಎಂದು ವಿಶದವಾಗುತ್ತಿದೆ. ಪ್ರಾಯಶಃ, ನಮ್ಮ ಅಧಿಕಾರಿಗಳು ಇಂಡಿಯದಲ್ಲಿ ವಿಶ್ವವಿದ್ಯಾಲಯಗಳ ಶಿಕ್ಷಣವನ್ನು ನಿರುತ್ಸಾಹಗೊಳಿಸಬೇಕೆಂದೂ, ಅದರ ಸೌಕರ್ಯಗಳನ್ನು ಕುಗ್ಗಿಸಬೇಕೆಂದೂ ನಂಬಿರುವುದರಿಂದಲೇ, ಈ ಗ್ರಾಂಟಿನ ಕತ್ತರಿಗೆ ಕಾರಣವಾಗಿರಬೇಕೆಂದು ತಿಳಿಯಬಹುದಾಗಿದೆ. ಹಾಗಿದ್ದರೆ, ಅದು ತಪ್ಪು ಅಭಿಪ್ರಾಯವೆನ್ನಬೇಕು. ಇದರಲ್ಲಿ, ಅಕ್ಷರಜ್ಞಾನದ ಕೊರತೆ ಇರುವ ಇಂಡಿಯದಂತಹ ದೇಶದಲ್ಲಿ, ಪ್ರಾಯಮ್ಕರಿ ಶಿಕ್ಷಣವೇ ಮುಖ್ಯವೆಂಬುದನ್ನು ಒಪ್ಪೋಣ. ಹಾಗೂ, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಈಗ ದೊರೆಯುತ್ತಿರುವ ಶಿಕ್ಷಣವು, ನಮ್ಮ ಯುವಕರ ಆವಶ್ಯಕತೆಗಳಿಗೆ ಅನುಸಾರವಾಗಿಲ್ಲವೆಂದೂ, ಅದರಿಂದ ಆ ಯುವಕರಲ್ಲಿ ನಿರುದ್ಯೋಗವು ತುಂಬಿದೆ ಎಂದೂ ಇದನ್ನೂ ಒಪ್ಪೋಣ. ಆದರೆ ಅಷ್ಟು ಮಾತ್ರದಿಂದಲೇ, ವಿಶ್ವವಿದ್ಯಾಲಯದ ಶಿಕ್ಷಣವನ್ನು ನಿರುತ್ಸಾಹಗೊಳಿಸಬಹುದೇ? ಬದಲಾಗಿ ಅದರಲ್ಲಿರುವ ಕುಂದು ಕೊರತೆಗಳನ್ನು ತಿದ್ದಿ, ಈಗಿನ ನಮ್ಮ ಯುವಕರ ಆವಶ್ಯಕತೆಗಳಿಗೆ ತಕ್ಕಂತೆ ಮಾರ್ಪಾಡಿಸಕೂಡದೇ? ಮುಖ್ಯವಾಗಿ, ನಮ್ಮ ಯುವಕರು, ಈ ಉಚ್ಚ ಶಿಕ್ಷಣದಲ್ಲಿ ಹೆಚ್ಚು ಸಂಖ್ಯೆಯಿಂದ ಭಾಗವಹಿಸುವ ಹಾಗೆ, ಈ ಶಿಕ್ಷಣದ ಖರ್ಚು ಕಡಿಮೆ ಮಾಡುವುದು ಸೂಕ್ತವೂ, ಸಯುಕ್ತಿಕವೂ ಎಂದು ನನಗಂತೂ ತೋರುತ್ತದೆ. ಆದರೆ ಇವೆಲ್ಲವೂ ಪ್ರಾಯ್ಮರಿ ಶಿಕ್ಷಣವನ್ನು ಹಿಂದಿಕ್ಕಿ ಮಾಡುವ ಕೆಲಸಗಳಲ್ಲ. ಅಭಿನವೃದ್ಧಿಸೂಚಕವಾದ ಒಂದು ಸರಕಾರವು, ಅವೆರಡು ಶಿಕ್ಷಣಪದ್ಧತಿಗಳನ್ನೂ, ಉದಾರದೃಷ್ಟಿಯ ಧೋರಣೆಯಿಂದಲೇ ಮುನ್ನಡೆಯಿಸಬೇಕಾಗಿದೆ.

ಈ ದೇಶದಲ್ಲಿ ಈ ಉಚ್ಚ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡಬಾರದೆನ್ನುವವರು, ಕೊಂಚ ಬ್ರಿಟಿಶ್ ಗವರ್ನಮೆಂಟಿನ ಕಡೆಗೆ ತಿರುಗಿ ನೋಡಲಿ! ಅದೇನು ಮಾಡುತ್ತಿದೆ! ಅಥವಾ ಮಾಡಿದೆ! ಗ್ರೇಟ್ ಬ್ರಿಟನಿನ ಯುನಿವರ್ಸಿಟಿ ಗ್ರಾಂಟು ಕಮಿಟಿಯು-೧೯೧೯ರಲ್ಲಿ, ಸ್ಥಾಪಿಸಲ್ಪಟ್ಟುದು-೬ ವರ್ಷಗಳ ಬಳಿಕ ತನ್ನ ಚಟುವಟಿಕೆಗಳ ಕುರಿತು ವರದಿ ಮಾಡಿದೆ. ವರದಿಯಲ್ಲಿ ಅದು ಹಣ ಕಾಸಿನ ಸಂಗತಿಯನ್ನಷ್ಟೇ ಅಲ್ಲ; ಬ್ರಿಟಿಶ್ ಯುನಿವರ್ಸಿಟಿಗಳ ಸಾಮಾನ್ಯ ಪರಿಸ್ಥಿತಿಯ ಕುರಿತೂ ವ್ಯವಹರಿಸಿದೆ. ಕಮಿಟಿಯು ವರದಿಯಿಂದ ನಮಗೆ ತಿಳಿದುಬರುವುದೇನೆಂದರೆ,—೧೯೩೪-೩೫ರಲ್ಲಿ ಹದಿನಾರು ಬ್ರಿಟಿಶ್ ಯುನಿವರ್ಸಿಟಿಗಳಲ್ಲಿ, ಯುನಿವರ್ಸಿಟಿ ಕಾಲೇಜುಗಳಲ್ಲಿ, ಗ್ರಾಂಟಿನ ಸಹಾಯಕ್ಕೆ ಮುಂಜೂರಾತಿ ಪಡೆದ ಎರಡು ಟೆಕ್ನಿಕಲ್ ಕಾಲೇಜುಗಳಲ್ಲಿ ಒಟ್ಟಿಗಿದ್ದ ವಿದ್ಯಾರ್ಥಿಗಳ ಸಂಖ್ಯೆ ೫೦,೬೩೮; ಇವರಲ್ಲಿ ನಾಲ್ಕನೆಯ ಒಂದು ಅಂಶ ವಿದ್ಯಾರ್ಥಿನಿಯರು; ಮತ್ತೂ ಸಹಾಯ ಪಡೆದ ವಿದ್ಯಾರ್ಥಿಗಳು ೨೦,೫೧೮; ಸುಮಾರು ಸೇಕಡಾ ೪೨ ಮಂದಿ. ಅಂದರೇನು? ಬ್ರಿಟನಿನಲ್ಲಿ, ವಿದ್ಯಾರ್ಥಿವೇತನ, ಅಶನಾರ್ಥದ ಭತ್ತೆ, ಇತರ ವಿಧವಾದ ಗ್ರಾಂಟು ಮೊದಲಾದವುಗಳ ಮೂಲಕ ವಿಶ್ವವಿದ್ಯಾಲಯದ ಶಿಕ್ಷಣವು ಅವರಿಗೆಲ್ಲ ದೊರಕಲು ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇನ್ನು, ಇಂಡಿಯದಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳಿಗೆ ಗ್ರಾಂಟ್ ಕೊಡುವುದನ್ನು ಕತ್ತರಿಸುತ್ತಿರುವಾಗ, ಬ್ರಿಟಿಶ್ ಯುನಿವರ್ಸಿಟಿಗಳಿಗೆ ಯಾವ ಬಗೆಯ ಆರ್ಥಿಕ ಸಹಾಯವು ಎಷ್ಟು ಮಟ್ಟಿಗೆ ದೊರಕುತ್ತದೆಂದು ನೋಡೋಣ. ಸಂಸ್ಥಾನದಿಂದ ಈ ಯುನಿವರ್ಸಿಟಿಗಳಿಗೆ ಕೊಡುತ್ತಿದ್ದ ೧,೪೫೦,೦೦೦ ಪೌಂಡುಗಳು ೨,೧೦೦,೦೦೦ ಪೌಂಡುಗಳಿಗೆ ಏರಿಸಲ್ಪಟ್ಟಿದೆ. ಯಾವಾಗ? ಆ ಅವಧಿಯ ಮೊದಲನೆಯ ವರ್ಷದಲ್ಲಿ. ಅಲ್ಲದೆ, ಇನ್ನೂ ಆ ಉಚ್ಚ ಶಿಕ್ಷಣದ ಪ್ರೋತ್ಸಾಹಕ್ಕಾಗಿ, ಮುಂದಿನ ೫ ವರ್ಷಗಳಲ್ಲಿ ದೊರೆಯಬೇಕಾದ ದ್ರವ್ಯಸಹಾಯ ಸುಮಾರು ೧೦,೬೫೦,೦೦೦ ಪೌಂಡುಗಳು,—ಅಂದರೆ ಸುಮಾರು ೧,೫೦೦,೦೦೦ ಪೌಂಡು ಹೆಚ್ಚು ದೊರೆಯಬೇಕೆಂದೂ ಶಿಫಾರಸು ಆಗಿದೆ. ವಸ್ತುತಃ ಈಗ ದೊರೆಯುವ ೨,೧೦೦,೦೦೦ ಪೌಂಡುಗಳು ಎಂಬುದು ಬ್ರಿಟಿಶ್ ಟ್ರೆಜರಿಯ ಉತ್ಪತ್ತಿಯ ಮೂರರಲ್ಲಿ ಒಂದು ಅಂಶವಾಗಿದೆ. ಬ್ರಿಟಿಶ್ ಯುನಿವರ್ಸಿಟಿಗಳಿಗೆ ಹಲವು ಹಡಿವೆಂಟು ಎಂಡೋಮೆಂಟುಗಳ ದ್ರವ್ಯಸಹಾಯವೇ ಯಥೇಷ್ಟವಾಗಿದ್ದೂ, ಅದರ ಮೇಲೆಯೂ ಸರಕಾರದ ಗ್ರಾಂಟನ್ನು ಹೆಚ್ಚಿಸಲು ಹಿಂಜರಿಯಲಿಲ್ಲವೆನ್ನುವಾಗ, ಅಲ್ಲಿನ ಸರಕಾರವು ಯುನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಎಷ್ಟು ಮಟ್ಟಿಗೆ ಉದಾರಸಹಾಯವನ್ನು ನೀಡುತ್ತಿದೆಂದು ಸ್ವಯಂವ್ಯಕ್ತ.

ಆದರೆ ನಮ್ಮಲ್ಲಿನ ವ್ಯವಸ್ಥೆ ಏನಿದು? ಬ್ರಿಟಿಶ್ ಯುನಿವರ್ಸಿಟಿಗಳಿಗೆ ಒದಗದ 'ಪ್ರಪಂಚದ ಆರ್ಥಿಕ ದುರವಸ್ಥೆ'ಯು ನನುಗೆ ಮಾತ್ರ ಇಷ್ಟು ಮಟ್ಟಿಗೂ ಬಂದಿದೆಯೇ?

ನಮ್ಮ ಚಕ್ರವರ್ತಿಗಳ ಪ್ರಾಣೋಪಹಾರದ ಪ್ರಯತ್ನ.

ಕಳೆದ ತಾ. ೧೬ನೇ ಬೆಳಿಗ್ಗೆ, ನಮ್ಮ ಚಕ್ರವರ್ತಿಗಳು ಗಾರ್ಡುಗಳಿಗೆ ನಿಶಾನೆಯನ್ನು ದಯೆಪಾಲಿಸುವ ಸನ್ನಾರಂಭವನ್ನು ಮುಗಿಸಿಕೊಂಡು, ಹೈದ್ ಪಾರ್ಕಿನಿಂದ ಮೆರವಣಿಗೆಯ ಸಹಿತವಾಗಿ, ಕುದುರೆ ಸವಾರಿ ಮಾಡುತ್ತ ಹಿಂದಿರುಗುವ ಕಾಲಕ್ಕೆ, ನಮ್ಮ ಸಾರ್ವಭೌಮರ ಪ್ರಾಣಹರಣದ ಪ್ರಯತ್ನವೆಂಬಂತೆ ತೋರಿದ ವಿಸ್ಮಯಜನಕವೂ, ವಿಷಾದಕರವೂ ಆದ ಘಟನೆಯೊಂದು ನಡೆದುಹೋಯಿತು. ಚಕ್ರವರ್ತಿಗಳು, ಕುದುರೆಯನ್ನು ನಡೆಸಿಕೊಂಡು ಬರುತ್ತಿದ್ದ ಹಾಗೆ, ನೆರೆದಿದ್ದ ಪ್ರೇಕ್ಷಕಸಮೂಹದಲ್ಲಿದ್ದ ಒಬ್ಬ ಮನುಷ್ಯನು, ನಮ್ಮ ಚಕ್ರವರ್ತಿಗಳ ಕಡೆಗೆ, ಏನೋ ಒಂದು ವಸ್ತುವನ್ನು ಬಿಸಾಡಿದನು. ಅದು ಕುದುರೆಗೆ ತಗುಲಿ ಅದು ಒದ್ದುಬಿಟ್ಟಿತು. ಕೊನೆಗೆ ನೋಡಲಾಗಿ, ಅದೊಂದು ಪಿಸ್ತೂಲೆಂದು ಕಂಡುಬಂದಿತು.

ಚಕ್ರವರ್ತಿಗಳು, ವಿಶೇಷವೇನೂ ಸಂಭವಿಸದಂತೆ, ಮುನ್ನಡೆಯುವಾಗಲೇ, ಒಬ್ಬ ಪೋಲೀಸ್ ಸವಾರನು ನುಗ್ಗಿ, ಆ ಮನುಷ್ಯನ ಮೇಲೆ ಹಾರಿ, ಇತರ ಪ್ರೇಕ್ಷಕರ ಸಹಾಯದಿಂದ, ಆತನನ್ನು ಕೈದು ಮಾಡಿದನು. ಅಷ್ಟರಲ್ಲಿ ಸಹಾಯಕ್ಕೆ ಇತರ ಪೋಲೀಸ್ ಸವಾರರೂ ಬಂದರು.

ಕೈದಿಯನ್ನು ಅಲ್ಲಿಂದ ಸಾಗಿಸುತ್ತಿದ್ದ ಹಾಗೆ, ಯಾರೋ ಇನ್ನೊಬ್ಬನು ಬಂದು, ಪೋಲೀಸರೊಡನೆ ಕಿತ್ತಾಡಲು ಯತ್ನಿಸಿದನು. ಅವನನ್ನೂ ಕೈದು ಮಾಡಲಾಯಿತು.

ಚಕ್ರವರ್ತಿಗಳ ಕಡೆಗೆ ಪಿಸ್ತೂಲ್ ಬಿಸಾಟ ಮನುಷ್ಯನ ಹೆಸರು—ಜಾರ್ಜ್ ಎಂಡ್ರ್ಯೂ ಮಹೋನ್. ಅವನು ಪಶ್ಚಿಮ ಲಂಡನಿನ ನಿವಾಸಿಯು ಹಾಗೆ ತೋರಬರುತ್ತದೆ. ಅವನನ್ನು ಸ್ವೇಶನಿಗೆ ಸಾಗಿಸುತ್ತ 'ದೊರೆಗಳಿಗೆ ಗಾಸಿಯೇನೂ ಆಗಲಿಲ್ಲ; ಅಲ್ಲವೇ? ಯಾವ ರೀತಿಯಲ್ಲಿಯೂ ಅವರನ್ನು ಗಾಸಿಗೊಳಿಸುವ ಉದ್ದೇಶವು ನನಗಿರಲಿಲ್ಲ.' ಎಂದು ಅವನು ಹೇಳಿರುವುದಾಗಿ ಒಬ್ಬ ಡಿಟೆಕ್ಟಿವನು ಹೇಳಿರುವನು.

ಮಹೋನ್‌ನನ್ನು ೮ ದಿನಗಳ ಕೈದಿನಲ್ಲಿರಿಸುವಂತೆ ಏರ್ಪಾಡಾಗಿದೆ. ಅವನ ಬಳಿ ಇದ್ದ ಅರಸರ ಚಿತ್ರ, ಒಂದು ಪತ್ರಿಕೆ, ಮತ್ತೂ ಬಿಸಾಡಿದ್ದ ೫ ಬಾಯಿ ಪಿಸ್ತೂಲು ಇವುಗಳನ್ನು ಪೋಲೀಸರು ಹಾಜರು ಮಾಡಿರುತ್ತಾರೆ. ಪಿಸ್ತೂಲಿನ ೪ ಬಾಯಿಗಳಲ್ಲಿ ಮದ್ದು ತುಂಬಿದ್ದಿತು; ಹಾಗೂ ೨ ಸಲ ಹಾರಿಸಲಿಕ್ಕೆ ಬೇಕಾದಷ್ಟು ಮದ್ದಿನ ಸಂಗ್ರಹವೂ ಆತನ ಸ್ವಾಧೀನವಿದ್ದಿತು. ಪಿಸ್ತೂಲನ್ನು ಕೆಲ ಕಾಲದಿಂದ ಉಪಯೋಗಿಸಿದ್ದಂತೆ ತೋರಲಿಲ್ಲ.

'ಅರಸರನ್ನು ಗಾಸಿಗೊಳಿಸುವ ಉದ್ದೇಶವು ನನಗಿರಲಿಲ್ಲ, ಹೋಮ್ ಆಫೀಸಿಗೆ ಬರೆದಿದ್ದೆ. ಆ ಕುರಿತು ನಿಷೇಧಿಸುವುದೇ ನನ್ನ ಈ ಕಾರ್ಯದ ಉದ್ದೇಶವಾಗಿದ್ದಿತು' ಎಂದು ಅವನು ಹೇಳಿಕೆ ಕೊಟ್ಟಿರುವನು.

ಈ ಘಟನೆಯಿಂದ ನಮ್ಮ ಅರಸರು ಸ್ವಲ್ಪವೂ ವಿಚಲಿತರಾಗಿಲ್ಲ. ಅವರು ನಿತ್ಯಕ್ರಿಯೆಗಳಲ್ಲಿ, ರಾಜಕಾರ್ಯಗಳಲ್ಲಿ ವಾಡಿಕೆಯಂತೆ ಆಸಕ್ತರಾಗಿದ್ದಾರೆ.

ಈ ಘಟನೆಯನ್ನು ಅಕಸ್ಮಾತ್ತಾಗಿ ಕೇಳಿ ತಿಳಿದು ಭ್ರಮೆಗೊಂಡ ನಮ್ಮ ಸಾಮ್ರಾಟರ ಸಮಸ್ತ ಪ್ರಜಾಕೋಟಿಯೂ, ಇತರ ನಾಗರಿಕ ಜಗತ್ತಿನವರೂ ನಮ್ಮ ಅರಸರ ಪ್ರಾಣದ ಮೇಲೆ ಬಂದ ವಿಪತ್ತು ಪರಿಹಾರವಾಗುದಕ್ಕಾಗಿ ಅತ್ಯಂತವಾಗಿ ಹರ್ಷಿಸಿ, ಈ ಸಂತೋಷವನ್ನು ನಮ್ಮ ಚಕ್ರವರ್ತಿಗಳ ಸನ್ನಿಧಾನಕ್ಕೆ—ಅಭಿನಂದನದ ವಿನಂತಿಗಳ ಮೂಲಕ—ಬಿನ್ನೈಸಿದ್ದಾರೆ.

ಮುಂದಿನ ಎಸೆಂಬ್ಲಿಯಲ್ಲಿ ಹಿಂದೀ ಕ್ರೈಸ್ತ ಪ್ರತಿನಿಧಿಗಳು ಯಾರು?

ಈ ಸಂಬಂಧವಾಗಿ ಇಲ್ಲಿನ ಕೆಲವು ಮುಂದಿ ಕ್ರೈಸ್ತ ಬಂಧುಗಳ ಸಹಿಗಳನ್ನು ಒಳಗೊಂಡ ಒಂದು ಪ್ರಕಟಣೆಯ ಪತ್ರವು ನಮ್ಮ ಹಸ್ತಗತವಾಗಿದೆ. ಅದರಲ್ಲಿ ಮಿ. ಎಂ. ಎಸ್. ಶ್ರೇಷ್ಠರು, ಅನೇಕ ವರ್ಷಗಳಿಂದ, ಆ ಸಭೆಯ ಅನುಭವ ಪಡೆದಿರುವುದರಿಂದ, ಅವರೇ ಅಲ್ಲಿರಬೇಕೆಂದೂ, ಅವರೇ ಆ ಸ್ಥಾನಕ್ಕೆ ಯೋಗ್ಯರೆಂದೂ ವ್ಯಕ್ತವಾಗಿ ಉಲ್ಲೇಖಿಸಲ್ಪಟ್ಟಿರುವುದಲ್ಲದೆ, ಮಿ. ಸಿ. ಜೆ. ವಾರ್ಕಿಯವರು, ಕಾಲೇಜಿನಲ್ಲಿ ಮಾತ್ರವೇ ಇರಲು ಯೋಗ್ಯರೆಂದೂ, ಅವರು ವಿದ್ಯಾವಿಚಾರಕ್ಕೆ ಸಂಬಂಧಪಟ್ಟುದರಿಂದ, ಎಸೆಂಬ್ಲಿಯಲ್ಲಿನ ಅವರ ಸಾರ್ವಜನಿಕ ಜೀವನವು, ನೀರಿನ ಹೊರಗಿರುವ ಮೀನಿನಂತಾಗಬಹುದೆಂದೂ ಸೂಚಿಸಲಾಗಿದೆ.

ಮಿ. ಶ್ರೇಷ್ಠರು ಕೆಲ ಕಾಲದಿಂದ ಮದ್ರಾಸ್ ಕೌನ್ಸಿಲಿನಲ್ಲಿರುವವರು. ಕೌನ್ಸಿಲರಾಗಿ, ಅಲ್ಲಿ ಅವರು, ತಮ್ಮ ಕೆಲಸಗಳನ್ನು, ಇದುವರೆಗೆ, ತಮ್ಮಿಂದ ಸಾಧ್ಯವಿರುವ ಮಟ್ಟಿಗೆ ಸಾಧಿಸಿರಲೂಬಹುದು. ಆದರೆ ಅವರೊಬ್ಬರೇ ಯೋಗ್ಯರು ಅದಕ್ಕೆ, ಮತ್ತೊಬ್ಬರಲ್ಲವೆಂದು ಈಗಲೇ ಭವಿಷ್ಯ ನುಡಿಯುವ ಮರ್ಮವೇನೆಂದು ನಮಗೆ ತಿಳಿದಿಲ್ಲ. ಮುಂದಿನ ಎಸೆಂಬ್ಲಿಯಲ್ಲಿ ವಿದ್ಯಾ ವಿಷಯಗಳ ಚರ್ಚೆ ಇರಲಾರವೇ? ಒಂದು ವೇಳೆ, ಅಂಚೇ ಶಾಖೆಯಲ್ಲಿ ಮಾತ್ರವೇ ನುರಿತವರು, ಈಗ ಯೋಗ್ಯ ಎಂ. ಎಲ್. ಸೀ.ಗಳಾಗಿ ಪರಿಭಾವಿಸಲ್ಪಟ್ಟಂತೆ, ಮುಂದೆ ವಿದ್ಯಾ ಇಲಾಖೆಯ ಉಮೇದುವಾರರೂ, ಸ್ವಸಾಮರ್ಥ್ಯ ಮತ್ತೂ ಸ್ವಪ್ರಯಾಸದಿಂದ ಅದೇ ಕೀರ್ತಿಯನ್ನೇ ಸಂಪಾದಿಸಲಾರರೇತಕ್ಕೆ? ಸಂಪಾದಿಸಲಾರರೆಂದು, ಈಗಲೇ ಕಂಡ ಹಾಗೆ, ಮನಸ್ಸಿನ ಮುಂಡಿಗೆಯಿಂದ ಸಿದ್ಧಾಂತ ಮಾಡಿಬಿಡುವ ಹವ್ಯಾಸವಾದರೂ ಏತಕ್ಕೆ? ಇದರ ಒಳಗುಟ್ಟೇನು?

ನ್ಯಾಯವಿಧಾಯಕ ಸಭೆಗಳ ಸ್ಥಾನವು ಯಾರಿಗೂ 'ನ್ಯಾದೆ ಗೇಣಿ'ಗೆ ಕೊಟ್ಟವುಗಳಲ್ಲ. ಆದರೆ ಈಗ ಇದ್ದವರಿಗೆ, ಅದರ ಸವಿ ಹಿಡಿದಿರಬಹುದೇನೋ ಯಾರಿಗೆ ಗೊತ್ತು? ಉತ್ಸಾಹಶಾಲಿಗಳೂ, ವಿದ್ಯಾವಂತರೂ ಆ ಸ್ಥಾನಕ್ಕೆ ಬಂದರೆ ಕೇಡೇನು? ಹೊಸಬರಿಗೆ ಒಂದು ಚಾನ್ಸು ದೊರೆಯದಂತೆ ಊರಿಗೆ ಬೇಲಿ ಹಾಕುವ ಸ್ವಾರಸ್ಯವೇನು? ಒಬ್ಬರು ಒಬ್ಬರನ್ನು 'ನೀರಿನ ಹೊರಗಿನ ಮೀನೆ'ನ್ನುವಾಗ ಮತ್ತೊಬ್ಬರು ಮತ್ತೊಬ್ಬರ ಕುರಿತು ಏನೆಂದಾರೆಂದು ತಿಳಿದುಕೊಳ್ಳದೆ ಇದ್ದುದು ವಿಷಾದಕರ!

ಹಿಂದೂದೇಶ

ಪಂಡಿತ ಜವಹರಲಾಲ್ ನೆಹರೂಯವರು ಕರಾಚಿಗೆ ತಲುಪಿ ಉತ್ಸಾಹಪೂರ್ವಕವಾದ ಸ್ವಾಗತವನ್ನು ಪಡೆದರು.

ಹೌರಾ ಸೇತುವೆಯ ಕಂಟ್ರಾಕ್ಟನ್ನು ಕ್ಲೀವ್‌ಲ್ಯಾಂಡ್ ಇಂಜಿನಿಯರಿಂಗ್ ಕಂಪೆನಿಯವರಿಗೆ ಕೊಡಲಾಗಿದೆ.

ಎವೆರೆಸ್ಟ್ ಪಾರ್ಟಿಯವರ ಕೆಲವು ಕಾಗದಪತ್ರಗಳು ಸೈರುವಿಲೆಯಾಗಿದೆ ಎಂಬ ದೂರು ಬಂದ ಮೇಲೆ, ಗಂಗ ತೋಕಾ ಪೋಸ್ಟಾಫೀಸನ್ನು ಝಡ್ತಿ ಮಾಡಿದಲ್ಲಿ ಕೆಲವು ಸಮಯದ ಹಿಂದಿನ ವಿಮಾನ ಪತ್ರಗಳೂ ಕೆಲವು ಸಿಕ್ಕಿದುವು; ನಗದಿಯಲ್ಲಿ ೧ ಸಾವಿರ ರೂಪಾಯಿಗಳು ಕಡಿಮೆಯೂ ಇದ್ದಿತು. ಪೋಸ್ಟ್ ಮಾಸ್ಟರರ ಬರ್ತರಫ್ತಿಗಿರಿಯಾಗಿದೆ.

ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ಭೂಗರ್ಭ ಶಾಸ್ತ್ರ ಪಂಡಿತರಾದ ಶ್ರೀ. ಎಂ. ಪಿ. ಬಜಪೇಯಯವರು ಬಿಹಾರಿನಲ್ಲಿ ಅನೇಕವಾದ ಸಮೃದ್ಧವಾದ ಭಿಂಗದ ಕ್ಷೇತ್ರಗಳನ್ನು ಕಂಡುಹಿಡಿದಿರುವರು.

ಯೋಗಿಯೊಬ್ಬನು ನೆಲವನ್ನು ಬಿಟ್ಟು ೫ ಅಡಿ ಎತ್ತರದಲ್ಲಿ ಗಾಳಿಯಲ್ಲಿ, ೪ ನಿಮಿಷ ಕುಳಿತ ದೃಶ್ಯವನ್ನು ಒಬ್ಬ ಯುರೋಪೀಯನು ಭಾವಚಿತ್ರ ತೆಗೆದಿದ್ದು, ಆ ಕುರಿತಾದ ಲೇಖನವೊಂದು ''ಲಂಡನ್ ನ್ಯೂಸಿ''ನಲ್ಲಿ ಪ್ರಕಟವಾಗಿದೆ.

ಗಿರಿಧಿಯಲ್ಲಿ ವಿಶ್ವನಾಥ ಸಿಂಗ್ ಎಂಬ ಪೋಲೀಸ್ ಸಬ್ ಇನ್‌ಸ್ಪೆಕ್ಟರೊಬ್ಬನು, ಆಗ ತಾನೇ ಹುಟ್ಟಿ ಪರಿತ್ಯಜಿಸಲ್ಪಟ್ಟ ಒಂದು ಮಗುವಿನ ತಾಯಿ ಯಾರೆಂದು ಶೋಧ ಮಾಡಲು, ಸಂಬಂಧಪಟ್ಟ ಗ್ರಾಮಕ್ಕೆ ತೆರಳಿ, ಅಲ್ಲಿ ಬೆದರಿಕೆ ಹಾಕಿ ಅಲ್ಲಿನ ಪ್ರತಿಯೊಬ್ಬ ವಿಧವೆಯ ಪರೀಕ್ಷೆ ನಡೆಸಿ, ಅವರ ಅಭಿಮಾನಕ್ಕೆ ಭಂಗ ತಂದನೆಂದು ಅವನ ಮೇಲೆ ಮೊಕದ್ದಮೆಯಾಗಿದೆ.

ಶಾಲಾ ಕಟ್ಟಡಗಳನ್ನು ಇನ್ನು ಮುಂದೆ ಸಾಧ್ಯವಿರುವ ಮಟ್ಟಿಗೆ ಸೈನ್ಯಗಳ ಠಾಣೆಗಳಿಗಾಗಿ ಉಪಯೋಗಿಸಿಕೊಳ್ಳುವುದಿಲ್ಲವೆಂದು ಬಂಗಾಳ ಸರಕಾರವು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ತಿಳಿಸಿದೆ.

ಎರ್ನಾಕುಳಂ ಪ್ರಾಂತದ ಅಂಡಿಕಾಡವು ಕೋಒಪರೇಟಿವ್ ಸೊಸೈಟಿಯ ಸೆಕ್ರಟರಿ ಜೊಸೆಫ್ ಜಾನ್ ಕೈಸೋಸ್ಟವ್ ಎಂಬಾತನು ಸಂಘದ ಸುಮಾರು ೨ ಸಾವಿರ ರುಪಾಯಿಗಳ ವಿಷಯದಲ್ಲಿ ಮೋಸ ನಡೆಸಿದನೆಂದು ಆತನಿಗೆ ೪ ವರ್ಷ ಕಠಿಣ ಸಜೆ; ೨೦೦ ರುಪಾಯಿಗಳ ಜುಲ್ಮಾನೆ.

ಚಿತ್ತಗಾಂಗಿನ ಅನ್ವಾರ ಜೌತಾ ಬೇಂಕಿನ ಲೆಕ್ಕಪತ್ರಗಳಲ್ಲಿ ಸುಮಾರು ೪ ಸಾವಿರ ರುಪಾಯಿಗಳ ಹೆಚ್ಚುಕಡಿಮೆಯನ್ನು ಆಡಿಟರರು ಕಂಡುಹಿಡಿದ ಪ್ರಯುಕ್ತ, ಅದರ ಚೆಯರ್‌ಮ್ಯಾನ್ ಬಾಬು ಜೋಗೀಶ್ ಚಂದ್ರ ಸೇನರೂ, ಇತರ ಕೆಲವು ಡ್ಯಾರೆಕ್ಟರರೂ ಅಲ್ಲಿನ ಎಡಿ॥ ಸಬ್॥ ಡಿ॥ ಮ್ಯಾಜಿಸ್ಟ್ರೇಟರಿಗೆ ತಮ್ಮನ್ನು ತಾವು ಒಪ್ಪಿಸಿಕೊಂಡು, ಈಗ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವರು.

ಇಂಡಿಯದ ಹೈ ಕವಿಶನರ ಸ್ಥಾನದಿಂದ ನಿವೃತ್ತರಾದ ಸರ್ ಭೂಪೇಂದ್ರನಾಥ ಮಿತ್ರರವರು ತಾತಾ ಸಂಸ್ಥೆಗಳೊಂದರ ಪ್ರಮುಖಾಧಿಕಾರಿಗಳಾಗುವಂತೆ, ಮೆ॥ ತಾತಾ ಎಂಡ್ ಸನ್ಸ್‌ರ ಸರ್ ಸೌರೋಶ್ಜಿ ಸಕಲತ್‌ವಾಲರಿಂದ ಪ್ರಾರ್ಥಿಸಲ್ಪಟ್ಟಿದ್ದಾರೆ. ಆದರೆ ಅವರ ಆರೋಗ್ಯಸ್ಥಿತಿಯು ನೆಟ್ಟಗಿಲ್ಲವಾಗಿ ಈ ಅರಿಕೆಯನ್ನು ಮನ್ನಿಸಲು ವಿಳಂಬವಾಗಬಹುದೇನೋ.

ಪಾಟ್ನಾದಲ್ಲಿ ಒಂದೇ ಸಂಸಾರದಲ್ಲಿದ್ದ ಅಣ್ಣನ ಹೆಂಡತಿ, ತನ್ನ ಮೈದುನನ ಹೆಂಡತಿಯನ್ನೂ ಅವಳ ಮಗಳನ್ನೂ ಕತ್ತಿಯಿಂದ ಹೊಡೆದು ಕೊಂದುಬಿಟ್ಟಳು. ಕಾರಣ, ಈಕೆಗೆ ತನ್ನ ಗಂಡನಿಗೂ, ತನ್ನ ಮೈದುನನ ಹೆಂಡತಿಗೂ ಸ್ನೇಹವಿದೆ ಎಂಬ ಸಂಶಯವಿದ್ದುದೇ. ಮೈದುನನ ಮಗಳು ತಾಯಿಯನ್ನು ಹೊಡೆದು ಕೊಲ್ಲುವಾಗ ಕೂಗಿದುದರಿಂದ, ಆಕೆಯ ಪ್ರಾಣಕ್ಕೂ ಸಂಚುಕಾರ ಬಂದಿತು. ಅಪರಾಧಿಯನ್ನು ಹಿಡಿದಿದ್ದಾರೆ.

ಶ್ರೀ. ಕೇದಾರನಾಥ ಮುಖರ್ಜಿಗಳು ರಾಣಾಘಾಟಿನ ಒಬ್ಬ ಗವರ್ನಮೆಂಟ್ ಪೆನ್ಶನರು. ಪಾಪ! ಇವರ ಜೀವವಾನದಲ್ಲೆಲ್ಲ ಇವರು ಸಂಪಾದಿಸಿಟ್ಟಿದೆಂದರೆ-ಒಂದು ಸಾವಿರ ರೂಪಾಯಿಗಳ ಜಿ. ಪಿ. ನೋಟು. ಈ ನೋಟಿನ ಸಂಬಂಧ ಬಡ್ಡಿಯನ್ನು, ಸಬ್ ಟ್ರೆಜರಿಯಿಂದ ಪಡೆಯಬೇಕಾಗಿದ್ದಿತು. ಅದ ಕ್ಕಾಗಿ ಅವರು ಆ ಜಿ. ಪಿ. ನೋಟನ್ನು ಚಾವಡಿಯಲ್ಲಿ ಒಂದು ಮೇಜಿನ ಮೇಲಿರಿಸಿ, ತಾನು ಸಬ್ ಟ್ರೆಜರಿಗೆ ಹೊರಡಲು ಉಡುಪುಗಳನ್ನು ಧರಿಸಿ ಬರುವಷ್ಟರಲ್ಲಿ, ಒಂದು ದನ ಮೇಲೆ ಹತ್ತಿ, ಯಾರಿಗೂ ಕಾಣಿಸದಂತೆ ಆ ಜಿ. ಪಿ. ನೋಟನ್ನು ತಿಂದು ಬಿಟ್ಟಿತು. ಏನು ಮಾಡಿದರೂ ಆ ನೋಟಿನ ಯಾವ ಕುರುಹೂ ಸಿಕ್ಕಲಿಲ್ಲ.

ಮಂಗಳೂರು

ಕುದ್ರೋಳಿ ಹಂಚು ಕಾರ್ಖಾನೆಯಿಂದ ಮಿಶನ್ ದೇವಾಲಯದವರೆಗಿನ ಕುದ್ರೋಳಿ ರಸ್ತೆಯ ಬದಿಯಲ್ಲಿ ರಸ್ತೆ ರಿಪೇರಿ ಬಗ್ಗೆ ಮಣ್ಣು ಮತ್ತು ಜಲ್ಲಿ ರಾಶಿಗಳನ್ನಿಟ್ಟಿದ್ದು, ಆಡುಗಳು ತಮ್ಮ ಕುಟುಂಬ ಸಮೇತವಾಗಿ ಮಾರ್ಗದಲ್ಲೆ ವಾಸಮಾಡಿಕೊಂಡಿರುವುದರಿಂದಲೂ ಮತ್ತು ಬೋಳೂರು ಬತ್ತೇರಿ ರಸ್ತೆಯು ಅಂತ್ಯವಾಗುವ ಅಂದರೆ ಮಿಶನ್ ದೇವಾಲಯವ ಎದುರುಗಡೆಯ ರಸ್ತೆಯಲ್ಲೂ ಇದೇ ರೀತಿ ಮಣ್ಣು ಹಾಸ್ತಾನು ಇರುವುದರಿಂದಲೂ, ಇಕ್ಕಟ್ಟಾದ ಈ ಮಾರ್ಗದಲ್ಲಿ ವಾಹನಗಳ ಚಲಾವಣೆಗೆ ಬಹಳವಾದ ಅಭ್ಯಂತರವಾಗುತ್ತಿದೆಯಾಗಿಯೂ, ಸಾಲದುದಕ್ಕೆ ಕೆಲವು ಸಾರಿ ಎತ್ತಿನ ಗಾಡಿಗಳನ್ನು ರಾತ್ರಿ ಹಗಲೆನ್ನದೆ ಮಾರ್ಗದಲ್ಲಿ ನಿಲ್ಲಿಸುತ್ತಿರುವರಾಗಿಯೂ, ಮುನಿಸಿಪಾಲಿಟಿಯವರು ಈ ವಿಷಯದಲ್ಲಿ ಕೂಡಲೆ ನಿಗಾ ತೆಗೆದುಕೊಳ್ಳಬೇಕಾಗಿ ಒಂದು ಬಾತ್ಮಿ.

ಶ್ರೀ. ಎಂ. ದೂಮಪ್ಪನವರು ಮಂಗಳೂರು ಬೀಚ್ ಕೋರ್ಟಿನ ಹೊನರೆರಿ ಮ್ಯಾಜಿಸ್ಟ್ರೇಟರಾಗಿ ನೇಮಕಹೊಂದಿರುವರು.

ಕಿಂಗ್ ಜೋರ್ಜ್ ಮೆಮೊರಿಯಲ್ ಕಮಿಟಿಯ ಸದಸ್ಯರನ್ನು ಇದೇ ತಾ. ೧೮ನೇ ಶನಿವಾರ ಮಧ್ಯಾಹ್ನ ಕಮಿಟಿಯ ಅಧ್ಯಕ್ಷರಾದ ಸಮ್ಮ ಜಿಲ್ಲಾ ಕಲೆಕ್ಟರರಾಗಿರುವ ಖಾನ್ ಬಹದೂರ್ ಮಹಮ್ಮದ್ ಹುಮಾಯೂನ್ ಸಾಹೇಬ್ ಬಹದೂರ್‌ರವರು ಒಂದು ಟೀಪಾರ್ಟಿಯನ್ನಿತ್ತು ಸತ್ಕರಿಸಿದರು.

ರಿಟಾಯರ್ಡ್ ಸಬ್ ಮ್ಯಾಜಿಸ್ಟ್ರೇಟರಾಗಿದ್ದ ಎಂ. ಮಂಜೇಶ್ವರ ರಾಘವೇಂದ್ರ ರಾಯರು ನಿನ್ನೆ ಸಾಯಂಕಾಲ ದಿವಂಗತರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಇರಲಿ.

ಸರಕಾರಿಯವರು ಏರ್ಪಡಿಸಿರುವ ಡಿಸ್ಟ್ರಿಕ್ಟ್ಸ್ ಇಕೊನೊಮಿಕ್ ಕೌನ್ಸಿಲಿನ ವಿಚಾರವಾಗಿ ಪ್ರಥಮ ಸಭೆಯೊಂದು ಇದೇ ತಾ. ೨೬ನೇ ಪ್ರಾತಃಕಾಲ ೧೦-೩೦ ಘಂಟೆಗೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಕೂಡುವುದು. ಗ್ರಾಮಜೀವನವನ್ನು ವೃದ್ಧಿಗೊಳಿಸುವ ವಿಚಾರಗಳು ಚರ್ಚಿಸಲ್ಪಡುವುವು.

ತಾ. ೨೫ನೇ ಶನಿವಾರ ಮಧ್ಯಾಹ್ನ ೨ಕ್ಕೆ, ಸಾಯಂ. ೫-೩೦ಕ್ಕೆ ಮತ್ತು ರಾತ್ರೆ ೯-೩೦ಕ್ಕೆ ಸ್ಥಳೀಯ ಚಿತ್ರ ಟಾಕೀಸ್‌ನವರು ಜೋರ್ಜ್ ಸಾವರ್‌ಭೌಮರ ಸ್ಮಾರಕ ನಿಧಿಯ ಸಹಾಯಾರ್ಥವಾಗಿ ಡೊನ್ ಕ್ವಿಕ್ಸಟ್ ಮತ್ತು ನ್ಯಾಟ್ ಒಫ್ ದಿ ಗಾರ್ಡ್‌ನರ್ ಎಂಬ ಚಿತ್ರಗಳನ್ನು ಪ್ರದರ್ಶಿಸುವರು. ಮಹಾಜನರು ತುಂಬಾ ಪ್ರೋತ್ಸಾಹಿಸಲಿ.

ಗೂಳಿಗಳನ್ನು ಸಾಕಿರೆಂದು ವೈಸರಾಯರ ಅಪ್ಪಣೆಯಾಗಿರುವಾಗ, ಬರೆದು ಬಿಟ್ಟ ಹಿಂದೂಗಳ, ಮುಸ್ಲಿಮರ ಗೂಳಿಗಳು ಬೀದಿಯಲ್ಲಿ ತಿರುಗುತ್ತಿರುವವನ್ನು ಕಂಡರೆ ಅವನ್ನು ಮಾರಿ ಬಿಡಿ ಅಥವಾ ಗುಂಡು ಹಾಕಿ ಕೊಲ್ಲಿರೆಂದು ಸಾದರದ ಸಬ್ ಡಿ॥ ಆಫೀಸರರ ಅಪ್ಪಣೆಯಾಗಿದೆ. ಈ ಕುರಿತು ನೈಸ ರಾಯರಿಗೆ ಅಲ್ಲಿನನರ ಮೆಮೋರಿಯಲ್ ಹೋಗಿದೆ.

ಸಾವಿರಾರು ರೂಪಾಯಿಗಳ ಸಂಬಳವಿರುವ ಉಚ್ಚ ಯುರೋಪೀಯ (ಸರಕಾರಿ) ಆಫೀಸರರಲ್ಲಿ 'ಹಣ ಕೊಟ್ಟು ಸುಖ ಪಡುವ ಅತಿಥಿ'ಗಳಿರುವರೆಂದು ತಿಳಿದು ಲಾರ್ಡ್ ಲಿನ್‌ಲಿತ್‌ಗೋರವರಿಗೆ ಪರಮಾಶ್ಚರ್ಯವಾಗಿದೆ. ಲಾರ್ಡ್ ಕರ್ಜನರ ಕಾಲದಲ್ಲಿ ಇದಕ್ಕೆ ತಕ್ಕ ದಾಖಲೆಗಳಿದ್ದುವಂತೆ; ಲಾರ್ಡ್ ವಿಲ್ಲಿಂಗ್‌ಡನರು ಈ ಕುರಿತು ಅಸಂತೋಷವನ್ನು ಸೂಚಿಸಿದ್ದರಂತೆ. ಈಗ ಈ ವೈಸರಾಯರೂ ಹಾಗೇ ಈ ಪದ್ಧತಿಯಿಂದ ಮನನೊಂದಿರುವುದೆಂಬಿ ವಾರ್ತೆ. ಸದ್ಯ ನಮ್ಮ ಹಿಂದೂ ಉಚ್ಚಾಧಿಕಾರಿಗಳು ಈ ರೀತಿ ಅತಿಥಿಗಳಿಗೆ 'ಹೊಟೆಲ್' ಇಡಲಿಲ್ಲ!

ಪಂಜಾಬು ಸರಕಾರವು, ದಿವಂಗತ ಸರ್ ಫಸ್ಲಿ ಹುಸೇನ್‌ರವರ ನಿಧನವ ಕುರಿತು, ವಿಷಾದವನ್ನು ಪ್ರಕಟಗೊಳಿಸುವುದೊಂದು ಪ್ರತ್ಯೇಕ ಗಜೇಟನ್ನು ಕಪ್ಪು ಅಂಚುಗಳೊಡನೆ ಪ್ರಕಾಶಗೊಳಿಸಿದೆ. ಪಂಡಿತ ಜವಹರಲಾಲ್ ನೆಹರೂಯವರೂ ತಮ್ಮ ಅನುತಾಪವನ್ನು ಮೃತರ ಕುಟುಂಬಕ್ಕೆ ತಿಳಿಸಿರುವರಲ್ಲದೆ, ಮದ್ರಾಸಿನಲ್ಲಿ ಒಂದು ಸಾರ್ವಜನಿಕ ಸಭೆಯೂ ಜರುಗಿ, ಮೃತರ ಗುಣ ಕಥನಗಳನ್ನು ಮಾಡಿ, ತನ್ನ ಸಹಸಂತಾಪವನ್ನು ಸೂಚಿಸಿದೆ.

ನಗರ್‌ಪರ್‌ಕಾರದ ಬಳಿ ಒಂದು ಪೋಲೀಸ್ ಪಂಗಡವು ೪ ದಿನಗಳ ವರೆಗೆ ೧೦೦ ಮೈಲುಗಳ ಮರಳ್ಗಾಡಿನಲ್ಲಿ ಸುತ್ತಾಡಿ ಹಿಂಬಾಲಿಸಿ, ಖಾಡಾಖಾಡಿ ರಣಾಗ್ರ ಮಾಡಿ, ಕೊನೆಗೆ ಒಂಟೆಯ ಸವಾರರಾದ ೧೩ ಮಂದಿ ಡಕಾಯಿತರನ್ನೂ ೧೨ ಸಾವಿರ ರುಪಾಯಿಗಳ ಕದ್ದ ಆಭರಣಗಳನ್ನೂ ಹಿಡಿಯಿತು. ಈ ಕಾದ್ದಾಟದಲ್ಲಿ ೪ ಮಂದಿ ಡಕಾಯಿತರಿಗೂ, ಒಬ್ಬ ಪೊಲೀಸ್ ಕಾನ್ಸ್‌ಟೇಬಲನಿಗೂ, ಇತರ ಇಬ್ಬರಿಗೂ ಗಾಯಗಳಾಗಿವೆ.

ಮದುವೆಯಾದ ೧೪ ವರ್ಷದ ನೇಪಾಳೀ ಹುಡುಗಿಯೊಬ್ಬಳನ್ನು ಪಾಟ್ನಾದ ಒಂದು ಕಾನ್ವೆಂಟಿನೊಳಗೆ ತಂದಿಟ್ಟು ಕೊಂಡು, ಅವಳನ್ನು ಕ್ರೈಸ್ತ ಮತಕ್ಕೆ ಸೇರುವಂತೆ ಬಲವಂತ ಮಾಡುತ್ತಿದ್ದರೆಂದು ಅಲ್ಲಿನ ಪೋಲೀಸರ ಮುಂದೆ ದೂರು ಬಂದಿದೆ.

ಆರೋಗ್ಯ ಮತ್ತು ಚೈತನ್ಯ ಕ್ಕಾಗಿ ಒಕಾಸಾ ಸೇವಿಸಿ.

ಈ ಅತ್ಯುತ್ಕೃಷ್ಟವಾದ ಹೊರ್ಮನ್ ಟಾನಿಕಿನ ಖಾತರಿಯೂ ತೀವ್ರವೂ ಆದ ಗುಣಕ್ಕೆ ಹೋಲಿಸಲು ಬರುವ ಅಥವಾ ಸಮೀಪವರ್ತಿಯಾಗಿರುವ ಬೇರಾವುದೂ ಇಲ್ಲ.



ಒಕಾಸಾದಲ್ಲಿ ವಿಪುಲವಾದ ಆರೋಗ್ಯವನ್ನೂ, ಚೈತನ್ಯವನ್ನೂ, ದೊರಕಿಸಿಕೊಡುವ ಪದಾರ್ಥಗಳಿವೆ; ಅದು ನಿಮ್ಮ ದೇಹರಚನೆಯಲ್ಲಿರುವ ನಿಶ್ಶಕ್ತಿ ಮತ್ತು ನಿತ್ರಾಣದ ಪ್ರತಿಯೊಂದು ಚಿಹ್ನೆಯನ್ನೂ ಸಂಪೂರ್ಣವಾಗಿ ಹೋಗಲಾಡಿಸುತ್ತದೆ; ನಿಮ್ಮನ್ನು ಉತ್ತಮ ಆರೋಗ್ಯ, ಬಲವಾದ ನರ, ಹೆಚ್ಚಿನ ಶಕ್ತಿ ಮತ್ತು ವೃದ್ಧಿಯಾದ ಚೈತನ್ಯ ಇವುಗಳಿಂದ ಕೂಡಿದ ಒಬ್ಬ ಹೊಸ ಮನುಷ್ಯನನ್ನಾಗಿ ಮಾಡುತ್ತದೆ.

ತರುಣರಾಗಿರಿ ಒಕಾಸಾವೊಡನೆ.

ಅದನ್ನು ಪಡೆಯಿರಿ, ನಿಮ್ಮ ಕೆವಿಸ್ತರಿಂದ ಅಥವಾ

OKASA CO., BERLIN (INDIA), LTD.,
12, Rampart Row, Fort,
P. O. Box 396, BOMBAY.

ಲಾಲಾ ಹರಿಕಿಶನ್ ಲಾಲರವರು ಕೋರ್ಟಿಗೆ ಅವಮಾನವಾಗುವಂತೆ ವರ್ತಿಸಿದರೆಂದು ಲಾಹೋರು ಹೈಕೋರ್ಟಿನ ಜಸ್ಟೀಸರು ಅವರಿಗೆ ೪ ತಿಂಗಳ ಕಠಿಣ ದಂಡನೆ ವಿಧಿಸಿದರು.

ಬೊಂಬಾಯಿ ಆಧಿಸತ್ಯದಲ್ಲಿ ಫೈಲಾದ ಮೆಟ್ರಿಕ್ ವಿದ್ಯಾರ್ಥಿಗಳ ರಕ್ಷಕರು ಆ ಕುರಿತು ಆ ವಿಶ್ವವಿದ್ಯಾಲಯದ ಛಾನ್ಸ್‌ಲರರಿಗೆ ಒಂದು ಮನವಿ ಮಾಡಿಕೊಂಡಿದ್ದಾರೆ.

ಹೀಗೂ ವಿಸ್ಮಯದ ಘಟನೆ ನಡೆದಿದೆ ಚಿನ್ಸುರದ ಒಂದು ಆಸ್ಪತ್ರೆಯಲ್ಲಿ. ಅಲ್ಲೊಬ್ಬ ನಾರಿನ ಕಾರ್ಖಾನೆಯ ಕೂಲಿ—೨೨ ವರ್ಷದ ಕ್ಷೇತ್ರನಾಥನೆಂಬವನು ತೊಡೆಯ ಮೂಳೆ ಮುರಿದು ಬಂದಿದ್ದ. ಮರುದಿನ ಅವನಿಗೆ ಆಪರೇಷನ್. ಆದರೆ ಅವನು ಮರುದಿನ ಬೆಳಗ್ಗೆ ಸಂತೋಷದಿಂದ ಹಾರುತ್ತಾ ಕುಣಿಯುತ್ತಾ ಇದ್ದ. ಪರೀಕ್ಷಿಸಲು ಅವನ ತೊಡೆಯ ಎಲುಬು ಸರಿಯಾಗಿದ್ದಿತು. ವಿಚಾರಿಸಲು, ತಾನು ಹಿಂದಿನ ರಾತ್ರಿ ಈ ಆಪರೇಷನಿಗೆ ಭಯಪಟ್ಟು ಜಗನ್ನಾಥ ದೇವರ ಸಹಾಯ ಬೇಡಿದೆನೆಂದೂ, ತಾನು ನಿದ್ರಿಸಿದ್ದಾಗ ಯಾರೋ ತನ್ನ ತೊಡೆಯನ್ನು ಮುಟ್ಟಿ ಹೋದರೆಂದೂ ಅನಂತರ ಅದು ವಾಸಿಯಾಯಿತೆಂದೂ ನುಡಿದನು!

ನಿರುದ್ಯೋಗಿಗಳ ಸಂಖ್ಯೆಯ ವಿಚಾರಣೆಗಾಗಿ ಬಿಂಗಾಳ ಸರಕಾರವು ಯಾವ ಕಮಿಟಿಯನ್ನೂ ನಿರ್ಮಿಸುವುದಿಲ್ಲ.

ಪಂಡಿತ ಜವಹರಲಾಲರವರು, ಸದ್ಯದಲ್ಲಿಯೇ ಅಪೂರ್ಣವಾದ ತಮ್ಮ ಪಂಜಾಬು ಪ್ರಾಂತದ ಪ್ರವಾಸವನ್ನು ಒಂದು ವಾರದ ವರೆಗೆ ಕೈಕೊಳ್ಳುವರು.

(೧೨ನೇ ಪುಟಕ್ಕೆ ಮುಂದುವರಿಸಿಯಿದೆ)

ತಾಲೂಕು ವರ್ತಮಾನ.

ಪುತ್ತೂರು:—ಇಲ್ಲಿಯ ಪಂಚಾಯಿತ ಕೋರ್ಟಿಗೆ ೪ ಗ್ರಾಮಗಳಿದ್ದು ೮ ಜನ ಪಂಚಾಯತ ಮೆಂಬರರು ಇರುತ್ತಾ ಕೋರ್ಟು ಮಾಟಿಂಗುಗಳಿಗೆ ಹೆಚ್ಚಾಗಿ ಕೋರಂ ಇಲ್ಲದ್ದರಿಂದ ವ್ಯಾಜ್ಯಗಳು ಫಡಿಚಾ ಆಗದೆ ಬಾಕಿಯಾಗುವ ದೆಶೆಯಿಂದ ಕಕ್ಷಿಗಾರರು ಬಹಳ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ಆದ್ದರಿಂದ ೧೯೩೫ನೇ ಇಸವಿಯ ದಶಂಬರ ತಿಂಗಳ ತಾ. ೨೦ನೇ ದ. ಕ. ಜಿಲ್ಲಾ ಗಜೇಟು ಸಪ್ಲಿಮೆಂಟು ೩ನೇ ಪುಟದಲ್ಲಿ ಪ್ರಕಟಿಸಿರುವಂತೆ ೧೯೩೫ನೇ ಇಸವಿಯ ೧೯ನೇ ನಂಬರು ಮದ್ರಾಸು ಅಕ್ಟಿನ ೪ನೇ ಪ್ರಕರಣದ ತಿದ್ದುಪಡಿ ಪ್ರಕಾರ ಸದರಿ ಕೋರ್ಟಿನ ಸಂಖ್ಯೆಯ ಮೆಂಬರರ ವಿನಹಾ ಪ್ರಾತಿನಿಧ್ಯವಿಲ್ಲದ ಕೋಮುಗಳೊಳಗಿನಿಂದ ೩ ಹೆಚ್ಚು ಮೆಂಬರರನ್ನು ದ. ಕ. ಜಿಲ್ಲಾ ಕಲೆಕ್ಟರ್ ದೊರೆಗಳವರು ತಮಗಿರುವ ಅಧಿಕಾರದ ಪ್ರಕಾರ ನೋಮಿನೇಟು ಮೂಲಕ ನೇಮಕ ಮಾಡುತಿದ್ದರೆ ಬಡ ಕಕ್ಷಿಗಾರರಿಗೆ ತುಂಬಾ ಉಪಕಾರವಾಗುತ್ತಿತ್ತು—ಎಂದು ಒಂದು ಬಾತ್ಮಿ.

ಇಲ್ಲಿನ ಹ್ಯಾಸ್ಕೂಲಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದಲೂ ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದು, ವಿದ್ಯಾರ್ಥಿ ಮತ್ತು ಸಹಾಧ್ಯಾಪಕ ವೃಂದದ ಮೆಚ್ಚಿಕೆಗೂ, ಜನಪ್ರೀತಿಗೂ ಪಾತ್ರರಾಗಿದ್ದ ಶ್ರೀಯುತ ಮಂಜೇಶ್ವರ ನಾರಾಯಣ ಭಟ್ಟರವರಿಗೆ ಮೂಲ್ಕಿ ಹ್ಯಾಸ್ಕೂಲಿಗೆ ವರ್ಗವಾದ ಸಂಬಂಧ ಅವರನ್ನು ಬೀಳ್ಕೊಳ್ಳುವರಿ ಹ್ಯಾಸ್ಕೂಲಿನ ಉಪಾಧ್ಯಾಯರ ಸಂಘವು ಇದೇ ಕಳೆದ ತಾರೀಕು ೧೮—೭—'೩೬ನೇ ಸಾಯಂಕಾಲ ಒಂದು ವಿದಾಯಕೂಟವನ್ನೇರ್ಪಡಿಸಿ, ಶ್ರೀಯುತ ಭಟ್ಟರನ್ನು ಕಾಫಿ ಫಲಾಹಾರಾದಿಗಳಿಂದ ಸತ್ಕರಿಸಿ, ಅವರ ಗುಣಕಥನ ಮಾಡಿ, ಅವರ ಅಗಲುವಿಕೆಯಿಂದ ತಮಗೆ ಒದಗಿದ ದುಃಖವನ್ನು ಪ್ರದರ್ಶಿಸಿದ್ದಲ್ಲದೆ, ಶ್ರೀಯುತರಿಗೆ ಆಯುರಾರೋಗ್ಯಗಳನ್ನು ಬಯಸಿ ಸಂಭ್ರಮದಿಂದ ಬೀಳ್ಕೊಟ್ಟರು.

ಮಂಗಲಪಾಡಿ:—ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಿಂದ ಕಾಸರಗೋಡಿನ ಅಣಗೂರು ಎಲಿಮೆಂಟರಿ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲ್ಪಟ್ಟ ಶ್ರೀಯುತ ಬಿ. ರಾಮರಾಯರನ್ನು ಬೀಳ್ಕೊಡುವ ಸಮಾರಂಭವು ತಾ. ೧೭ರಲ್ಲಿ ಜರಗಿತು. ಅಧ್ಯಕ್ಷರ ಚುನಾವಣೆ, ಹಲವರ ಭಾಷಣಗಳು, ಉಪಾಹಾರ ಮುಂತಾದ ಕಾರ್ಯಕ್ರಮಗಳಿದ್ದವು.

ಜಿಲ್ಲಾ ವಿದ್ಯಾಧಿಕಾರಿಗಳು ತಾ. ೧೮ರಲ್ಲು ಇಲ್ಲಿಗೆ ಚಿತ್ತೈಸಿದ್ದು ಹಾಯರ್ ಎಲಿಮೆಂಟರಿ ಶಾಲೆಯನ್ನೂ ಇನ್ನಿತರ ಶಾಲೆಗಳನ್ನೂ ಸಂದರ್ಶಿಸಿದರು.

ಕಾಸರಗೋಡು:—ಇಲ್ಲಿಯ ಸಬ್ ಮೇಜಿಸ್ಟ್ರೇಟರಾಗಿರುವ ಬೇಕಲ ನರಶಿಂಗರಾಯರ ಪತ್ನಿಯವರು ಕಳೆದ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಪಡುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಇರಲಿ.

ವಿದ್ಯಾಖಾತೆಯ ಜಿಲ್ಲಾಧಿಕಾರಿಗಳು ಕಳೆದ ವಾರದಲ್ಲಿ ಮತ್ತು ಈ ವಾರದಲ್ಲಿ ಸ್ಥಳೀಯ ಸೆಕೆಂಡರಿ ಶಾಲೆಗಳ ವರ್ಷಾವಧಿ ಪರೀಕ್ಷೆಗಳನ್ನು ಮುಗಿಸಿದರು.

ಚಿತ್ತಾವನ ಲೀಗ್, ಮುಂಡಾಜೆ, ದಕ್ಷಿಣ ಕನ್ನಡ.

(ಈ ಲೀಗಿನವರು ಬರುವ ಮದ್ರಾಸ್ ಎಸೆಂಬ್ಲಿಗೆನಿನ ಕುರಿತು ತಮ್ಮ ಮತದಾನದ ವಿಷಯದಲ್ಲಿ ಈ ಕೆಳಗಿನ ನಿರ್ಣಯವನ್ನು ಜಾಹೀರು ಮಾಡಿ ಇದನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿ ಮತ್ತು ವರ್ತಮಾನ ಪತ್ರಿಕೆಗಳಿಗೆ ತಿಳಿಸಬೇಕಾಗಿ ಇತ್ಯರ್ಥಿಸಿರುತ್ತಾರೆ. ಇದರಿಂದ ಲೀಗಿನ ನೀತಿಯು ಸ್ಪಷ್ಟವಾಗಿರುತ್ತದೆಂಬುದನ್ನು ಸೂಚಿಸಲು ಸಂತೋಷವಾಗುತ್ತದೆ.)

ಪ್ರೊಸಿಡಿಂಗ್ಸಿನ ನಂ. ೩ನೇ ನಿರ್ಣಯ.

'ಹೊಸ ಗವರ್ನಮೆಂಟ್ ಒಫ್ ಇಂಡಿಯಾ ಅಕ್ಟಿನ ಪ್ರಕಾರ ಬರುವ ಮದ್ರಾಸ್ ಪ್ರಾಂತಿಕ ಎಸೆಂಬ್ಲಿಗೆ ಕೊಂಗ್ರೆಸಿನವರು ಉಮೇದ್ವಾರರನ್ನು ನಿಲ್ಲಿಸುವ ಸಂದರ್ಭದಲ್ಲಿ ಅಂತಹ ಉಮೇದ್ವಾರರ ಯಥಾರ್ಥತೆಯ ಕುರಿತು ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕು. ಕೇವಲ ಹೆಸರಿಗೆ ಕೊಂಗ್ರೆಸ್‌ವಾಲರಾದವರನ್ನು ಉಮೇದ್ವಾರಿಕೆಗೆ ನಿಲ್ಲಿಸಬಾರದು. ಈ ತನಕ ಜನತೆಯು ಕೆಲಸಗಳಲ್ಲಿ ಭಾಗ ವಹಿಸಿ ಕೊಂಗ್ರೆಸ್ ಸಂಸ್ಥೆಯ ಸಂದೇಶವನ್ನು ಎಮ್ಮೆದೆ ನಡೆದಿದ್ದು ಅವರ ಕಾರ್ಯದಿಂದ ಉಪಕೃತರಾಗಿರುವರೆಂದು ನಂಬಲ್ಪಟ್ಟಿರುವ ಜನತೆಯ ವಿಶ್ವಾಸಪಾತ್ರರಾದ ಯೋಗ್ಯ ವ್ಯಕ್ತಿಯನ್ನೇ ಶಿಫಾರಸು ಮಾಡಿ ಉಮೇದ್ವಾರರನ್ನಾಗಿ ನಿಲ್ಲಿಸಬೇಕು. (ಇಡೀ ಚುನಾವಣೆಯ ಕುರಿತು ಹೇಳುವ ಹಕ್ಕುಂ ನಮಗಿಲ್ಲವಾದರೂ ಪುತ್ತೂರು ಕಾಸರಗೋಡು ಮತ್ತು ಕಾರ್ಕಳ ಸರ್ಕಲುಗಳ ವಿಷಯದಲ್ಲಿ ವಿಶೇಷ ಜವಾಬ್ದಾರಿಯು ನಮಗೂ ಇದೆ) ಅಲ್ಲದೆ ಕಾರಣಾಂತರದಿಂದ ಕಾಲಕ್ಕೆ ತಕ್ಕ ವೇಷ ಹಾಕುವವರನ್ನು ನಿಲ್ಲಿಸಿ ಮತದಾರರ ಮತ್ತು ಕೊನೆಗೆ ಕೊಂಗ್ರೆಸಿನ ಧ್ಯೇಯಗಳಿಗೇ ಕುಂದು ತರುವಂತಹವರನ್ನು ನಿಲ್ಲಿಸಿದರೆ ಚಿತ್ತಾವನ ಮತದಾರರೆಲ್ಲರೂ (ರಾಷ್ಟ್ರೀಯ ಸಂಸ್ಥೆಯಲ್ಲಿರುವ ವಿಧೇಯಬುದ್ಧಿಯಿಂದ ವಿರುದ್ಧವಾಗಿ ಮತದಾನ ವೀಯುವುದಿಲ್ಲ) ಈ ಚುನಾವಣೆಯಲ್ಲಿ ತಟಸ್ಥರಾಗಿರಬೇಕಾಗುತ್ತದೆಂಬುದನ್ನು ಈ ಮೂಲಕ ಜಾಹೀರು ಮಾಡುವಂತಾದ್ದಾಗಿರುತ್ತದೆ.'

(ಲೀಗಿನ ಅಪ್ಪಣೆ ಮೇರೆಗೆ)

ಜಿ. ಎನ್. ಭಿಡೆ,
ಕಾರ್ಯದರ್ಶಿ.

ಕರ್ನಾಟಕ

ಬೆಳ್ಗಾಂ ಜಿಲ್ಲೆಯ ಕರಡಿಗೆ ಗ್ರಾಮದ ೬೦೦ ಮಂದಿ ಹರಿಜನರು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವರೆಂದೂ, ಇನ್ನು ೨೦೦ ಮಂದಿ ಹರಿಜನರು ಅದೇ ಧರ್ಮವನ್ನು ಸ್ವೀಕರಿಸಲಿರುವರೆಂದೂ ಕೇಳಿ ಅಲ್ಲಿನ ಹಿಂದುಗಳು ತುಂಬಾ ಉದ್ವೇಗಗೊಂಡಿದ್ದಾರೆ.

ಲೇಡಿ ಪುಟ್ಟಣ್ಣ ಚೆಟ್ಟರ ಭಾವಚಿತ್ರವನ್ನು ಬೆಂಗಳೂರು ಶ್ರೀ ಶಾರದಾ ಸ್ತ್ರೀ ಸಮಾಜದವರು, ಇಂಡೂರು ಸಂಸ್ಥಾನದ ಮಹಾರಾಣಿಯವರಿಂದ, ಅನಾವರಣ ಮಾಡಿಸಿದರು.

ಬೆಂಗಳೂರಿನಲ್ಲಿ ಗವರ್ನ್‌ಮೆಂಟ್ ಇಂಡಸ್ಟ್ರೀಯಲ್ ವರ್ಕ್ಸ್ ಶಾಪಿನಲ್ಲಿ ೨,೬೦೦ ರೂಪಾಯಿಗಳ ದುರುಪಯೋಗದ ಸುದ್ದಿಯು ಈಗ ತಿಳಿದುಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ, ಸಾಂಬಶಿವಮೂರ್ತಿಯನ್ನು ಪೋಲೀಸರು ಕೈದು ಮಾಡಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದಾಗ, ಜಾಮೀನಿನ ಮೇಲೆ ಸದ್ಯಕ್ಕೆ ಬಿಡುಗಡೆಯಾಗಿದೆ. ಬೆಂಗಳೂರು ನಗರದಲ್ಲಿ, ಛಪಾವಣೆ, ನಂಬಿಕೆ, ದ್ರೋಹ, ಮುಂತಾದ ಪ್ರಸಂಗಗಳು ಬಹಳ ಹೆಚ್ಚುತ್ತಿವೆ. ಈಗ ವಿಚಾರಣೆಯಾಗುತ್ತಿರುವ ಈ ಪ್ರಸಂಗಗಳನ್ನು ನೆನಪಿಸಬಹುದು. ಆಫೀಸ್ಸ್ ಬ್ಯಾಂಕ್ ಛಪಾವಣೆ; ಮಿಡಿಕಲ್ ಸ್ಕೂಲಿನ ಹಣ ದುರುಪಯೋಗ; ಕ್ವಿಲನ್ ಬ್ಯಾಂಕಿನಲ್ಲಿ ನಡೆದ ೯,೧೦೦ ರೂಪಾಯಿಯ ದುರುಪಯೋಗ; ವೈಶ್ಯ ಬ್ಯಾಂಕಿನವರ ೪೦೦೦ ರೂ.ಗಳ ಹಣದ ದುರುಪಯೋಗ; ಪೌರ ಸಭೆಯ ಹಣದ ದುರುಪಯೋಗ; ವಿದ್ಯುಚ್ಛಕ್ತಿ ಇಲಾಖೆಯಲ್ಲಿ ೧೫,೦೦೦ ರೂಪಾಯಿಗಳ ಛಪಾವಣೆ; ಶಂಕರಪುರದ ಪೋಸ್ಟಾಫೀಸಿನಲ್ಲಿ ನಡೆದ ಹಣದ ದುರುಪಯೋಗ.

ತಾಯಿನಾಡು ದಿನಪತ್ರಿಕೆಯ ಸಂಪಾದಕರು, ಜನವಾಣಿ ಸಂಪಾದಕರ ಮೇಲೆ, ಹೂಡಿದ್ದ ಮಾನನಷ್ಟದ ಮೊಕದ್ದಮೆಯು ವಿಚಾರಣೆಗೆ ಬಂದಿದೆ. ಜನವಾಣಿ ಸಂಪಾದಕರು 'ಖಾನ್‌ಸುಪಾರಿ' ಎಂಬ ಲೇಖನದಲ್ಲಿ, ತಾಯಿನಾಡು ಸಂಪಾದಕರು, ಶ್ರೀಮತಿ ಕಮಲಾ ನೆಹರೂರವರು ದಿವಂಗತರಾದ ಮೇಲೆ, ಅವರ ಮಗಳ ಚಿತ್ರವನ್ನು ಅವರ ಭಾವಚಿತ್ರವೆಂದು ಪ್ರಕಟಿಸಿದ್ದಾರೆಂದು, ವ್ಯಂಗ್ಯವಾಗಿ ಬರೆದು, ತಮಗೆ ಅಪಮಾನ ಮಾಡಿದ್ದಾರೆಂದು ತಾಯಿನಾಡು ಸಂಪಾದಕರು ದಾವಾ ಹೂಡಿದ್ದಾರೆ.

ಬೆಂಗಳೂರು ಸಿ. ಎಂಡ್ ಎಂ. ಸ್ಟೇಶನಿನ ಬಾಯರ್ ಸ್ಕೌಟ್ ಸಂಘದ ವಾರ್ಷಿಕ ಸಾಮಾನ್ಯ ಸಭೆ ಮಾನ್ಯ ಬ್ರಿಟಿಷ್ ರೆಸಿಡೆಂಟರಾದ ಲೆ॥ ಕರ್ನಲ್ ಸಿ. ಟಿ. ಸಿ. ಪ್ಲೋವ್‌ಡನ್, ಕ್ರಾಂತಿಕ ಚೀಫ್ ಸ್ಕೌಟ್, ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬೆಂಗಳೂರಿನ ಸೋಪ್ ಫ್ಯಾಕ್ಟರಿಯಲ್ಲಿ ಕೆಲವು ವಿದ್ಯುಚ್ಛಕ್ತಿಯ ದೀಪಗಳನ್ನು ಸರಿಪಡಿಸುತ್ತಿದ್ದಾಗ, ವಿದ್ಯುಚ್ಛಕ್ತಿ ಶಾಖೆಯ ಆ ಒಬ್ಬ ಉದ್ಯೋಗಿಯು, ಒಂದು ಜೀವಯುಕ್ತವಾದ ತಂತಿಯನ್ನು ಒಂದು ಉಪಕರಣದ ಮೂಲಕ ತುಂಡು ಮಾಡಲು ಹೋಗಿ ನೆಲಕ್ಕೆ ಬಿದ್ದನು. ಆಸ್ಪತ್ರೆಯಲ್ಲಿ ಮೃತನಾದನು.

ಇರ್ವಿನ್ ಕಾಲಿವೆಯ ಕ್ಷೇತ್ರದ ಕಬ್ಬಿನ ಬೆಲೆಯನ್ನು ನಿರ್ಣಯಿಸಲು ಮೈಸೂರು ಸರಕಾರವು ಸರಕಾರಿ ಹಾಗೂ ಬಿನ್ ಸರಕಾರೀ ಮೆಂಬರರದೊಂದು ಸಮಿತಿಯನ್ನು ನೇಮಿಸಿದೆ.

ಗ್ವಾಲಿಯರ್ ಮಹಾರಾಜರವರು ಪರಿವಾರ ಸಹಿತ ಕೋಲಾರದ ಬಂಗಾರದ ಗನಿಗಳನ್ನು ನೋಡಿಕೊಂಡು ಹಿಂತೆರಳಿದರು.

ಶ್ರೀ. ಎಸ್. ಜಿ. ಶಾಸ್ತ್ರಿಗಳವರು ಮೈಸೂರಿನ ಕೈಗಾರಿಕೆ ಮತ್ತೂ ವಾಣಿಜ್ಯ ಶಾಖೆಯ ಡೈರೆಕ್ಟರರಾಗಿ ನೇಮಿಸಲ್ಪಟ್ಟಿರುವುದರಿಂದ ಸಿರಿ ಕಲ್ಚರಿನ ಸುಪರಿಂಟೆಂಡೆಂಟರಾದ ಶ್ರೀ. ಎಚ್. ಎಸ್. ಗೋವಿಂದರಾವ್ ಇವರು ಈ ಬಾರಿಯ ದಸರಾ ಪ್ರದರ್ಶನದ ಕಾರ್ಯದರ್ಶಿಗಳಾಗಿಯೂ, ಶ್ರೀ. ವಿ. ವೆಂಕಟಾಚಾರ್ಯರವರು ಸಹಾಯಕ ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಯುರೋಪೀಯರಿಗಾಗಿಯೇ ಒಂದು ಪ್ರತ್ಯೇಕವಾದ ವಾರ್ಡ್ ನಿರ್ಮಾಣವಾಗಲಿದೆ ಎಂದು ತಿಳಿದುಬರುತ್ತದೆ.

(೧೧ನೇ ಪುಟದಿಂದ)

ಖರಗಪುರದ ಆರ್. ಎಸ್. ರೈಲ್ವೆ ವರ್ಕ್‌ಶಾಪಿನ ಕೆಲಸಗಾರನಾದ ಎಸ್. ಆರ್. ಮಾತಾ ಸಿಂಗನೆಂಬವನು, ಭಗತ್ ಸಿಂಗನೇ ಮೊದಲಾದವರ ಕೆಲವರ ಭಾವಚಿತ್ರಗಳನ್ನು ಇಟ್ಟುಕೊಂಡಿದ್ದನೆಂದ ಆತನಿಗೆ ಎರಡು ವರ್ಷಗಳ ಸಜೆ.

ನಮ್ಮ ಇಂಡಿಯದ ಕ್ರಿಕೆಟ್ ಟೀಮಿನವರಿಗೂ, ಲಂಕಾ ಶಯರಿನವರಿಗೂ ನಡೆದ ೩ ದಿವಸದ ಕ್ರಿಕೆಟ್ ಪಂದ್ಯಾಟದಲ್ಲಿ ನಮ್ಮ ಇಂಡಿಯದವರು ಗೆದ್ದರು. ಇದೇ ಅವರ ಇಂಗ್ಲೆಂಡಿನ ಯಾತ್ರೆಯ ಪ್ರಥಮ ವಿಜಯ. ಇದರಲ್ಲಿ ಇಂಡಿಯದವರ ರನ್ನು ೨೭೧ ಮತ್ತೂ ೧೬೧; ಲಂಕಾಶಯರಿನವರದು ೨೩೪ ಮತ್ತೂ ೧೧೪. ಇಂಡಿಯದವರಿಗೆ ೪೪ ರನ್ನು ಹೆಚ್ಚು.

ಆಶ್ರಿತ ಸಂಸ್ಥಾನಗಳ ಪ್ರಜೆಗಳ ಜನೆಯ ಕಾನ್ಫರೆನ್ಸು ಕರಾಚಿಯಲ್ಲಿ ಡಾ॥ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರೆಯಿತು.

ಡಿಲ್ಲಿಯಲ್ಲಿ ಈ ವರ್ಷ ಬೆಂಕಿಯ ಹಾವಳಿ ವಿಪರೀತವಾಗಿದೆ. ಕಳೆದ ೧೯೩೫ನೇ ಎಪ್ರಿಲ್ ೧೫ರಿಂದ ೧೯೩೬ನೇ ಮಾರ್ಚಿ ೩೧ರ ವರೆಗೆ ಅಲ್ಲಿ ೧೦೯ ಕಡೆ ಬೆಂಕಿ ಎದ್ದಿದ್ದುವು. ಈ ವರ್ಷ ಎಪ್ರಿಲ್ ೧೫ರಿಂದ ಇಲ್ಲಿಯ ತನಕ ೫೧ ಕಡೆ ಬೆಂಕಿ!—ದಿನಕ್ಕೊಂದು.

ಅಫಘಾನಿಸ್ಥಾನದಲ್ಲಿ ಹಿಂದೂ-ಸಿಖ್ಖರನ್ನು ಒಂದೇ ಕಡೆ ವಾಸಿಸಲು ಏರ್ಪಡಿಸುತ್ತಿರುವರು; ಇದರಿಂದ ಅವರ ವ್ಯಾಪಾರಕ್ಕೆ ವಿಶೇಷ ಹಾನಿಯುಂಟು. ಹಾಗಾಗದಂತೆ ಏರ್ಪಡಿಸಬೇಕೆಂದು ಕೌನ್ಸುರದ ಸಿಖ್ಖರು ವೈಸರಾಯರಿಗೆ ಮನವಿ ಮಾಡಿದ್ದಾರೆ.

ಮೋಟರ್ ಬಸ್ಸುಗಳಿಗೆ ಇನ್ಶೂರ್ ಆಗಬೇಕು, ಡ್ರೈವರರ ಆರೋಗ್ಯಪರೀಕ್ಷೆ ನಡೆಯಬೇಕು, ಬಸ್ಸುಗಳಲ್ಲಿ ಸ್ಪರ್ಧೆ ಕಡಿಮೆಯಾಗುವಂತೆ, ಬಸ್ಸುಗಳ ಸಂಖ್ಯೆಯನ್ನು ಮಿತಪಡಿಸಬೇಕು ಎಂಬಿತ್ಯಾದಿ ಹಲವು ಸೂಚನೆಗಳುಳ್ಳ ವರದಿಯನ್ನು ಟ್ರಾನ್ಸ್‌ಪೋರ್ಟ್ ಎಡ್ವೈಜರಿ ಕೌನ್ಸಿಲು, ಇಂಡಿಯಾ ಸರಕಾರಕ್ಕೆ ಬರೆದೊಪ್ಪಿಸಿದೆ.

ಮದ್ರಾಸಿನಲ್ಲಿ ೧೦-೧೨ ವಯಸ್ಸಿನ ಶಾಲಾ ಮಕ್ಕಳು ಸೇರಿ 'ಇಟೆಲಿ ಅಬಿಸೀನಿಯದ ಮೇಲೆ ಬಿದ್ದಾಗ, ಜನಾಂಗ ಸಂಘವು ಇಟೆಲಿಯ ಮೇಲೆ ಮಿಲಿಟರಿ ಸ್ಯಾಂಕ್ಷನುಗಳನ್ನು ಪ್ರಯೋಗಿಸಬೇಕಾಗಿದ್ದಿತ್ತು' ಎಂದು ಬಹಳ ಚಾತುರ್ಯದಿಂದ ವಾದಿಸಿದರು. ಇಟೆಲಿಯ ವರ್ತನವನ್ನು ಖಂಡಿಸಿದರು. ಜನಾಂಗಸಂಘದ ನೈತಿಕ ಧರ್ಮವು ಯಾವುದಾಗಿದ್ದಿತೆಂದು ತರ್ಕ ಮಾಡಿದರು. ಕೊನೆಗೆ ಠರಾವು ಮಂಜೂರಾಯಿತು.

ಜಮೈತ್ ಸಿಂಗ್ ಮತ್ತೂ ನಾನಕ್ ಚಂದ್ ಎಂಬಿಬ್ಬರು ಕಾನ್‌ಸ್ಟೇಬಲರು ಹಂಗೂವಿನ ಬರಾಕ್ಸಿನಲ್ಲಿ ಮಲಗಿ ನಿದ್ರಿಸುತ್ತಿದ್ದ ಹಾಗೆ ಗುಂಡಿನೇಟಿನಿಂದ ಕೊಲ್ಲಲ್ಪಟ್ಟಿರುವರು. ಅವರನ್ನು ಕೊಂದವನು ಮತ್ತೊಬ್ಬ ಕಾನ್‌ಸ್ಟೇಬಲನಂತೆ. ಅವನು ತಪ್ಪಿಸಿಕೊಂಡಿದ್ದಾನೆ.

ತಿನ್ನವೆಲ್ಲಿಯ ವಿಮಾನನಿಲ್ದಾಣಕ್ಕಾಗಿ ಪಾಮಕೋಟೆಯಲ್ಲಿ ಸ್ಥಳ ನೋಡಿದ್ದಾರೆ.

ಇಲ್ಲಿಯ ಶ್ರೀ ಕೃಷ್ಣ ಸಿನೇಮ ಮಂದಿರದಲ್ಲಿ ತಾ. ೨೫—೭—೧೯೩೬ರಿಂದ ಪ್ರದರ್ಶಿಸಲ್ಪಡುವ "ಲಗ್ನಬಂಧನ"ವೆಂಬ ಚಿತ್ರದಲ್ಲಿಯ ದೃಶ್ಯ.

ಶಿಕ್ಷಣ ವಿಚಾರ

ಶಿಕ್ಷಣಪ್ರಸಾರ.

ಶಿಕ್ಷಣಕ್ರಮದಲ್ಲಿ ರಾಷ್ಟ್ರೀಯತೆ.

ಹಿಂದೀಯರಿಗೆ ಪರಂಪರಾಗತವಾಗಿ ಬಂದಿರುವ ಸಂಸ್ಕೃತಿಗೆ ತಕ್ಕಂತೆಯೇ ಹಿಂದೂದೇಶದಲ್ಲಿ ಶಿಕ್ಷಣವಿರತಕ್ಕುದೆಂಬ ವಿಚಾರವು ಈಗ ಅಲ್ಲಲ್ಲಿ ಭಾಷಣಗಳಲ್ಲಿ ವ್ಯಕ್ತವಾಗುತ್ತಲಿದೆ. ಪುರಾತನ ಕಾಲದ ಇತಿಹಾಸವನ್ನು ನೋಡಿದರೆ, ಯಾವುದೊಂದು ದೇಶದಲ್ಲಾದರೂ, ಶಿಕ್ಷಣವು ಆಯಾ ದೇಶದ ಪರಂಪರಾಗತವಾದ ಸಂಸ್ಕೃತಿಯನ್ನು ಅನುಸರಿಸಿಯೇ ರೂಪುಗೊಂಡಿದ್ದಿತೆಂದು ಸ್ಪಷ್ಟವಾಗುವುದು. ನಮ್ಮಲ್ಲೀಗ ರೂಢಿಯಲ್ಲಿರುವ ಶಿಕ್ಷಣಕ್ರಮವು ನಮ್ಮ ಸಂಸ್ಕೃತಿಗೆ ಒಪ್ಪುವಂತಹದೇ ಅಲ್ಲ, ಮಾತ್ರವಲ್ಲ ಇನ್ನೂ ಅಧೋಗತಿಗಿಳಿಸುವ ತೆರದ್ದಾಗಿದೆ. ಜನಾಂಗದ ಸೇವೆಗಾಗಿ ಸರ್ವಸ್ವವನ್ನು ತ್ಯಜಿಸಿ, ತನ್ಮನ್ನೇ ಅರ್ಪಿಸಿಕೊಂಡಿರುವ ಹಿಂದೀ ಮಹನೀಯರು ಹಿಂದೀ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಿತರಾದುದು ನಿಜ; ಆದರೆ, ಅವರ ಜೀವನಕ್ರಮವು ಮಾತ್ರ ಈ ಶಿಕ್ಷಣದಿಂದ ರೂಪಿತವಾದುದಲ್ಲ. ಇಂತಹರೇ ತಮಗೆ ದೊರೆತ ಶಿಕ್ಷಣವನ್ನು ಫೈಣೆಯಿಂದ ನೋಡುತ್ತ ಅದು ಅಸಹ್ಯವಾದುದೆಂದೂ ಎನ್ನುತ್ತಿರುವರು. ಸೇವೆ, ಸಂಸ್ಕೃತಿ, ಧರ್ಮ, ಜ್ಞಾನಾರ್ಜನೆ ಎಂಬಿವೇ ನಾಲ್ಕು ಭಾರತವಾಸಿಯರ ಶಿಕ್ಷಣದ ಗುರಿಯಾಗಿದ್ದುವು. ಹಿಂದೂದೇಶದಲ್ಲಿನ ಪುರಾತನ ವಿದ್ಯಾಪೀಠಗಳು ಇವನ್ನೇ ಬೋಧಿಸುತ್ತಿದ್ದುವು. ವಿಸ್ತಾರವಾದ ತಪೋವನಗಳಲ್ಲಿ, ಸೃಷ್ಟಿದೇವಿಯ ಮಡಿಲಲ್ಲಿ ಭಾರತೀಯರು ತಮ್ಮ ಜ್ಞಾನವನ್ನು ಸಂಗ್ರಹಿಸುತಿದ್ದರು. ಅಂತಹ ವಿದ್ಯಾಪೀಠಗಳು ಈಗ ನಂದಿಹೋಗಿವೆ. ಪ್ರತಿಯೊಂದು ಸುಧಾರಿತ ಜನಾಂಗವೆಂಬುದು ತನ್ನ ಜಾತೀಯತೆಗೆ ಒಪ್ಪುವ ಶಿಕ್ಷಣವನ್ನೇ ಇಟ್ಟುಕೊಂಡಿದೆ. ಇಂತಹ ಪ್ರತಿಯೊಂದು ಜನಾಂಗದ ಜಾತೀಯತೆಯಲ್ಲಿ ಪ್ರತ್ಯೇಕವಾದ ಮಹತ್ವವು ಇದ್ದೇ ಇರುವುದು. ನಮ್ಮಲ್ಲಿನ ಯೂನಿವರ್ಸಿಟಿಗಳಲ್ಲಿ ಜಾತೀಯವಾದುದೇನನ್ನೂ ಕಲಿಯುವ ಹಾಗಿಲ್ಲ. ಇಂಗ್ಲೆಂಡು, ಅಮೇರಿಕ, ಜಾಪಾನುಗಳಿಗೆ ನಮ್ಮ ಯುವಕರು ಶಿಕ್ಷಣದ ಸಲುವಾಗಿ ಹೋಗುತ್ತಿರುವುದನ್ನು ನೋಡುವಾಗ, ನಮ್ಮ ಶಿಕ್ಷಣವು ಕುಂದುಗಳುಳ್ಳುದೆಂದೇ, ಅಪೂರ್ಣವಾದುದೆಂದೇ ತೋರುವುದಿಲ್ಲವೆ? ನಮ್ಮ ಶಿಕ್ಷಣಕ್ರಮದಲ್ಲಿ ಕಿಂಚಿತ್ತಾದರೂ ಜಾತೀಯತೆ ಇರಬೇಡವೆ? ಪ್ರಾಚೀನ ಭಾರತೀಯರ ಶಿಕ್ಷಣಕ್ರಮಗಳಲ್ಲಿ ಕೆಲವು ಪ್ರಾಮುಖ್ಯ ವಿಚಾರಗಳನ್ನಾದರೂ ನಾವು ಅನುಸರಿಸಲಾರೆವೆ? ನಮ್ಮ ಭಾರತಭೂಮಿಯನ್ನು ತಿಳಿದುಕೊಳ್ಳುವುದಕ್ಕೆ ಯಾವ ಪ್ರಯಾಸವನ್ನೂ ನಮ್ಮ ವಿದ್ಯಾರ್ಥಿಗಳು ತೆಗೆದುಕೊಳ್ಳಬಾರದೇ? ದೇಶೀಯ ವಿಚಾರಗಳಲ್ಲಿ ಹೆಚ್ಚಿನ ತಿಳಿವಳಿಕೆಯೂ ವಿಮರ್ಶೆಯೂ ಉಂಟಾಗುವ ಹಾಗೆ ನಮ್ಮ ಶಿಕ್ಷಣಪದ್ಧತಿಯನ್ನು ತಿದ್ದಿಕೊಳ್ಳಲು ಇನ್ನೂ ಕಾಲವೊದಗಿಲ್ಲವೆ? ಲೀಲಾವತಿ, ಬೀಜಗಣಿತ ಮೊದಲಾದ ಗ್ರಂಥಗಳು, ಹೋಲ್ ಎಂಡ್ ಸ್ಪೀವನ್ಸರಿಗಿಂತ ಚೆನ್ನಾಗಿಯೂ ಸ್ವಾಭಾವಿಕವಾಗಿಯೂ ನಮ್ಮ ಮನಸ್ಸಿಗೆ ನಾಟುವುವು. ಶಾಲೆಗಳನ್ನಾದರೂ ಹಿಂದೀ ಮಂದಿರಗಳಂತಿರಿಸದೆ, ಎಂತಹವೊ ಕಟ್ಟಡಗಳಂತೆ ಇರಿಸಬೇಕೆ?

—(N. G. S.)

ವಿದ್ಯಾಇಲಾಖಾ ಮಂತ್ರಿಗಳ ಭಾಷಣ

ಎಲ್ಲ ಬಗೆಯ ಪ್ರಗತಿಗೂ ಸಮಯವು ಸಾಕಷ್ಟು ಬೇಕಾಗಿದೆ. ಹಿಂದೀಯರಿಗೆ 'ವಸಾಹತುಗಳ ಹಕ್ಕು' ಕೊಟ್ಟರೆ, ಅವರು ಖಂಡಿತವಾಗಿಯೂ ಅದನ್ನು ಪಾಲಿಸಿ ಬರಲು ತಮ್ಮ ಯೋಗ್ಯತೆಯನ್ನು ಪ್ರಕಟಿಸದೆ ಇರಲಾರರು. ಆದರೆ, ಈಗ ದೊರೆತಿರುವ ಶಾಸನವು ನಮ್ಮ ಯೋಗ್ಯತೆಗೆ ಅಷ್ಟು ಒಪ್ಪದಾಗಿದೆ. ಈ ದೇಶವು ಬ್ರಿಟಿಷ ಡೊಮಿನಿಯನ ತರಗತಿಗೆ ಏರಿದರೆ, ಬ್ರಿಟಿಷರು ಕೈಗಾರಿಕೆ ಮತ್ತು ಶಿಕ್ಷಣವಂತಹ ದೇಶಹಿತಕಾರ್ಯಗಳ ಪ್ರಚಾರಕ್ಕೆ ಬೇಕಾಗುವಷ್ಟು ಸಹಾಯ ಮಾಡುವರೆಂದು ಪಾರ್ಲಿಮೆಂಟಿನ ಮಾಜಿ ಮೆಂಬರರು ಸ್ಪೆನ್ಸರ್ ವಾರ್ಡಿ ಜೋನ್ಸ್‌ರು ಹೇಳಿರುವರು. ಆದರೆ, ಬ್ರಿಟಿಷರು ಅಂತಹ ಸಹಾಯವನ್ನಾಗಲಿ ದಾನವನ್ನಾಗಲಿ ಮಂತಿಗೆಯನ್ನಾಗಲಿ ಈಗ ಕೊಡದಂತೆ ಅವರ ಕೈಯನ್ನು ಯಾರೂ ತಡೆದುದಿದೆಯೇ? ಇಂಡಿಯವು ಒಂದು ಡೊಮಿನಿಯನ್ ಎನಿಸಿದ ಕೂಡಲೇ, ನಮ್ಮಲ್ಲಿ ಬ್ರಿಟಿಷರ ವಿಶ್ವಾಸವು ಹೆಚ್ಚುವುದೆಂದಾಗಲಿ, ನಮಗೆ ಸಾಲ ತೆತ್ತರೆ ಅದು ಹಿಂದೆ ಸಲ್ಲುವುದೆಂಬ ವಿಶ್ವಾಸವು ಹೆಚ್ಚುವುದೆಂದಾಗಲಿ ಹೇಗೆ ಹೇಳಬಹುದು? ನಾನು ವಿದ್ಯಾ ಇಲಾಖೆಯ ಮಂತ್ರಿ; ಜನಗಳಲ್ಲಿ ಅಕ್ಷರಜ್ಞಾನವು ಹೆಚ್ಚಬೇಕೆಂಬುದು ನನ್ನ ಆಕಾಂಕ್ಷೆಯಾಗಿದೆ. ನಾನು ಈ ಭಾಗದಲ್ಲಿ ತುಂಬ ಜವಾಬುದಾರಿಯನ್ನು ವಹಿಸಿಕೊಳ್ಳಬೇಕೆಂದು ಮೆ। ಜೋನ್ಸ್‌ರು ಹೇಳಿರುವರು. ನಾನು ನನ್ನ ಜವಾಬುದಾರಿಯನ್ನು ಎಂದೋ ತಿಳಿದುಕೊಂಡೇ ಇದ್ದೇನೆ. ಆದರೆ, ನನ್ನ ಇಲಾಖೆಯ ಪ್ರಗತಿಗೆ ಬೇಕಾಗುವಷ್ಟು ಹಣವೇ ದೊರೆಯದಂತಾಗಿರುವಾಗ, ಯಾರೇನು ಮಾಡಬಹುದು? ಹಣವಿದ್ದರೆ ಎಂತಹ ಸುಧಾರಣೆಯನ್ನಾದರೂ ಮಾಡಬರುವುದು. ನಮ್ಮಲ್ಲಿನ ಕೈಗಾರಿಕೆಗಳು ಅಭಿವೃದ್ಧಿಹೊಂದಿದಂತೆ ವಿದೇಶೀಯ ಭಾಂಡವಳಿಕರೇ ಸಂಶಯದೃಷ್ಟಿಯಿಂದ ಕಾಣುವ ಅವರ ಮನೋವೃತ್ತಿಯೇ ಬಹುಮಟ್ಟಿಗೆ ಕಾರಣವಾಗಿದೆ. ನಮ್ಮ ಕೈಗಾರಿಕೆಗಳು ಬೇವರೆ, ಅವರ ಸರಕು

ಇಲ್ಲಿ ಮಾರದಲ್ಲ ಎಂದೇ ಅವರಿಗೆ ಬೆದರಿಕೆಯಂತೆ! ಈ ಸಂದೇಹ ಭಯಗಳು ಸಕಾರಣವಾಗಿದ್ದರೂ ಇರಬಹುದು. ಆದರೆ, ನಮ್ಮ ಪ್ರೋತ್ಸಾಹಕ್ಕೆಂದು ಬುದ್ಧಿ ಹೇಳುವ ಬ್ರಿಟಿಷರು ಮಾತಾಡುವುದನ್ನು ಬಿಟ್ಟು, ಸ್ವಲ್ಪ ಕಾರ್ಯತಃ ತಮ್ಮ ಸಹಾನುಭೂತಿ ಪ್ರಕಟಿಸಬಾರದೆ?

ಶಿಕ್ಷಿತ ನಿರುದ್ಯೋಗಿಗಳಿಗಾಗಿ

ಸರಕಾರವು ನೂತನವೊಂದು ಹಂಚಿಕೆ ಹೂಡಿರುವುದು. ಲೆಜಿಸ್ಲೇಟಿವ್ ಕೌನ್ಸಿಲು ಈ ಕುರಿತಾದ ಖರ್ಚನ್ನು ಮಂಜೂರು ಮಾಡುತ್ತಲೇ, ಸರಕಾರವು ೧೫೦ ಮಂದಿ ಎಸ್. ಎಸ್. ಎಲ್. ಸೀ. ತೇರ್ಗಡೆ ಹೊಂದಿರುವ ಯುವಕರಿಗೆ ಕೃಷಿ ಮಾಡುವ ಕ್ರಮಗಳಲ್ಲಿ ಪ್ರತ್ಯಕ್ಷ ಬೋಧನೆ ಕೊಡಲು ಈ ವರ್ಷವೇ ವ್ಯವಸ್ಥೆ ಮಾಡಬೇಕಾಗಿ ಸರಕಾರದ ನಿಶ್ಚಿತವಿದೆ.

ಕೊನೆಗೆ S. S. L. C. ಪಕ್ಷ ಪರೀಕ್ಷೆಯನ್ನಾದರೂ ಪಾಸಾದವರಲ್ಲಿ ಜಮೀನು ಉಳ್ಳವರಾಗಿ ಕೃಷಿಕ ಕುಟುಂಬದವರು ಈಗ ಕೆಲಸವಿಲ್ಲದೆ ಇರುವರಾದರೆ, ಅವರ ಅರ್ಜಿಗಳನ್ನು ಸ್ವೀಕರಿಸಿ, ೧೫೦ ಮಂದಿಯನ್ನು ಗವರ್ನಮೆಂಟ್ ಕೃಷಿ ಕ್ಷೇತ್ರಗಳಲ್ಲಿ ನಾಲ್ಕು ತಿಂಗಳ ಪ್ರತ್ಯಕ್ಷ ಬೋಧನೆ ಕೊಡುವರೆ ವ್ಯವಸ್ಥೆ ಮಾಡುವಂತಿದೆ. ಈ ತರಬೇತು ಸೆಪ್ಟೆಂಬರಿನಲ್ಲಿ ಪ್ರಾರಂಭವಾಗುವುದು. ಪ್ರತಿ ವಿದ್ಯಾರ್ಥಿಗೂ ತಿಂಗಳಿಗೆ ೧೫ ರೂಪಾಯಿಗಳ ವೇತನ ಕೊಡಲಾಗುವುದು. ಹೀಗೆ ತರಬೇತಾದವರು ಮುಂದೆ ತಮ್ಮ ಜಮೀನುಗಳಲ್ಲಿ ಕೃಷಿ ಮಾಡಬೇಕೆಂದೇ ಮಾತ್ರ ಒಂದು ಶರ್ತವಿದೆ.

ಈ ಏರ್ಪಾಡಿಗೆ ೯,೦೦೦ ರೂಪಾಯಿ ಬೇಕಾಗಿದೆ. ಬರುವ ತಿಂಗಳಲ್ಲಿ ಕೌನ್ಸಿಲು ಈ ಮೊಬಲಗನ್ನು ಸೆಂಕ್ಷನು ಮಾಡುವಂತೆ ಸರಕಾರವು ಈ ಸೂಚನೆಯನ್ನು ಕೌನ್ಸಿಲಿನ ಮುಂದೆ ಇಡುವುದು.

ಮೈಸೂರು ಸರಕಾರವು

ಶಿಕ್ಷಣಕ್ರಮವಿಮರ್ಶೆಗಾಗಿ ನೇಮಿಸಿದ್ದ ಕಮಿಟಿಯು ಸರಕಾರಕ್ಕೆ ಕೊಟ್ಟಿರುವ ಸೂಚನೆಗಳನ್ನು ಕುರಿತಾಗಿ ಹಿಂದೆಯೆ ಬರೆದಿದ್ದೇವೆ. ಇವೆಲ್ಲವು ನಿಜವಾಗಿಯೂ ವಿಚಾರಾರ್ಹವಾದ ಸೂಚನೆಗಳು; ಇವನ್ನು ಅಂಗೀಕರಿಸಿದರೆ, ಮೈಸೂರು ಇಡೀ ದೇಶಕ್ಕೆ ಒಂದು ಮಾದರಿಯ ಶಿಕ್ಷಣಕ್ರಮವನ್ನು ಪ್ರಾರಂಭಿಸಲು ತೋರಿಸಿಕೊಡುವಂತಾದೀತು. ವೃತ್ತಿ (ಕಸಬುಗಾರಿಕೆಯ) ಶಿಕ್ಷಣವನ್ನು ಪ್ರತ್ಯೇಕಿಸಿ, ಪ್ರಾಯ್ಮೆರಿ ಶಾಲೆಗಳು, ಮಿಡಲ್ ಸ್ಕೂಲುಗಳು, ಹೈ ಸ್ಕೂಲುಗಳು ಎಂಬ ಮೂರು ತರಗತಿಗಳ ಶಾಲೆಗಳನ್ನು ಇಟ್ಟು, ಈ ತರಗತಿಗಳಲ್ಲೂ ಪುನಃ ಸಾಮಾನ್ಯ ಶಾಲೆಗಳು ಬೇರೆ, ಕಸಬು ತರಬೇತಿನವು ಬೇರೆ ಎಂದೂ ವಿಭಾಗಿಸುವುದೇ ಮುಂದಣ ಕ್ರಮವಾಗಬೇಕೆಂದು ಸೂಚಿಸಲಾಗಿದ್ದಿತು. ಯುನಿವರ್ಸಿಟಿ ಪ್ರವೇಶಕ್ಕೆ ಮೊದಲು ೧೨ ವರ್ಷಗಳ ತನಕ ವಿದ್ಯಾಭ್ಯಾಸಕ್ರಮವಿರಬೇಕೆಂದೂ, ಇಂಗ್ಲಿಷಲ್ಲದ ಇತರ ವಿಷಯಗಳನ್ನೆಲ್ಲ ಕನ್ನಡದ ಮೂಲಕವೇ ಬೋಧಿಸಬೇಕೆಂದೂ ಮಿಡಲ್ ಮತ್ತು ಹೈಸ್ಕೂಲ ತರಗತಿಗಳ ಶಿಕ್ಷಣ ಮುಗಿಯುತ್ತಲೆ ಪರೀಕ್ಷೆಗಳಿರಬೇಕೆಂದೂ ಶಿಫಾರಸು ಮಾಡಲಾಗಿದ್ದಿತು. ಇದಕ್ಕೆಲ್ಲ ಧಾರಾಳವಾದ ಹಣವು ಅಗತ್ಯವಾಗಿಯೂ ಬೇಕಾಗಿರುವುದು ನಿಜ; ಸರಕಾರವೂ ಇದುವರೆಗೆ ಈ ಶಿಫಾರಸುಗಳನ್ನು ಅಂಗೀಕರಿಸಿಲ್ಲವೆಂಬುದೂ ನಿಜವೆ.

ಆದರೆ, ಕಳೆದ ವರ್ಷದ ಜೂನ್ ಅಂತ್ಯದ ವರೆಗಣ ಇಲಾಖಾ ವರದಿಯಲ್ಲಿ, ಡೈರೆಕ್ಟರ ಸಾಹೇಬರು ಆರ್ಥಿಕ ಅಡಚಣೆಗಳಿಂದಾಗಿ ಇನ್ನೂ ಶಿಕ್ಷಣಪ್ರಚಾರಕ್ಕೆ ಕೈಹಚ್ಚಲಾಗಿಲ್ಲವೆಂದು ಬರೆದಿದ್ದಾರೆ. ಎಂದರೆ, ಸರಕಾರದ ಖಜಾನೆಯಲ್ಲಿ ಸಾಕಷ್ಟು ಹಣ ಸಿಗುವ ತನಕ ಈ ಶಿಫಾರಸುಗಳು ಅಂತೆಯೆ ರಿಪೋರ್ಟಿನಲ್ಲಿ ಉಳಿಯುವುವೊ ಎಂದು ಅಂಜಿಕೆಪಡಬೇಕಾಗಿದೆ.

ಪ್ರಾಯ್ಮೆರಿ ಶಿಕ್ಷಣವು ವಿಸ್ತರಿಸುತ್ತಲಿದೆ; ಈ ದೆಸೆಯಿಂದ ಮಿಡಲ್ ಶಾಲೆಗಳನ್ನೂ ಈ ಶಾಲೆಗಳನ್ನೂ ಬಲಪಡಿಸುವುದು ಅತ್ಯಾವಶ್ಯಕವಾಗಿದೆ. ತರಗತಿಗೆ ಒಬ್ಬನೇ ಉಪಾಧ್ಯಾಯನಿರುವ ಶಾಲೆಗಳು ಎಷ್ಟೋ ಇವೆ. ಹೈಸ್ಕೂಲುಗಳಿಗೆ ಉಪಕರಣ ಸನ್ನಾಹ ಕಡಮೆಯೆಂದು ಕುಂದು ತೋರುತ್ತಲೇ ಇದೆ. ಈ ಶಾಲೆಗಳು ಇರಬೇಕಾದಷ್ಟು ಉತ್ತಮ ಸ್ಥಿತಿಯಲ್ಲಿಲ್ಲದ ಕಾರಣ, ಇವುಗಳಿಗೆ ತುಂಬ ಸಹಾಯವು ದೊರೆಯಲೇ ಬೇಕಾಗಿದೆ. ಉತ್ತಮ ಶಿಕ್ಷಕರು, ಉಪಕರಣಗಳು, ಸ್ಥಳಾವಕಾಶ—ಇವು ಮೂರು ಅತ್ಯಗತ್ಯವಾಗಿವೆ. ಪ್ರೈಮರಿ ಶಾಲೆಗಳಲ್ಲಿ ಎಷ್ಟೋ ಶಾಲೆಗಳು ಒಬ್ಬನೇ ಉಪಾಧ್ಯಾಯನ ಕೈಯಲ್ಲಿವೆ. ಸ್ಥಳೀಯ ಕಮಿಟಿಗಳು ಸೂಚಿಸುವ ಶಿಕ್ಷಣಪ್ರಗತಿಗೆ ಅಗತ್ಯವಾದ ಏರ್ಪಾಡುಗಳು ಎಲ್ಲೆಲ್ಲಿಯೂ ಹಣದ ಅಭಾವದಿಂದ ಹಾಗೆಯೇ ಉಳಿದಿವೆ. ಇದನ್ನೆಲ್ಲ ನೋಡುವಾಗ, ಮೇಲೆ ಹೇಳಲಾದ ಶಿಫಾರಸುಗಳು ಇನ್ನೆಷ್ಟೋ ಕಾಲದ ವರೆಗೆ ಸರಕಾರದ ಅಂಗೀಕಾರಕ್ಕೆ ಪಾತ್ರವಾಗುವ ಹಾಗಿಲ್ಲವೆಂದೇ ತೋರುತ್ತಿದೆ. ಎಂದರೆ, ಶಿಕ್ಷಣಪ್ರಚಾರವನ್ನು ಕೈಗೊಳ್ಳುವ ಮೊದಲು, ಹಣವನ್ನೆಷ್ಟು ಮತ್ತು ಹೇಗೆ ಒದಗಿಸಿಕೊಳ್ಳಬಹುದೆಂಬ ವಿಚಾರವನ್ನು ಸರಕಾರವು ಮೊದಲಾಗಿ ಮಾಡಿಕೊಳ್ಳಬೇಕಾಗಿದೆ ಎಂದೇ ಸಿದ್ಧಾಂತವಾಗುವುದು.

—(H)

ಎಸ್. ಎಸ್. ಎಲ್. ಸೀ. ತೆಲುಗು ಪಠ್ಯಪುಸ್ತಕ.

ಇದರಲ್ಲಿ ಅನರ್ಥಕರವಾದ ವಿಷಯಗಳೂ, ಅವುಗಳಿಗೆ ಇನ್ನಷ್ಟು ಅನರ್ಥಕರವಾದ ಟೀಕೆಗಳೂ ತುಂಬಿವೆ ಎಂಬ ಕಾರಣದಿಂದ, ಇಂತಹ ಹೇಯವಾದ ಪುಸ್ತಕವನ್ನು ಪಾಠಕ್ಕಿಡಬಾರದೆಂದು ತಮ್ಮ ಆಕ್ಷೇಪವನ್ನು ಸರಕಾರಕ್ಕೆ ತಿಳಿಸುವುದಕ್ಕೋಸ್ಕರ, ಬರಹಾಮಪುರದಲ್ಲೂ ಬಳ್ಳಾರಿಯಲ್ಲೂ ಪುರಜನರ ಸಭೆಗಳಾದುವು. ಈ ಪಠ್ಯಪುಸ್ತಕದಲ್ಲಿ ನಿರುಪಯುಕ್ತವಾದ ವಿಚಾರಗಳುಳ್ಳ ಗದ್ಯಪದ್ಯಗಳೂ, ಅಪರಿಮಿತ ತಪ್ಪುಗಳೂ, ತೆಲುಗು ಸಾಹಿತ್ಯದಲ್ಲಿ ಅತಿ ಕನಿಷ್ಠ ತರಗತಿಯ ಅಂಶಗಳೂ ತುಂಬಿವೆಯಂತೆ. ಯಾವ ರೀತಿಯಲ್ಲೂ ವಿದ್ಯಾರ್ಥಿಯರಲ್ಲಿ ತೆಲುಗು ಭಾಷೆಯ ಕಡೆಗೆ ಪ್ರೇಮವನ್ನಾಗಲಿ ವಾತ್ಸಲ್ಯವನ್ನಾಗಲಿ ಹೆಚ್ಚಿಸಲು ಇವು ಉಪಯೋಗವಾಗಲಾರವಂತೆ. ಟಿಪ್ಪಣಿಯಲ್ಲಿ ಅನವಶ್ಯಕವಾದ ಟೀಕೆಗಳೂ, ಹರಿಜನೋದ್ಧಾರ, ಬಾಲ್ಯವಿವಾಹ, ವಿಧವಾ ವಿವಾಹ, ಹೊಸ ಬಗೆಯ ಸಾಹಿತ್ಯರಚನೆಯ ವಿಚಾರ ಮೊದಲಾಗಿ ಪ್ರತಿಯೊಂದು ವಿಧದಲ್ಲಿ ವಿಮರ್ಶೆಯಿದ್ದು ಅತಿ ಪ್ರಾಚೀನ ಸಂಪ್ರದಾಯವೇ ಕೀರ್ತಿಕರವೆಂದೂ, ಉಳಿದುದೆಲ್ಲವು ವ್ಯರ್ಥವೆಂದೂ ಬೋಧಿಸಲಾಗಿದೆ. ವಿದ್ಯಾರ್ಥಿಗಳ ರಕ್ಷಕರೂ ಸಭೆಗಳಲ್ಲಿ ಹಾಜರಿದ್ದು ಪಂಡಿತರು ಎತ್ತಿದ ಆಕ್ಷೇಪಗಳನ್ನು ಸಮರ್ಥಿಸಿದ್ದಾರೆ. ಈ ಪುಸ್ತಕವನ್ನು ರದ್ದುಪಡಿಸಲು ಚಳವಳಿ ನಡೆಯುತ್ತಿದೆ. ಪಠ್ಯಭಾಗಗಳಿಗೆ ಸಂಬಂಧವೇ ಇಲ್ಲದೆ ಇರುವ ಟೀಕೆಗಳಿಂದ ಯಾರಿಗೆ ಉಪಯೋಗವೊ, ಸಂಪಾದಕರು ತಮ್ಮ ತತ್ವಗಳನ್ನು ಪಕ್ಷಪಾತವಾಗಿ ಪ್ರಚಾರ ನಡಿಸಲು ಈ ಪುಸ್ತಕದಲ್ಲೇಕೆ ಆತುರಪಡಬೇಕೋ ತಿಳಿಯದಾಗಿದೆ. ಬಳ್ಳಾರಿಯಲ್ಲಿ ಜರುಗಿದ ಆಕ್ಷೇಪಣಾ ಸಭೆಯಲ್ಲಿ 'ವಿದ್ಯಾರ್ಥಿಯರ ವಯೋಧರ್ಮಕ್ಕೆ ಒಸ್ಸಲಾರದ ಮತ್ತು ಹಾನಿಕರವಾಗಿರುವ ಜಡಭರತೋಪಾಖ್ಯಾನದಂತಹ ತೀರ ತತ್ವಜ್ಞಾನಮಯ ವಿಚಾರಗಳನ್ನೂ ಕಡು ಶೃಂಗಾರರಸಭರಿತ ವಿಷಯಗಳನ್ನೂ ಪಾಠಕ್ಕಿಡಬಾರದೆ'ಂದು ನಿರ್ಣಯವಾಗಿದೆ. ಕೊನೆಗೆ, ಇನ್ನು ಎಸ್. ಎಸ್. ಎಲ್. ಸೀ. ಬೋರ್ಡಿನವರು ಇಂತಹ ಪುಸ್ತಕಗಳನ್ನು ಪ್ರಕಟಿಸುವಾಗ, ಎತ್ತಿದ ಸಾಹಿತ್ಯಭಾಗಗಳು, ಅವುಗಳ ಟಿಪ್ಪಣಿಯ ಕ್ರಮ ಮೊದಲಾದುವನ್ನು ಬಲು ಚೆನ್ನಾಗಿ ವಿಮರ್ಶಿಸಬೇಕೆಂದೂ ಕೇಳಿಕೊಳ್ಳಲಾಗಿದೆ.

ಕನ್ನಡ ಪಠ್ಯಪುಸ್ತಕದ ವಿಚಾರವಾಗಿ ನಾವು ಪದ್ಯಭಾಗವನ್ನಷ್ಟೆ ಚರ್ಚಿಸಿ ಸುಮ್ಮನಾದೆವು. ಗದ್ಯಭಾಗದ ವಿಚಾರಗಳು ಉಳಿದೇ ಇವೆ. ಅವನ್ನೆತ್ತಿ ಬರೆಯಲೂ ಬೇಸರಗೊಳ್ಳಬೇಕಾಗಿದೆ. ನಮ್ಮಲ್ಲಿ ವಿದ್ಯಾರ್ಥಿಯರ ರಕ್ಷಕರಿಗೆ ಈ ಕಡೆಗೆ ಗಮನವಿಲ್ಲವೆಂದಿಲ್ಲ; ಆದರೆ, ಮದ್ರಾಸಿನ ನಾಮಾಂಕಿತ ಹೆಮ್ಮಕ್ಕಳ ಕಾಲೇಜಿನಲ್ಲೂ ಇನ್ನೂ ಇನ್ನೂ ಹೆಚ್ಚಾಗುತ್ತ ಪ್ರವೇಶ ಅಪೇಕ್ಷಿಸುವ ವಿದ್ಯಾರ್ಥಿನಿಯರಿಗೆ ಕನ್ನಡ ಪಂಡಿತರನ್ನು ನೇಮಿಸಲು ಒಲ್ಲದ ಸರಕಾರಕ್ಕೆ, ಕನ್ನಡದ ಒಂದು ಬಗೆಯ ಹಗೆಯೋ ತಿರಸ್ಕಾರವೋ ಇರುವಂತೆ ತೋರುವುದರಿಂದಲೂ, ಎಷ್ಟೋ ವೇಳೆ ಇದನ್ನೇ ಕುರಿತಾಗಿ ಬರೆದ ಆಕ್ಷೇಪಗಳನ್ನು ಸುಳ್ಳೆಂದು ಉಡಾಯಿಸಿದ ಮಹಾಪುರುಷರ ಮತ್ತು ಆಕ್ಷೇಪವೆತ್ತುವವರನ್ನು ಕ್ರೋಧದೃಷ್ಟಿಯಿಂದ ಕಂಡ ಮಹಾತ್ಮರ ಮನಸ್ಸನ್ನು ಇನ್ನೂ ಉದ್ವಿಗ್ನಗೊಳಿಸಲು ನಾವು ಯತ್ನಿಸುವುದಿಲ್ಲ. ನಮ್ಮ ಸಾಹಿತ್ಯದಲ್ಲಿ ಯೋಗ್ಯತೆ ಇರುವುದಾದರೆ,—ಈಗ ಈ ಪಠ್ಯಪುಸ್ತಕವನ್ನೋದುವ ವಿದ್ಯಾರ್ಥಿಗಳೇ ಮುಂದೆ ಈ ಪುಸ್ತಕವನ್ನು ಕುರಿತು ನಾನಾ ವಿಧವಾಗಿ ತಾವೀಗ ಗಳಿಸುವ ಅಭಿಪ್ರಾಯಗಳನ್ನು ಮೂಲೆಗೆ ತಳ್ಳಿ, ಉತ್ತಮ ಸಾಹಿತ್ಯವನ್ನು ತಾವಾಗಿ ಆರಿಸಿ ಮೆಚ್ಚುವರೆಂದೂ ನನ್ನ ವಿಶ್ವಾಸವಿದೆ. ಹತ್ತಿರದ ಮಹಾಪುರುಷರನ್ನು ನಂಬುವ ಬೋರ್ಡು ಮಾಡುವುದೇನು? ಮೂಲೆಯ ಒಂದು ಜಿಲ್ಲೆಯಲ್ಲಿ ವಿಮರ್ಶಿಸಿದ ಆಕ್ಷೇಪಗಳಿಗೆ ಭೆಲೆ ಕೊಡುವವರಾರು?

FOR YOUR DIAMONDS
ENQUIRE AT
SOWCAR
SRINIVAS RANGA PAI,
SOWCAR MAHAL,
Car Street,
MANGALORE.

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೇಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣಪಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,—

ಲಿವರ್‌ಕ್ಯೂರ್ (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜಮ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ, ಮದ್ರಾಸು. } ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ. } ಹ್ಯಾರಿಸನ್ ರೋಡ್, ಕಲ್ಕತ್ತಾ.

ESTD. 1925.

THE CANARA
Industrial & Banking Syndicate, Ltd.

(INCORPORATED IN BRITISH INDIA.)

Head Office:-U[illegible]l.

Authorised Capital	....	....	Rs. 5,00,000/—
Subscribed Capital	....	....	,, 2,86,500/—
Paid-up Capital	....	....	,, 2,16,500/—
